
ಪುಸ್ತಕ ಪ್ರಪಂಚ

ಮಾರ್ಚಿ ೧೯೯೯



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಸಂಪುಟ ೪೯ ಸಂಚಿಕೆ ೬ ಮಾರ್ಚ್ ೧೯೯೯

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Educa
Council, Mysore-6. Price: Rupees Ten

ಬಿಡಿಪ್ರತಿ: ರೂ. ೧೦

ವಾರ್ಷಿಕ ಚಂದಾ: ರೂ. ೧೦೦

ಆಜೀವ ಸದಸ್ಯತ್ವ ಚಂದಾ:

ವ್ಯಕ್ತಿಗೆ: ರೂ. ೬೦೦

ಸಂಸ್ಥೆಗೆ: ರೂ. ೯೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು–೫೭೦ ೦೦೬

ಭಾರತದ ಪ್ರಥಮ ಸೇನಾನಿಯ ಜನ್ಮ ಶತಮಾನೋತ್ಸವ

ಒಮ್ಮೆ ಕೇಳಿದ್ದು—

'ಸರ್ದಾರ್ ಪಟೇಲರಲ್ಲಿದ್ದ ದೂರದೃಷ್ಟಿ ಮತ್ತು ದೃಢಮನಸ್ಸು ಪ್ರಧಾನಿ ಪಂಡಿತ ನೆಹ್ರೂರಲ್ಲಿದ್ದು, ಯುದ್ಧ ವಿರಾಮ ನಿರೂಪ ನೀಡದೆ, ಕೇವಲ ಮೂರುದಿನ ಮುಂದುವರಿಯಲು ನಮಗೆ ಅವಕಾಶ ನೀಡಿದ್ದರೆ, ಇಡೀ ಕಾಶ್ಮೀರವನ್ನು ಮಾತ್ರವಲ್ಲ, ಪಾಕಿಸ್ತಾನದ ಬಹು ಭಾಗವನ್ನಾಕ್ರಮಿಸಿಕೊಳ್ಳುತ್ತಿದ್ದೆವು. ಆಕ್ರಮಿಸಿಕೊಂಡಿದ್ದರೆ ಅಂದಿನಿಂದ ಇಂದಿನವರೆಗೆ ದೇಶವನ್ನು ಕಾಡುತ್ತಿರುವ ಸಮಸ್ಯೆಗಳು ಎಂದೋ ಮಾಯ ವಾಗುತ್ತಿದ್ದವು. ದೇಶ ವಿಭಜನೆಗೊಂಡ ತರುಣದಲ್ಲಿಯೇ ಪಾಕಿಸ್ತಾನದ ಅಪ್ರಚೋದಿತ ಆಕ್ರಮಣ ಸಂಘಟಿಸಲಾಗಿ,ಹಳೆಯ ನೆನಪುಗಳಿಂದ ದೇಶಾಭಿಮಾನದಿಂದ ತುಡಿಯುತ್ತಿದ್ದ ನಮ್ಮ ಸೈನಿಕರ ವೀರಾವೇಶ ನೈತಿಕ ಧೈರ್ಯ ಛಲ ಆತ್ಮವಿಶ್ವಾಸಗಳು ಅದಮ್ಯವಾಗಿದ್ದು ಅಜೇಯವಾಗಿದ್ದವು. ಅವರ ಉರವಣೆಯನ್ನೆದುರಿಸಲಾರದ ಶತ್ರು ಸೈನಿಕರು ಪಲಾಯನ ಕುಶಲರಾಗಿದ್ದರು. ಅಂದು ನಮ್ಮ ಸೈನಿಕರು ತೋರಿಸಿದ ಸಾಹಸವನ್ನು ನಾನು ಪ್ರತಿದಿನ ಬೆಳಗ್ಗೆ ನೆನೆಸಿಕೊಳ್ಳುತ್ತೇನೆ'

ಮತ್ತೊಮ್ಮೆ ಆಲಿಸಿದ್ದು—

'ತಮ್ಮ ದೇಶವನ್ನು ಪ್ರೀತಿಸದ ಜನ ಮಾನವರಲ್ಲ; ಪ್ರಾಣಿಗಳಿಗಿಂತಲೂ ಕಡೆ. ಬುದ್ಧಿ ವಿವೇಕ ವಿಜ್ಞಾನ ಆಂತರಿಕ ಚಕ್ಷು ಆಲೋಚನಾ ಸಾಮರ್ಥ್ಯ ಕಲ್ಪನಾ ಪ್ರತಿಭೆ ಮೊದಲಾದ ಗುಣಗಳು ಮನುಷ್ಯನಿಗಿರುವಂತೆ ಪ್ರಾಣಿಗಳಿಗಿದೆಯೆ? ಅವು ನಮ್ಮ ತಂದೆ-ತಾಯಿಯರಿಂದ ಗುರುಗಳಿಂದ ಸುತ್ತಮುತ್ತಣ ನಿಸರ್ಗದಿಂದ ನಮಗೆ ಲಭ್ಯವಾಗುತ್ತವೆ. ಆದ್ದರಿಂದ ನಾವು ಅವರನ್ನು ಮರೆಯಬಾರದು, ಪ್ರತಿದಿನ ಅವರನ್ನು ನೆನೆಯಬೇಕು. ನಮ್ಮ ಬದುಕಿಗೆ ನಮ್ಮ ಸ್ಥಿತಿಗತಿ ಪ್ರಗತಿಗಳಿಗೆ, ನಮ್ಮ ಯೋಗ ಭೋಗಗಳಿಗೆ ಕಾರಣವಾದ ದೇಶದ ಹಿತರಕ್ಷಣೆ ನಮ್ಮೆಲ್ಲ ಸಾಧನೆಯ ಗುರಿಯಾಗಬೇಕು. ಸ್ವಾರ್ಥವನ್ನು ಮರೆತು, ದೇಶ ಹಿತಕ್ಕಾಗಿ ನಮ್ಮ ಬದುಕನ್ನೇ ಅರ್ಪಿಸಿಕೊಳ್ಳಬೇಕು. ವಿದ್ಯಾರ್ಥಿ ಜೀವನಾವಧಿ ಯನ್ನು ಸಂಪೂರ್ಣವಾಗಿ ಸಕಲ ಗುಣ ಸಂವರ್ಧನೆಗಾಗಿ ಶಕ್ತಿ ಸಂವರ್ಧನೆಗಾಗಿ ಮುಡಿಪಾಗಿಟ್ಟರೆ ಮಾತ್ರ, ಮುಂದಿನ ಜೀವನ ನಿರ್ವಿಘ್ನವಾಗುತ್ತದೆ.'

'ಹೆಣ್ಣು ಮಕ್ಕಳನ್ನು ಕುರಿತು ಸನ್ನದೊಂದು ವಿಜ್ಞಾಪನೆಯುಂಟು. ಗಂಡು ಮಕ್ಕಳು ಚೇಷ್ಟೆ ಮಾಡುತ್ತಾರೆಂದು ನೀವು ದೂರುವುದುಂಟಷ್ಟೆ. ವಿದ್ಯಾರ್ಥಿದಶೆಯಲ್ಲಿ

ಶೀಲವನ್ನು ಕುದುರಿಸಿಕೊಂಡು, ಜ್ಞಾನ ಸಂಪಾದನೆಯಲ್ಲಿ ಸದಾ ತೊಡಗಿರಬೇಕಾದ್ದು ಅವರ ಕರ್ತವ್ಯ. ಆದರೆ ಅವರನ್ನಾಕರ್ಷಿಸುವಂಥ ಹಾವಭಾವಗಳನ್ನು ಮೈಮಾಟವನ್ನೆತ್ತಿ ತೋರಿಸುವಂಥ ವೇಷಭೂಷಣಗಳನ್ನು ಪ್ರದರ್ಶಿಸದೆ, ಗಂಭೀರವಾಗಿರುವುದಾದರೆ, ಎರಡು ಕಡೆಯುವರಿಗೂ ಕಾಟ ತಪ್ಪುತ್ತದೆ'.

—ನಾನೊಮ್ಮೆ ಮಡಿಕೇರಿಗೆ ಹೋಗಿದ್ದಾಗ ಪೂರ್ವ ಸೂಚನೆಯಿಲ್ಲದೆ ಕೆ. ಎಂ. ಕಾರ್ಯಪ್ಪನವರನ್ನು ಭೇಟಿ ಮಾಡಿ, ನನ್ನ ಗೌರವ ಕುಸುಮವನ್ನು ಸಲ್ಲಿಸುವ ಸಲು ವಾಗಿ ಅವರ ಮನೆ ರೋಷನಾರ್‌ಗೆ ಧಾವಿಸಿದ್ದೆ. ಅವರು ಅದೆ ತಾನೆ ಹೊರಗೆ ಹೊರಟಿದ್ದರು. ನನ್ನ ಪರಿಚಯ ಹೇಳಿಕೊಳ್ಳುತ್ತಿದ್ದಂತೆ, 'ಗೋಣಿಕೊಪ್ಪಲು ಕಾಲೇಜಿಗೆ ಭೇಟಿ ಕೊಟ್ಟಿದ್ದಾಗ ಕುಟ್ಟದ ಮುತ್ತಣ್ಣ ನಿಮ್ಮ ವಿಷಯ ಹೇಳಿದ್ದರು. ನೀವು ಬಂದಾಗ ನಾನು ಹೊರಗೆ ಹೊರಟದ್ದು ಶಿಷ್ಟ ಲಕ್ಷಣವಲ್ಲ. ಆದರೆ ಅನಿವಾರ್ಯ. ಮೊದಲೆ ನಿಗದಿಯಾಗಿದ್ದ ಕಾರ್ಯಕ್ರಮವನ್ನು ಬಿಡುವಂತಿಲ್ಲ. ನಾನು ಸೈನಿಕ. ಒಂದು ನಿಮಿಷವೂ ತಡವಾಗಿ ಹೋಗಲಾರೆ. ಕ್ಷಮಿಸಿ. ಇನ್ನೊಮ್ಮೆ ತಿಳಿಸಿ ಬನ್ನಿ' ಎಂದು ಹಿಡಿದ ಕೈಬಿಡದೆ ಕುಲುಕುತ್ತ, ಮುಗುಳುನಗೆ ಸೂಸುತ್ತ, ಕಣ್ಣಲ್ಲಿ ಸ್ನೇಹವನ್ನು ಮುಕ್ಕಳಿಸುತ್ತ ನುಡಿದರು. ಆ ಭೀಮ ಸುಂದರ ವಿಗ್ರಹವನ್ನು ಕಣ್ಣಲ್ಲಿ ತುಂಬಿಕೊಂಡು, ನಿದಾನವಾಗಿ ಪಲುಕಿಸುತ್ತಿದ್ದ ಮಾತುಗಳನ್ನು ಕಿವಿಯಲ್ಲಿ ಸೆರೆಹಿಡಿದುಕೊಂಡು, ಭಾವ ಪರವಶನಾಗಿ ಕೆಲವು ಕ್ಷಣ ಅವಕ್ಕಾಗಿ ನಿಂತಿದ್ದೆ. 'ತಪ್ಪು ನನ್ನದು ಸಾರ್' 'ಮೊದಲೆ ತಿಳಿಸದೆ ತಮ್ಮಂಥ ಶಿಸ್ತಿಗೆ ಹೆಸರಾದ ಮಹಾವ್ಯಕ್ತಿಗೆ ನೋವುಂಟುಮಾಡಿದ ಅಪರಾಧ ನನ್ನದು. ಈ ಕಡೆಗೆ ಬಂದಾಗ ತಿಳಿಸಿ ಬರುತ್ತೇನೆ' ಎಂದು ರೋಮಾಂಚಕಾರಕವಾ ಬಿಳಿಯ ದಪ್ಪ ಚೆಲುವು ಕೈಗಳ ಮೃದು ಹಿಡಿತದಿಂದ ಬಿಡಿಸಿಕೊಂಡು ಹೊರಗೆ ಬಂ ಅವರು ಹಿಂದೆಯೇ ಬಂದು ಕಾರು ಹತ್ತಿಸಿ, ಶುಭಾಶಯ ಕೋರಿ ಮರಳಿದರು ಸ್ವತಂತ್ರ ಭಾರತದ ಪ್ರಪ್ರಥಮ ಮಹಾ ಸೇನಾನಿ, ಕಾಶ್ಮೀರ ವಿಜಯಿ, ಅಪ್ರತಿ ವೀರ, ಅರಿಭಯಂಕರ, ಕೊಡಗು ಕರ್ನಾಟಕದ ಧೀರ ಪುತ್ರನನ್ನು ಸಂದರ್ಶಿಸಿ ಅಮೃತ ಕ್ಷಣಗಳನ್ನು ಮನಸ್ಸಿನಲ್ಲಿ ಮೆಲುಕು ಹಾಕುತ್ತ ಮೈಸೂರು ತಲುಪಿದೆ.

ಆ ಮೇಲೊಂದು ದಿನ ಮೈಸೂರಿಗೆ ಬಂದಿದ್ದ ಅವರು ನನ್ನ ಆಪ್ತಕಾರ್ಯದರ್ಶಿ ಫೋನು ಮಾಡಿ, ನಾನು ಊರಲ್ಲಿದ್ದುದನ್ನು ತಿಳಿದುಕೊಂಡು, ನನ್ನ ಕಚೇರಿಗೆ ನ ವಾಗಿ ಬಂದರು. ಅವರ ಧೀರ ಗಂಭೀರ ಗತಿಯ ಗತ್ತನ್ನು ನೋಡಿಯೆ ದ್ವಾರಪಾ ಕೈಮುಗಿದು ಅವರನ್ನು ಒಳಗೆ ಬಿಡುತ್ತಾನೆ. ಕೆಲವರ್ಷ ನೌಕರಿಯಲ್ಲಿದ್ದು ನಿವೃತ್ತರಾ ಹಂಗಾಮಿ ಸೇನಾನಿಯಲ್ಲ ಅವರು; ಅವರು ಹುಟ್ಟು ಸೇನಾನಿ, ಚಿರಸೇನಾನಿ ನಿಲ ಭಂಗಿಯಲ್ಲಿ ಗತ್ತು, ಮುಖದಲ್ಲಿ ತೇಜಸ್ಸು, ಅಧಿಕಾರದ ವಾಸನೆಯಿಲ್ಲದ ನಿರಹಂಭಾ ಮಾತಿನಲ್ಲಿ ನಯ, ಇಂಥ ವ್ಯಕ್ತಿಗೆ ಯಾರಾದರೂ ಅನೈಚ್ಛಿಕವಾಗಿಯೇ ತಲೆಬಾಗಬೇ 'ನಾನು ಊರಿಗೆ ಹೊರಟಿದ್ದೇನೆ. ನಾನಿಲ್ಲಿ ಕುಳಿತು ನಿಮ್ಮ ವೇಳೆ ಮತ್ತು ಕೆಲಸಗಳ

ಹಾಳುಮಾಡಲಾರೆ. ನಿಮ್ಮನ್ನು ನನ್ನ ಮನೆಗೆ ಆಹ್ವಾನಿಸಲು ಬಂದಿದ್ದೇನೆ. ಆ ಕಡೆ ಬಂದಾಗ ಮಧ್ಯಾಹ್ನದ ಭೋಜನಕ್ಕೆ ಬನ್ನಿ. ಮೊದಲೇ ಫೋನು ಮಾಡಿ' ಎಂದವರೇ ಕಾಫಿಗೂ ಕಾಯದೆ ಹೊರಟೇ ಹೋದರು. ನಿಜ. ನಾವು ವೇಳೆಯನ್ನು ಹಾಳು ಮಾಡದೆ ದುಡಿದದ್ದಾದರೆ, ಜಾತೀಯಮತೀಯರಾಜಕೀಯ ಕಲಹಗಳಿಗೆ ಅವಕಾಶವೇ ಆಗುವುದಿಲ್ಲ, ದೇಶದಲ್ಲಿ ಸಂಪತ್ತು ಹೆಚ್ಚೀತು, ಶಾಂತಿ ನೆಲಸೀತು; ನಮ್ಮಲ್ಲಿಯ ಸ್ವಾರ್ಥತಾಪತಿ ಪಿತೂರಿ ಕಲಹಗಳಿಗೆ ವೈಗಳ್ಳತನ ವೇಳೆಗಳ್ಳತನಗಳೇ ಮೂಲವೆಂದು ನಾನು ಬಹು ಹೊತ್ತು ಮನಸ್ಸಿನಲ್ಲಿಯೆ ಗುನುಗಿಕೊಳ್ಳುತ್ತಿದ್ದೆ.

ಪ್ರಾರಂಭದಲ್ಲಿ ಸೂಚಿಸಿದ ಆ 'ಒಮ್ಮೆ' ಯೂ ಕೂಡಿ ಬಂತು. ನಿಗದಿತ ಸಮಯಕ್ಕೆ ಸರಿಯಾಗಿ ಸೇನಾನಿಗಳು ನನಗಾಗಿ ಕಾಯುತ್ತಿದ್ದರು. ಅವರ ನಡೆನುಡಿಗಳಲ್ಲೆಂತೊ ಅಂತೆಯೇ ಮನೆಯಲ್ಲಿಯೂ ಒಪ್ಪಓರಣ ಶಿಸ್ತುಗಳು ಎದ್ದು ಕಾಣುತ್ತಿದ್ದುವು. ಆಗ ಮನೆಯಲ್ಲಿದ್ದವರು ಅವರು ಮತ್ತು ಅಡುಗೆಯವ ಮಾತ್ರ. ಪಾನಕ ಕುಡಿದನಂತರ ತಮ್ಮ ತಾಯಿ ತಂದೆಯರ ಮತ್ತು ಮಕ್ಕಳ ಭಾವಚಿತ್ರಗಳನ್ನು ತೋರಿದರು. ೧೯೪೮ ರಲ್ಲಿ ನಡೆದ ಪಾಕಿಸ್ತಾನೀ ಆಕ್ರಮಣದ ಕತೆಯನ್ನು ವಿವರಿಸಿದರು. ಬೋಧನೆ ಕಲಿಕೆಗಳೆರಡೇ ವಿಶ್ವವಿದ್ಯಾನಿಲಯ ಗುರಿಯಾಗಬಾರದು, ಶಿಸ್ತು ಶೀಲಗಳ ಕೃಷಿಗೆ ಆದ್ಯಗಮನ ಕೊಡಬೇಕು. ಈ ದಿಕ್ಕಿನಲ್ಲಿ ಪ್ರಾಧ್ಯಾಪಕರ ಜವಾಬ್ದಾರಿ ಮಹತ್ತರವಾದದ್ದು. ಪ್ರತಿ ರಾಜ್ಯದ ಎರಡು ಮೂರು ವಿಶ್ವವಿದ್ಯಾಗಳಲ್ಲಾದರೂ ಸೈನಿಕ ಶಿಕ್ಷಣವನ್ನು ಐಚ್ಛಿಕವಾಗಿ ಪ್ರಾರಂಭಿಸಬೇಕು. ಕಾರ್ಯನಿರತ ಸೈನ್ಯಕ್ಕೆ ಬೆಂಬಲವಾಗಿ ಸಿವಿಲ್ ಸೈನ್ಯ ಸಿದ್ಧವಾಗಿರಬೇಕು. ಎಲ್ಲ ಹುಡುಗ ಹುಡುಗಿಯರೂ ಒಂದಲ್ಲ ಒಂದು ಆಟದಲ್ಲಿ ಪರಿಣತಿ ಪಡೆಯುವಂತೆ ಏರ್ಪಾಡು ಮಾಡಬೇಕು. ಟ್ರಫಾಲ್‌ಗರ್ ರಣಾಂಗಣದ ವಿಜಯ ಮೊದಲೇ ಈಟನ್ ಕ್ರೀಡಾಂಗಣದಲ್ಲಿ ನಿರ್ಧಾರವಾಗಿತ್ತೆಂಬ ನಾಣ್ಣುಡಿಯುಂಟು. ಶಿಸ್ತು ಸ್ಥೈರ್ಯ ಧೈರ್ಯ ಶೌರ್ಯ ಮೊದಲಾದ ಕಲ್ಯಾಣ ಗುಣಗಳ ವರ್ಧನೆಗೆ ಕ್ರೀಡಾಂಗಣದ ಬಳಕೆ ಅನಿವಾರ್ಯ. ಈ ಧಾಟಿಯಲ್ಲಿ ಅವರ ಮಾತು ಸಾಗಿತು. ನನ್ನ ಮಾತು ಮಿತವಾಗಿತ್ತು. ಕೊಡವರ ಮನೆಯ ಭೋಜನದ ವೈಭವನ್ನು ಕೇಳಬೇಕೆ? ಅವರಿಗಾಗ ಎಪ್ಪತ್ತೆರಡು ವರ್ಷವಾಗಿತ್ತೆಂದು ತೋರುತ್ತದೆ. ಆದರೂ ಅವರ ಮಾತಿನಲ್ಲಿ ಚರ್ಯೆಯಲ್ಲಿ ತಾರುಣ್ಯದ ಉತ್ಸಾಹ ಪುಟಿಯುತ್ತಿತ್ತು. ಊಟವಾದನಂತರ ಸೇನಾನಿಗಳಿಗೂ ವಿಶ್ರಾಂತಿಗೆ ಅವಕಾಶ ಮಾಡಿಕೊಟ್ಟು ನಾನು ಸುದರ್ಶನ ಅತಿಥಿಗೃಹಕ್ಕೆ ತೆರಳಿದೆ. ನಮ್ಮ ಮಾತಿನ ಭರದಲ್ಲಿ ನನ್ನ ವಾಹನದ ಚಾಲಕನ ಊಟೋಪಚಾರವನ್ನು ಅವರು ಮರೆಯಲಿಲ್ಲ.

'ಮತ್ತೊಮ್ಮೆ' ಹೌದು–ಮತ್ತೊಮ್ಮೆ ನಾನವರನ್ನು ಭೇಟಿ ಮಾಡಿದ್ದು ಪೊಣಿಕೊಪ್ಪಲಿನ ಕಾಲೇಜಿನಲ್ಲಿ. ಗ್ರಂಥಾಲಯದ, ಇಲ್ಲವೇ ಸೈನಿಕ ಶಿಕ್ಷಣ ತರಗತಿಯ ಉದ್ಘಾಟನೆಗಾಗಿ ಅವರು ಬಂದಿದ್ದರು. ನಾನು ಅಧ್ಯಕ್ಷತೆ ವಹಿಸಿದ್ದೆ.

ಇಂಗ್ಲಿಷ್ ಕನ್ನಡ ಎರಡು ಭಾಷೆಗಳನ್ನು ಬೆರೆಸಿ ತಡವರಿಸದೆ ಸುಲಲಿತವಾಗಿ ಸುಸಂಗತವಾಗಿ ಭಾಷಣ ಮಾಡುತ್ತಿದ್ದರು. ಶಿಸ್ತು ಸಂಯಮ ಜ್ಞಾನದ ಮಹತ್ವವೇ ಅವರ ಭಾಷಣದ ವಿಷಯವಾಗಿತ್ತು. ಅನುಭವ ಪ್ರಧಾನವಾದ ಅವರ ಭಾಷಣದಲ್ಲಿ ದೇಶಪ್ರೇಮ ಜೀವನೋತ್ಸಾಹಗಳು ನೆರೆಯೇರುತ್ತಿದ್ದುವು; ಮಾತು ಮಾತಿನಲ್ಲಿ ಪ್ರಾಮಾಣಿಕತೆ ಕಾರಂಜಿಸುತ್ತಿತ್ತು.

ಅಂತರರಾಷ್ಟ್ರೀಯ ಖ್ಯಾತಿಯ ಮಹಾನ್ ಯೋಧ, ಶಿಸ್ತಿನ ಸಿಪಾಯಿ, ಅಪ್ಪಟ ದೇಶಾಭಿಮಾನಿ ಕಾರ್ಯಪ್ಪನವರಿಗೆ ೧೯೦೦ ನೆಯ ಸಂವತ್ಸರದ ಜನವರಿ ೨೮ ರಂದು ಜನ್ಮವಿತ್ತವರು ಕೊಡಂದೇರ ಮಾದಪ್ಪನವರು. ಅವರ ಆರು ಮಕ್ಕಳಲ್ಲಿ ಇವರು ಎರಡನೆಯವರು. ಕೊಡಗಿನ ಶನಿವಾರಸಂತೆ ಅವರು ಹುಟ್ಟಿದೂರು. ಶಿಸ್ತುಗಾರ ತಂದೆಯ ಎಚ್ಚರಗಣ್ಣಿನ ಬೆಳಕಿನಲ್ಲಿ, ಮಕ್ಕಳಿಗೆ ಅಮ್ಮಯ್ಯ ಆಗಿದ್ದ ತಾಯಿಯ ಅಕ್ಕರೆಯ ತಂಗಾಳಿಯಲ್ಲಿ ಬೆಳೆದ ಕಾರ್ಯಪ್ಪನವರ ಚಿಕ್ಕಂದಿನ ಚಟುವಟಿಕೆಗಳು ಅವರ ಆಟಪಾಟಗಳು, ಹುರುಪು ಹುಮ್ಮಸ್ಸುಗಳು ಅವರ ಮುಂದಿನ ಏಳ್ಗಿಗೆ ಪೀಠಿ ಗಳಂತಿದ್ದುವು. ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ಪ್ರಾಥಶಾಲಾ ಶಿಕ್ಷಣವನ್ನು ಮುಗಿಸಿದ ನಂತರ ಅವರು ಮುಂದಿನ ವಿದ್ಯಾಭ್ಯಾಸಕ್ಕೆ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜು ಸೇರುತ್ತಾರೆ. ಅವರು ಅಲ್ಲಿರುವಾಗಲೇ ತಮ್ಮ ಹದಿನೆಂಟನೆಯ ವಯಸ್ಸಿ ನಲ್ಲಿ ಸಿಮ್ಲಾದ ಸೈನಿಕ ಆಯ್ಕೆ ಸಮಿತಿಯ ಮುಂದೆ ಹಾಜರಾಗಿ, ಆಯ್ಕೆಯಾಗ ತ್ತಾರೆ. ಉನ್ನತ ಗಾತ್ರದ, ಪೀನಭುಜದ, ವಿಶಾಲವಕ್ಷದ, ತೇಜಃಪುಂಜ ನೇತ್ರಗಳ ಸೌಷ್ಮವ ದೇಹದ ವ್ಯಕ್ತಿಯನ್ನು ಕಂಡಾಕ್ಷಣವೆ ಸಮಿತಿಯ ಸದಸ್ಯರ ಶರೀರದ ಪುಲಕಾಂಕುರವಾಗಿರಬೇಕು. ಸಂದರ್ಶನಕ್ಕೆ ಬಂದ ತರುಣರಲ್ಲಿ ಅವರೇ ಎದ್ದು ವ್ಯಕ್ತಿ ಯಾಗಿರಬೇಕು. ತರಬೇತಿ ನಡೆಯುತ್ತಿದ್ದಂತೆಯೇ ಪ್ರಥಮ ಮಹಾಯುದ್ಧದ ಅವ ಯಲ್ಲಿ ಮೆಸೊಪೊಟೇಮಿಯಾ, ಇರಾಕ್, ಇರಾನ್, ಫ್ರಾನ್ಸ್, ಅಮೆರಿಕಾ, ಚೀ ಗಳಿಗೆ ಭೇಟಿ ಕೊಟ್ಟು ಯುದ್ಧದ ರುಚಿಯನ್ನು ಸವಿದದ್ದುಂಟು.

ಸೈನ್ಯ ಇಲಾಖೆಯಲ್ಲಿ ಕಿಂಗ್ಸ್‌ಕಮಿಷನ್ ಎನ್ನುವುದು ಪ್ರತಿಷ್ಠೆಯ ಪದವಿ ಐಸಿಎಸ್ ಇದ್ದಹಾಗೆ. ಅದರಲ್ಲಿ ಭಾರತೀಯರಿಗೆ ಪ್ರವೇಶವಿರಲಿಲ್ಲ. ಪ್ರಥಮ ಮಹಾ ಯುದ್ಧದ ನಂತರ ರಾಷ್ಟ್ರನಾಯಕರ ಒತ್ತಾಯದಿಂದಾಗಿ ಭಾರತೀಯರಿಗ ಪ್ರವೇಶಾವಕಾಶ ದೊರೆಯುತ್ತದೆ. ೧೯೧೯ ರಲ್ಲಿ ಮೊದಲ ತಂಡದಲ್ಲಿಯೇ ಅವ ಆಯ್ಕೆಗೊಂಡು, ಇಂದೂರಿನಲ್ಲಿ ಕಠಿನ ಶ್ರಮದ ತರಬೇತಿ ಪಡೆಯುತ್ತಾ ಭಾರತೀಯರ ಸಾಮರ್ಥ್ಯದ ಬಗ್ಗೆ ಸಂದೇಹ ಹೊಂದಿದ್ದ ಆಂಗ್ಲರಿಗೆ ಸವಾಲೆನ್ನುವಂ ಆಂಗ್ಲ ಯೋಧರಿಗೆ ಕಡೆಯಿಲ್ಲವೆನ್ನುವಂತೆ, ಅವರಿಗೂ ಈರ್ಷ್ಯೆ ಮೂಡುವ ರೀ ಯಲ್ಲಿ ಕಾರ್ಯಪ್ಪನವರು ಚಾಕಚಕ್ಯತೆಯನ್ನು, ಚುರುಕುತನವನ್ನು, ಕೌಶಲವನ್ನು ಸಾಹಸವನ್ನು ಮೆರೆಯುತ್ತಾರೆ. ಆಂಗ್ಲ ಯೋಧರಿಗೆ ಮಾತ್ರವೇ ಮೀಸಲಾಗಿ

ಅಡ್ ಜೂಟೆಂಟ್ ಪದವಿಗೆ ನೇಮಕಗೊಂಡಾಗ ಮೇಲಣ ಅಧಿಕಾರಿಗಳಿಗೆ ಮೆಚ್ಚುಗೆ ಯಾಗುವಂತೆ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಾರೆ. ತಾವು ಗಳಿಸಿದ ಯೋಗ್ಯತೆ ಯಿಂದಾಗಿ ಅವರು ಬೇಗ ಬೇಗನೆ ಅಧಿಕಾರದ ಮೆಟ್ಟಿಲುಗಳನ್ನೇರಿದ್ದಲ್ಲದೆ, ಎಲ್ಲ ದರ್ಜೆಯ ಯೋಧರಿಗೆ ಪ್ರಿಯರಾಗುತ್ತಾರೆ, ಗೌರವಾನ್ವಿತರಾಗುತ್ತಾರೆ. ಯುದ್ಧ ವಿರಾಮ ಕಾಲದಲ್ಲಿ ಸೈನಿಕರಿಗೆ ತರಬೇತಿ ನೀಡುವಾಗ, ಯುದ್ಧಕಾಲದಲ್ಲಿ ಆಗಾಗ್ಗೆ ಮುಂಚೂಣಿಗೆ ಹೋಗಿ ಅವರನ್ನು ಹುರಿದುಂಬಿಸುವಾಗ ಸೈನಿಕರು ಅವರಲ್ಲಿ ಆತ್ಮೀಯ ಬಂಧುವಿನ ವಾತ್ಸಲ್ಯವನ್ನು ಕಾಣುತ್ತಾರೆ. ಶರೀರಕ್ಕಿಂತ, ಸ್ವಾರ್ಥಕ್ಕಿಂತ ಮಿಗಿಲಾಗಿ ವೃತ್ತಿಗೌರವವನ್ನು ರಾಷ್ಟ್ರಗೌರವವನ್ನು ರಕ್ಷಿಸಬೇಕೆಂದು ಸೇನಾನಿಯವರು ಅವರಿಗೆ ಕಲಿಸಿಕೊಡುತ್ತಾರೆ. ಕಾರ್ಯಪ್ಪ ಎಂಬ ಹೆಸರೇ ಅವರಿಗೆ ಚೈತನ್ಯದಾಯಿ ಶಕ್ತಿಯಾಗು ತ್ತದೆ.

ಸೈನ್ಯದ ಎಲ್ಲ ಇಲಾಖೆಗಳಲ್ಲಿ ದಕ್ಷತೆಯಿಂದ ದುಡಿದು ಹೆಸರು ಗಳಿಸುತ್ತಾರೆ. ೧೯೪೪ ರಲ್ಲಿ ಸೈನ್ಯ ಪುನರ್ವ್ಯವಸ್ಥಾ ಸಮಿತಿಯ ಸದಸ್ಯರಾಗಿ ಯುದ್ಧಾನಂತರದ ಸೈನ್ಯದ ಸ್ವರೂಪ ಗಾತ್ರ ರಚನೆ ಹೇಗಿರಬೇಕೆಂದು ತೀರ್ಮಾನಿಸುವಲ್ಲಿ ಪ್ರಧಾನಪಾತ್ರ ವಹಿಸುತ್ತಾರೆ. ೧೯೪೬ ರಲ್ಲಿ ಬ್ರಿಗೇಡಿಯರ್ ಆಗಿ ಬಡ್ತಿ ಪಡೆದಾಗ, ಮುಂದಿನ ಪಾಕಿಸ್ತಾನದ ಅಧ್ಯಕ್ಷ ಅಯೂಬ್ ಖಾನ್ ಅವರ ಅಧೀನಾಧಿಕಾರಿಯಾಗಿದ್ದನೆಂಬುದು ಗಮನಿಸಬೇಕಾದ ಸಂಗತಿ. ೧೯೪೭ ರಲ್ಲಿ ಇಂಗ್ಲೆಂಡಿನ ಪ್ರತಿಷ್ಠಿತ ಮಿಲಿಟರಿ ಕಾಲೇಜಿ ನಲ್ಲಿ ತರಬೇತಿ ಪಡೆದದ್ದೂ ಉಂಟು. ದೇಶ ವಿಭಜನೆಗೊಂಡು, ಅವರು ಸೈನ್ಯದ ಮುಖ್ಯಸ್ಥರಾದಾಗ ಈ ಸಂಚಿತಾನುಭವಗಳೆಲ್ಲ ಅವರ ನೆರವಿಗೊದಗುತ್ತವೆ. ಸೈನ್ಯದ ಆಸ್ತಿಯನ್ನು ಹಂಚಿಕೊಳ್ಳುವಾಗ ಶಾಂತಿಗೆ ಭಂಗವಾಗದಂತೆ ಅವರು ನಿರ್ವಹಿಸಿದ ಪಾತ್ರ ಜಗತ್ತೇ ಮೆಚ್ಚುವಂಥದು. ಅಂದಿನ ಗೊಂದಲದಲ್ಲಿ ಸೈನ್ಯದೊಳಗೆ ರಾಜಕೀಯ ಪ್ರವೇಶವಾಗದಂತೆ ಸತ್ಸಂಪ್ರದಾಯವನ್ನು ಹಾಕಿಕೊಟ್ಟ ಯಶಸ್ಸು ಅವರಿಗೆ ಸಲ್ಲಬೇಕು.

೧೯೪೮ ರಲ್ಲಿ ಪಾಕಿಸ್ತಾನದ ಸೈನ್ಯ ಕಾಶ್ಮೀರದ ಮೇಲೆ ಧಾಳಿ ಮಾಡಿದಾಗ, ಕಾರ್ಯಪ್ಪನವರು ಯುದ್ಧದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು, ತಮ್ಮ ಶಕ್ತಿ ಸಮಸ್ತವನ್ನು ಒಗ್ಗೂಡಿಸಿಕೊಂಡು, ಸೈನ್ಯವನ್ನು ನಡೆಸಿ, ಎದುರಾಳಿ ಗಳಿಗೆ ಮಣ್ಣು ತಿನ್ನಿಸಿ, ವಿಜಯ ಡಿಂಡಿಮವನ್ನು ಬಾರಿಸಿದಾಗ, ಇದ್ದಕ್ಕಿದ್ದ ಹಾಗೆ ಇತರ ರಾಷ್ಟ್ರಗಳ ದೃಷ್ಟಿಯಲ್ಲಿ ಭಾರತದ ಪ್ರತಿಷ್ಠೆ ಮುಗಿಲಿಗೇರುತ್ತದೆ. ದೇಶದಲ್ಲಿ ಅದೆಂಥ ಕಷ್ಟಕಾಲ! ಆಡಳಿತ ವ್ಯವಸ್ಥೆ ದೋಷಮುಕ್ತವಾಗಿಲ್ಲ; ರಾಜರ ಹಾವಳಿ ತಪ್ಪಿಲ್ಲ; ಪ್ರಧಾನಿ ಮೊದಲುಗೊಂಡು ಯಾವ ನಾಯಕನಿಗೂ ಯುದ್ಧದ ಅಥವಾ ಸೈನ್ಯಾಡಳಿತದ ಅನುಭವವಿಲ್ಲ. ಅಂಥ ವಿಪತ್ ಸಮಯದಲ್ಲಿ ಕಾರ್ಯಪ್ಪನವರೇ ದೇಶಕ್ಕೆ ದಿಕ್ಕು, ರಕ್ಷೆ. ಅಂದಿನ ದಿನಗಳ ಹಿನ್ನೆಲೆಯಲ್ಲಿ ಅವರ ಸಾಧನೆ ಸಿದ್ಧಿಗಳನ್ನು

ಅಳಿದಾಗ ಇವತ್ತಿಗೂ ಅವರ ಅದ್ವಿತೀಯ ಐತಿಹಾಸಿಕ ವ್ಯಕ್ತಿತ್ವದ ಮಹೋನ್ನತಿ ಮನವರಿಕೆಯಾಗುತ್ತದೆ. ಯುದ್ಧ ವಿರಾಮದ ಕತೆ ಇದೀಗ ಐತಿಹಾಸಿಕ ದಾಖಲೆಯಾಗುಳಿದಿದೆ.

೧೯೫೩ರಲ್ಲಿ ಕಾರ್ಯಪ್ಪನವರು ಸೈನ್ಯದಿಂದ ನಿವೃತ್ತರಾಗುತ್ತಾರೆ. ಆಮೇಲೆ ಮೂರು ವರ್ಷ, ೧೯೫೬ರವರೆಗೆ ಆಸ್ಟ್ರೇಲಿಯ–ನ್ಯೂಜಿಲೆಂಡ್‌ಗಳಲ್ಲಿ ಭಾರತದ ರಾಯಭಾರಿಯಾಗಿ, ಅಲ್ಲಿಯ ಜನರ, ಅಧಿಕಾರಿಗಳ, ರಾಣಿಯ ಪ್ರೀತಿ ಗೌರವಗಳನ್ನು ಸಂಪಾದಿಸುತ್ತಾರೆ. ಆಸ್ಟ್ರೇಲಿಯಾದ ಗೌರ್ನರ್ ಜನರಲ್ ಆಗುವ ಸುದ್ದಿಯೂ ಹಬ್ಬುತ್ತದೆ. ನೆಹ್ರೂ ಅವರ ವಿರೋಧದಿಂದಾಗಿ ಸಲ್ಲುತ್ತಿದ್ದ ಮಹಾ ಗೌರವದಿಂದ ಭಾರತ ವಂಚಿತವಾಗುತ್ತದೆ. ಆಸ್ಟ್ರೇಲಿಯಾದಿಂದ ವಾಪಸಾದ ಮೇಲೆ ಅವರ ಸೇವೆ, ಅವರ ಅನುಭವದ ಫಲ ಯಾರಿಗೂ ಬೇಡವಾಗಿ, ರೋಷನಾರ್‌ನಲ್ಲಿ ನೆಲಸುತ್ತಾರೆ. ೧೯೬೨ರಲ್ಲಿ ಚೀನಾ ಇಂಡಿಯಾದ ಮೇಲೆ ಧಾಳಿ ಮಾಡಿದಾಗ ಅವರು ಸೈನ್ಯದ ಮುಂಚೂಣಿಗೆ ಹೋಗಬೇಕೆಂದು ಅವರ ಚೇತನ ಚಡಪಡಿಸುತ್ತದೆ. ಸೈನಿಕರ ಆಯ್ಕೆಯ ಸಮಯದಲ್ಲಿ ಅವರೂ ಅಭ್ಯರ್ಥಿಗಳ ಸಾಲಿನಲ್ಲಿ ನಿಲ್ಲುತ್ತಾರೆ. ಸ್ವಯಂಸೇವಕನಾಗಿ ಸೇವೆ ಸಲ್ಲಿಸಲು ಸಿದ್ಧರಾಗುತ್ತಾರೆ. ಆ ಹೊತ್ತಿಗಾಗಲೇ ಒಂದು ಯುದ್ಧವನ್ನು ಗೆದ್ದಿದ್ದ, ರಾಷ್ಟ್ರದ ಸೈನ್ಯವನ್ನು ರೂಪಿಸಿದ್ದ, ದೇಶಕ್ಕಾಗಿ ಪ್ರಾಣವನ್ನರ್ಪಿಸಲು ಸಹ ಸಿದ್ಧವಾಗಿದ್ದ ಆ ಮಹಾ ಯೋಧರ ನಿಸ್ಪೃಹ ಸೇವೆ ಪೂರ್ವಗ್ರಹ ಪೀಡಿತ ನಾಯಕರಿಗೆ ಬೇಡವಾಗುತ್ತದೆ.

ಚೀನಾದ ಕೈಯಲ್ಲಿ ಭಾರತ ಸೋಲುಂಡಾಗ ಕಾರ್ಯಪ್ಪನವರು ಅನುಭವಿಸಿದ ಯಾತನೆ ಅವರ್ಣನೀಯ. ಭೇಟಿಯಾದಾಗಲೆಲ್ಲ ಆ ವಿಷಯವನ್ನೆತ್ತಿಕೊಂಡು ಎದೆಯ ಬೇಗುದಿಯನ್ನು ತೋಡಿಕೊಳ್ಳುತ್ತಿದ್ದರು. ಶಾಲೆಯೋ ಕಾಲೇಜೋ ರೋಟರಿ ಕ್ಲಬ್ಬೋ ಸೈನಿಕರ ಸಂಘಗಳೊ, ಯಾರು ಕರೆದರೂ ಹೋಗಿ, ದೇಶದ ಏಕತೆ ಹಾಗೂ ಅಭ್ಯುದಯದ ಬಗ್ಗೆ ಉಪದೇಶ ನೀಡುತ್ತಿದ್ದರು. ೧೯೬೫ರಲ್ಲಿ ಅವರ ಮಗ ಕೆ. ಸಿ. ಕಾರ್ಯಪ್ಪ ಯುದ್ಧ ಖೈದಿಯಾಗಿ ಪಾಕಿಸ್ತಾನಕ್ಕೆ ಹೋದಾಗ, ಹಿಂದೊಮ್ಮೆ ಹಿರಿಯ ಕಾರ್ಯಪ್ಪನವರ ಕೆಳಗಣ ಅಧಿಕಾರಿಯಾಗಿದ್ದು, ಆ ಸಮಯದಲ್ಲಿ ಅಧ್ಯಕ್ಷರಾಗಿದ್ದ ಆಯೂಬ್ ಖಾನರು ಅವರನ್ನು ಬಿಡುಗಡೆ ಮಾಡಿ ವಾಪಸು ಭಾರತಕ್ಕೆ ಕಳಿಸಲು ಪ್ರಯತ್ನಿಸುತ್ತಾರೆ. ಆ ದಾಕ್ಷಿಣ್ಯವನ್ನು ಕಿರಿಯ ಕಾರ್ಯಪ್ಪ ನಿರಾಕರಿಸುತ್ತಾರೆ. ತಂದೆಗೆ ತಕ್ಕ ಮಗ!

ನಾಡಿನಲ್ಲಿ ಸಾಂಕ್ರಾಮಿಕರೋಗದಂತೆ ಹರಡುತ್ತಿದ್ದ ಭ್ರಷ್ಟಾಚಾರವನ್ನು ಸಹಿಸಲಾರದೆ, ಸಂಸದ್ ಸದಸ್ಯರಾಗಿ ಅದನ್ನು ತೊಡೆಯಲು ಪ್ರಯತ್ನಿಸುವ ಕಾತರತೆಯಿಂದ, ಅವರು ಮುಂಬೈ ಕ್ಷೇತ್ರವೊಂದರಲ್ಲಿ ನಿಂತು ಸೋಲುತ್ತಾರೆ. ಅಂಥ ಪರಿಸ್ಥಿತಿಗೆ ಆ ಮಹಾವ್ಯಕ್ತಿಯನ್ನು ನೂಕುವುದಕ್ಕೆ ಬದಲಾಗಿ, ರಾಜ್ಯ ಪರಿಷತ್ತಿಗೆ ಕೇಂದ್ರ ಸರ್ಕಾರ ನಾಮಕರಣ ಮಾಡಬಹುದಿತ್ತು. ಮಹತ್ತನ್ನು ಗುರುತಿಸುವ ಶಕ್ತಿ ಮಹತ್ತಿಗೆ ಮಾತ್ರ ಶಕ್ಯ. ಭ್ರಷ್ಟಾಚಾರ ನಿರ್ಮೂಲನದ ದೃಷ್ಟಿಯಿಂದ ಐದು ವರ್ಷ ರಾಷ್ಟ್ರಪತಿ ಆಡಳಿತ ಜಾರಿಗೆ ಬರಬೇಕೆಂದು ಅವರು ಸಲಹೆ ನೀಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ಆ ಸಲಹೆ ಅನುಷ್ಠಾನ ಯೋಗ್ಯವಲ್ಲ; ಅದರಿಂದ ರಾಷ್ಟ್ರಪತಿ ಸರ್ವಾಧಿಕಾರಿಯಾಗುವ, ನೌಕರ ಷಾಹಿ ಜನವಿರೋಧಿಯಾಗುವ ಸಂಭವವೇ ಹೆಚ್ಚು. ಅದೇನೇ ಇರಲಿ, ಆ ಸಲಹೆಯ ಹಿಂದಿರುವ ಅವರ ನೋವು ಮಾತ್ರ ಪ್ರಾಮಾಣಿಕವಾದುದು. ತಮ್ಮ ತೊಂಬತ್ತ-ಮೂರನೆಯ ಮುಸ್ಸಿನಲ್ಲವರು ದೇಶಕ್ಷೇಮದ ತೊಳಕೆಯಲ್ಲಿಯೇ ನಿಧನ ಹೊಂದುತ್ತಾರೆ.

ಆದರೆ ಸರ್ಕಾರದ ಚುಕ್ಕಾಣಿ ಹಿಡಿದಿರುವ ನಾಯಕರು ಅವರಿಗೆ ನ್ಯಾಯವಾಗಿ ಸಲ್ಲಬೇಕಾದ ಗೌರವವನ್ನು ನೀಡಿಲ್ಲವೆಂಬುದಂತು ನಿಜ. ಫೀಲ್ಡ್ ಮಾರ್ಷಲ್ ಪದವಿ ಅವರಿಗೆ ತುಂಬ ತಡವಾಗಿ ಬಂತು. ಎಂಥೆಂಥವರಿಗೋ ಪದ್ಮ ಪ್ರಶಸ್ತಿ ರತ್ನ ಪ್ರಶಸ್ತಿಗಳನ್ನು ಧಾರಾಳವಾಗಿ ಚೆಲ್ಲುತ್ತಿರುವಾಗ, ಅದ್ವಿತೀಯವಾದ ಸಾಧನೆ ಸಿದ್ಧಿಗಳ ಮೂಲಕ ದೇಶದ ಗೌರವವನ್ನು ಎತ್ತಿ ಹಿಡಿದ ಆ ಮಹಾಯೋಧರಿಗೆ 'ಭಾರತರತ್ನ ಪ್ರಶಸ್ತಿ'ಯನ್ನು ನೀಡಬಹುದಿತ್ತು. ಈ ಪ್ರಶಸ್ತಿ ವಿತರಣೆಯಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂಬುದನ್ನು ನಾಯಕರು ಗಮನಿಸಿದ್ದಾರೆಯೆ? ಕುವೆಂಪು ನಿಜಲಿಂಗಪ್ಪನವರು ಅರ್ಹರಲ್ಲವೆ? ಆ ವಿಚಾರ ಇಲ್ಲಿ ಅಪ್ರಸ್ತುತ. ಆದರೆ ಭಾರತೀಯ ಸೈನ್ಯವನ್ನು ಭದ್ರವಾದ ತಳಹದಿಯ ಮೇಲೆ ವ್ಯವಸ್ಥೆಗೊಳಿಸಿ, ಪಾಕಿಸ್ತಾನದ ಧಾಳಿಯನ್ನು ಯಶಸ್ವಿಯಾಗಿ ಎದುರಿಸಿ, ಭಾರತದ ಪ್ರಪ್ರಥಮ ವಿಶಿಷ್ಟ ಸೇನಾನಿಯಾಗಿ ಸೇವೆಗೈದ ಈ ಉಜ್ವಲ ದೇಶಾಭಿಮಾನಿಯ, ಈ ಕೊಡವ ಕರ್ನಾಟಕದ ಹೆಮ್ಮೆಯ ಪುತ್ರನ ಶತಮಾನೋತ್ಸವವನ್ನು ಅವರ ವ್ಯಕ್ತಿತ್ವಕ್ಕೆ ತಗುವಂತೆ ಆಚರಿಸಬೇಕಾದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಾಗೂ ಕನ್ನಡಿಗರ ಪವಿತ್ರ ಕರ್ತವ್ಯವಾಗಿದೆ.

ಮತಾಂತರದ ಅವಾಂತರ

‘ಕೊನೆಯ ಪುರೋಹಿತನ ಕರುಳು ಕೊನೆಯ ದೊರೆಯ ಕೊರಳಿಗುರುಳಾಗುವವರೆಗೆ ಮನುಷ್ಯನಿಗೆ ಸ್ವಾತಂತ್ರ್ಯವಿಲ್ಲ’ ವೆಂಬ ವಾಲ್ಟೇರನ ಭವಿಷ್ಯವಾಣಿ ನಿಜವಾಗಲು ಇನ್ನೂ ದೀರ್ಘಕಾಲ ಬೇಕು. ದೊರೆಗಳು ಹೋದರು. ಪ್ರಜಾಪ್ರಭುತ್ವದ ಹೆಸರಿನಲ್ಲಿ ನಕಲಿ ದೊರೆಗಳು ಹಿಂದಿನವರ ಸ್ಥಾನವನ್ನಾಕ್ರಮಿಸಿಕೊಂಡಿದ್ದಾರೆ; ಅವರಿಗಿಂತಲೂ ಕ್ರೂರವಾಗಿ ಅಸಹ್ಯವಾಗಿ ವರ್ತಿಸುತ್ತಿದ್ದಾರೆ. ಅಮೆರಿಕೆಯ ಕ್ಲಿಂಟನ್‌ನಂತೆ, ಅವರೇನು ಮಾಡಿದರೂ ಜನ ಅವರನ್ನು ಬೆಂಬಲಿಸುತ್ತ ರಾಷ್ಟ್ರ ಪ್ರೇಮವನ್ನು ಮೆರೆಯುತ್ತಾರೆ. ವಿಷ್ಣುವಲ್ಲದವನು ಪ್ರಧಾನಿ ಮುಖ್ಯಮಂತ್ರಿ ಮಂತ್ರಿಯಾಗಲಾರನೆಂಬ ನಂಬಿಕೆ ಇನ್ನೂ ಚಾಲ್ತಿಯಲ್ಲಿರುವಂತಿದೆ. ಜೈಲಿನಲ್ಲಿರಬೇಕಾದವನು ಮಂತ್ರಿಯಾದಾಗ, ಅದೆಲ್ಲ ದೈವೇಚ್ಛೆ ಎನ್ನುವ ಜನ ಇದ್ದಾರೆ. ಅಧಿಕಾರದ ಬಾಲ ಹಿಡಿಯದ, ಅದರ ಅಪಕೃತ್ಯಗಳನ್ನೆಲ್ಲ ಬೆಂಬಲಿಸದ ಪುರೋಹಿತನಿಲ್ಲ, ಸ್ವಾಮಿಯೂ ಇಲ್ಲ.

ಪುರೋಹಿತರ ಸ್ವಾರ್ಥಬುದ್ಧಿ ಸಂಕುಚಿತ ಮನೋಧರ್ಮದಿಂದಾಗಿ ಜಗತ್ತಿನಲ್ಲಿ ಮತಾಂಧತೆ ದಳ್ಳುರಿಯಂತೆ ಸಿಕ್ಕಿದ್ದನ್ನೆಲ್ಲ ಭಸ್ಮ ಮಾಡುತ್ತಿದೆ. ಮನುಕುಲಕ್ಕೆ ಮತಾಂಧತೆಗಿಂತ ಘೋರತಮ ಶತ್ರುವಿಲ್ಲವೆಂಬುದಕ್ಕೆ ಇತಿಹಾಸದಲ್ಲಿ ಸಾವಿರಾರು ನಿದರ್ಶನಗಳು ಸಿಗುತ್ತವೆ. ಜನಾಂಗ ದ್ವೇಷವಂತು ಅರ್ಥವಿಲ್ಲದ್ದು. ಜಾನಾಂಗಿಕ ಪರಿಶುದ್ಧತೆ ಮೊಲದ ಕೋಡು. ಆದಿಮಾನವರು ಅಲೆಮಾರಿಗಳಾಗಿದ್ದಾಗಲೇ ಬೆರಕೆ ಶುರುವಾಯಿತು. ಅನಂತರದ ಆಕ್ರಮಣಕಾರರು ಹೋದಲ್ಲಿ ಬಂದಲ್ಲಿ ಸ್ಥಳೀಯರೊಡನೆ ಕ್ರಮವಾಗಿಯೊ ಅಕ್ರಮವಾಗಿಯೊ ರಕ್ತ ಸಂಬಂಧ ಮಾಡಿಕೊಳ್ಳುತ್ತಾರೆ. ಯಾವ ಶೂದ್ರನ ಧಮನಿಗಳಲ್ಲಿ ಬ್ರಾಹ್ಮಣನ ರಕ್ತ, ಯಾವ ಬ್ರಾಹ್ಮಣನ ನಾಳಗಳಲ್ಲಿ ಆಂಗ್ಲರ ರಕ್ತ, ಯಾವ ನೀಗ್ರೋನ ರಕ್ತದಲ್ಲಿ ಬಿಳಿಯರ ಜೀವಕಣಗಳು ಹರಿಯುತ್ತವೆಯೊ ಹೇಳಬಲ್ಲವರಾರು? ಹೂಣರು ಶಕರು ಭಾರತೀಯ ಜನಾಂಗದಲ್ಲಿ ಕರಗಿಹೋದರು. ಜಾತಿಹಿಂದುಗಳ ಮತ್ತು ಶೂದ್ರರ ರಕ್ತ ಮುಸ್ಲಿಮರ ಶರೀರದಲ್ಲಿ ಹರಿದಾಡುತ್ತಿದೆ. ಇಂಗ್ಲಿಷರು ಹೊರಟುಹೋದರೂ ಆಂಗ್ಲೋ ಇಂಡಿಯನ್ನರಿಲ್ಲವೆ? ವಾಸ್ತವವಾಗಿ ಎಲ್ಲಿಯಂತೆ ಇಂಡಿಯಾದಲ್ಲಿಯೂ ಜಾನಾಂಗಿಕ ಭೇದಗಳಿಲ್ಲವೇ ಇಲ್ಲ. ಕೆಲವು ಮತಗಳು ಮಾತ್ರ ಹೊರಗಿನವು. ಅವುಗಳ ಅನುಕರ್ತರ ಮೈಯಲ್ಲಿ ಹರಿಯುವ ರಕ್ತ ಮಾತ್ರ ಇಲ್ಲಿಯದೇ. ವಿದೇಶೀ ಮತಗಳ ಪ್ರಸಾರದ ಯಶಸ್ಸಿಗೆ ಮತ್ತು ನೆಲೆಯೂರಿಕೆಗೆ ಹಿಂದುತ್ವ ಪ್ರತಿಪಾದಕರೆ ಕಾರಣವೆನ್ನುವುದನ್ನು ಮರೆಯುವಂತಿಲ್ಲ. ಶೂದ್ರಾತಿಶೂದ್ರ ಬುಡಕಟ್ಟುಗಳ ಜನ ವಾಸ್ತವವಾಗಿ ಪೇಗನ್‌ಗಳಾದ್ದರಿಂದ, ಇಸ್ಲಾಂ ಕ್ರೈಸ್ತ ಮತಗಳಿಗೆ ಸೇರಿದಾಗಿನ ಕ್ರಿಯೆಯನ್ನು ಮತಾಂತರವೆನ್ನಲಾಗದು.

ಹಿಂದೆ ಮನು ಮಾಡಿದ ಮಹಾಪರಾಧಕ್ಕೆ ಇಂದಿಗೂ ಭಾರತೀಯರು, ಅದರಲ್ಲಿಯೂ ಮುಗ್ಧ ಜನ ದಂಡ ತೆರಬೇಕಾಗಿದೆ. ದೇಶದ ನೂರರಲ್ಲಿ ತೊಂಬತ್ತೊಂಬತ್ತು ಭಾಗ ಅಮಾಯಕರನ್ನು ಶೂದ್ರಾತಿಶೂದ್ರರೆಂದು ಘೋಷಿಸಿ, ಕರ್ಮ ಸಿದ್ಧಾಂತದ ಹೆಸರಿನಲ್ಲಿ ಅವರನ್ನು ಶುನಕಾವಸ್ಥೆಗೆ, ನರಕಕೂಪಕ್ಕೆ ನೂಕಿದ ಆಚಾರ್ಯ ಸಂತಾನ ಜನತಾಜನಾರ್ದನನ ಮುಂದೆ ತಪ್ಪೊಪ್ಪಿಕೊಂಡು, ಜಾತಿ ವ್ಯವಸ್ಥೆಯನ್ನು ಮುರಿದರೆ ಮಾತ್ರ ರಾಷ್ಟ್ರ ಸ್ವಾತಂತ್ರ್ಯ ಭದ್ರವಾಗುಳಿಯುತ್ತದೆ. ತಮ್ಮ ಸೇವೆಗೆ ಜನರನ್ನೊದಗಿಸಿಕೊಳ್ಳುವ ಸಲುವಾಗಿ ಆ ಕಪಟಿಗಳು ಶೂದ್ರರನ್ನು ಹಿಂದೂ ಕೊಟ್ಟಿಗೆಯಲ್ಲಿಟ್ಟುಕೊಂಡು, ಅನ್ನ ಬಟ್ಟೆ ನೆಳಲು ಕೊಡದೆ ದುಡಿಸಿಕೊಳ್ಳುತ್ತಾರೆ. ನಿಜಕ್ಕೂ ಅವರು ಹಿಂದುಗಳಲ್ಲ. ಜೀತಗಾರಿಕೆಯನ್ನು, ಜಾತೀಯತೆಯನ್ನು, ಅಸ್ಪೃಶ್ಯತೆಯನ್ನು ರಾಜಮಹಾರಾಜರಾಗಲಿ, ನವಾಬರಾಗಲಿ, ವೈಸ್‌ರಾಯರಾಗಲಿ ತೊಡೆಯಲು ಪ್ರಯತ್ನಿಸಲಿಲ್ಲ. ಒಡೆದು ಆಳುವ ನೀತಿಗೆ ಜಾತೀಯತೆ ಅನುಕೂಲವಾಗಿತ್ತು. ಪಾದ್ರಿ ಮೌಲ್ವಿಗಳಿಗಾದರೊ ತಂತಮ್ಮ ಮತೀಯರ ಸಂಖ್ಯೆ ಬೆಳೆಯಬೇಕೆಂಬ ಉದ್ದೇಶವಿತ್ತೇ ಹೊರತು, ಜಾತೀಯತೆ ಅಸ್ಪೃತೆಯ ವಿನಾಶವಲ್ಲ. ಹಿಂದೂಮತದ ಆಚಾರ್ಯರಂದು ಯಥಾಸ್ಥಿತಿವಾದಿಗಳು. ಹೀಗಾಗಿ ಮಠಗಳು ಆಶ್ರಮಗಳು ಆಚಾರ್ಯರು ಸ್ವಾಮಿಗಳು ರಾಜಮಹಾರಾಜರು ವಿಶೇಷವಾಗಿ ಹಾಗೂ ಪರೋಕ್ಷವಾಗಿ,ಮೌಲ್ವಿ ಪಾದ್ರಿಗಳು ಸುಮಾರಾಗಿ ಇಲ್ಲಿಯ ವಿದೇಶೀ ಮತಗಳ ಪ್ರವರ್ಧಮಾನಕ್ಕೆ ಕಾರಣರಾಗುತ್ತಾರೆ.

ಹಿಂದೂಗಳ ಅಂದರೆ ಉತ್ತಮ ವರ್ಗದ ಜನರ ಕಿರುಕುಳಗಳಿಂದ, ಅವಮಾನದಿಂದ ಮುಕ್ತಿಗೊಳಿಸುವ ಮೆಸೆಯನಿಗಾಗಿ, ನಾಯಿ ಬಾಳಿನಿಂದ ತಮ್ಮನ್ನು ಬಿಡುಗಡೆ ಮಾಡುವ ಕರುಣಾಳುವಿಗಾಗಿ ಶೂದ್ರಾತಿಶೂದ್ರರು ಕಾಯುತ್ತಿದ್ದರು. ಆಸ್ಪತ್ರೆ ಶಾಲೆ ವಸತಿ ಸೌಕರ್ಯಗಳನ್ನೊದಗಿಸುವ ನೆಪದಿಂದ ಬಡವರಿಗೆ ಹಾಗೂ ಅನಕ್ಷರಸ್ತರಿಗೆ ಪಾದ್ರಿ ಮೌಲ್ವಿಗಳು ಹತ್ತು ಹಲವು ಆಮಿಷಗಳನ್ನೊಡ್ಡುತ್ತಾರೆ; ಸಾಮಾಜಿಕ ಸ್ಥಾನಮಾನಗಳ ಆಶೆಯನ್ನು ತೋರಿಸುತ್ತಾರೆ. ಸ್ವಯಿಚ್ಛೆಯಿಂದ, ತತ್ವಾಕರ್ಷಣೆಯಿಂದ ನಡೆಯುವ ಮತಾಂತರ ತಪ್ಪಲ್ಲ. ವಿವೇಕಿಗಳು ಅಂಥ ಪ್ರಕರಣಗಳನ್ನು ವಿರೋಧಿಸಬಾರದು; ರಾಜ್ಯಾಂಗದಲ್ಲಿಯೂ ಆ ಬಗ್ಗೆ ನಿಷೇಧವಿಲ್ಲ. ಆ ಬಗ್ಗೆ ರಾಷ್ಟ್ರೀಯ ಚರ್ಚೆ ಅನಗತ್ಯ, ಖಂಡನೀಯ. ಆದರೆ ಬಲಾತ್ಕಾರದ ಮತಾಂತರ ಅಪರಾಧವೆಂದೇ ಶಿಕ್ಷಾರ್ಹವಾಗಬೇಕು. ಇಷ್ಟರ ಮೇಲೆ ಮತಾಂತರ ಹೊಂದಿದವರು ಸುಖವಾಗಿದ್ದಾರೆಯೇ, ಹೊಸ ಸಮಾಜದಲ್ಲಿ ಅವರಿಗೆ ಸಮಾನ ಸ್ಥಾನಮಾನಗಳಿವೆಯೇ ವಿಚಾರಣೀಯ ಸಂಗತಿ.

ಈಚೀಚೆಗೆ ಪುನರ್ಮತಾಂತರದ ಬೆಂತರ ಸಂಬಂಧಪಟ್ಟವರನ್ನು ಅಗ್ನಿಪರೀಕ್ಷೆಗೀಡುಮಾಡಿದೆ. ಇದೆಲ್ಲವೂ ಹಿಂದೂ ಪುರೋಹಿತಶಾಹಿಯ ಮತ್ತು ಹಿಂದುತ್ವ ರಾಜಕೀಯದ ಕಪಟ ಸನ್ನಾಹವೆಂದೇ ಹೇಳಬೇಕು. ಸಮಾಜದಲ್ಲಿ ಪುನರ್ಮತಾಂತರ ಹೊಂದಿದವರ ಸ್ಥಾನಮಾನಗಳೇನೆಂಬುದು ತೀರ್ಮಾನವಾಗಿದೆಯೆ? ಅವರನ್ನು

ಮಾಧ್ವರು ಸ್ಮಾರ್ತರು ಕೊಂಕಣಿಗಳು ಶ್ರೀ ವೈಷ್ಣವರು ವೀರಶೈವರು ದತ್ತು ತೆಗೆದು ಕೊಳ್ಳುತ್ತಾರೆಯೆ? ಅಥವಾ ಅವರಿಗೆ ನೌಕರಿ ವಸತಿ ಪಿಂಚಣಿ ಮೊದಲಾದ ಸೌಕರ್ಯಗಳನ್ನು ಒದಗಿಸಲಾಗುತ್ತದೆಯೆ? ಇವೆರಡರಲ್ಲಿ ಒಂದು ಸೌಲಭ್ಯವಾದರೂ ಸಿಗದೆ, ಅವರು ತಂತಮ್ಮ ಪೂರ್ವದ ಜಾತಿಗಳಿಗೆ ವಾಪಸಾಗುವುದಾದರೆ, ಅವರೇಕೆ ಪುನರ್ಮತಾಂತರಗೊಳ್ಳಬೇಕು? ಕೊನೆಗೆ ನಮ್ಮಲ್ಲಿರುವ ಸಾವಿರಾರು ಮಠಗಳು ಅವರಿಗೆ ಗೌರವದ ಸ್ಥಾನಮಾನಗಳನ್ನೂ ಆಸರೆಯನ್ನೂ ನೀಡುವ ಔದಾರ್ಯವನ್ನೂ ಧರ್ಮಪ್ರಜ್ಞೆಯನ್ನೂ ಮೆರೆಯುವರೆ? ಮತಾಂತರ ಪ್ರಕ್ರಿಯೆಯಲ್ಲಿ ಸಾಮಾಜಿಕ ಆರ್ಥಿಕ ವ್ಯಾಮೋಹಗಳು ಹಾಗೂ ರಾಜಕೀಯೋದ್ದೇಶಗಳಿವೆಯೇ ಹೊರತು, ಪಾರಮಾರ್ಥಿಕ ಲಾಭವಂತು ಇಲ್ಲವೇ ಇಲ್ಲ. ಪಾರಮಾರ್ಥಿಕ ಸಾಧನೆಗೆ ಮಂತ್ರೋದಕ, ಮತ, ಮಠ, ಚರ್ಚು, ಮಸೀದಿ, ದೇವಾಲಯ, ತೀರ್ಥಯಾತ್ರೆ ಯಾವುದೂ ಬೇಕಾಗಿಲ್ಲ; ಹೆಚ್ಚೆಂದರೆ ಸಿದ್ಧಿ ಪಡೆದ ಗುರುಸಾಕು; ಕೊನೆಗೆ ನರರೂಪದ ಗುರುವೂ ಅನಾವಶ್ಯಕವಾಗಬಹುದು, ಮಠಗಳು, ಆಚಾರ್ಯರು ಸಾವಿರಾರು ವರ್ಷಗಳಿಂದ ಇದ್ದಾರಲ್ಲವೆ? ಅವರೇಕೆ ಕ್ರಿಶ್ಚಿಯನ್ ಮಿಷಿನರಿಗಳು ಈಗ ಮಾಡುತ್ತಿರುವುದನ್ನೆ ಹಿಂದಿನಿಂದ ಮಾಡಬಾರದಿತ್ತು?

ಈಗ ಈ ಆಚಾರ್ಯರು ಮತ್ತು ಮೇಲ್ವರ್ಗದವರು ಅಂತ್ಯಜರನ್ನು ಸವರ್ಣೀಯ ಶೂದ್ರರ ಮೇಲೆತ್ತಿ ಕಟ್ಟಿ ಯಥಾಸ್ಥಿತಿಯನ್ನು ಮುಂದುವರಿಸುವ, ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವ ಹವಣಿನಲ್ಲಿದ್ದಾರೆ. ಆ ಗುಂಪಿನ ಸಾಹಿತಿಗಳು ಅಂಥ ಸನ್ನಾಹವನ್ನು ಪ್ರೋತ್ಸಾಹಿಸುತ್ತ, ಅದಕ್ಕೆ ಸಾಕಷ್ಟು ಪ್ರಚಾರ ನೀಡುತ್ತ, ಏಕತೆಯನ್ನು ಕುದುರಿಸುವ ಬದಲು ಅನೈಕ್ಯವನ್ನು ತುತ್ತತುದಿಗೆ ಕೊಂಡೊಯ್ಯಲು ಪ್ರಯತ್ನಿಸುತ್ತಿದ್ದಾರೆ. ಆಫ್ರಿಕಾದ ಮೂಲನಿವಾಸಿಗಳು ತಮ್ಮನ್ನು ತುಳಿದ ಬಿಳಿಯರಿಗಿಂತ ಹೆಚ್ಚಾಗಿ ಇಂಡಿಯಾ ಜನರನ್ನು ದ್ವೇಷಿಸುತ್ತಾರೆ. ಏಕೆ? ಬಿಳಿಯರು ಭಾರತೀಯರನ್ನು ಕರಿಯರ ಉಸ್ತುವಾರಿಗಾಗಿ ನೇಮಿಸಿಕೊಂಡು, ಅವರ ಮೂಲಕ ಕರಿಯರಿಗೆ ಕಿರುಕುಳ ಕೊಡುತ್ತಾರೆ. ಇಂಡಿಯಾದ ಪರಿಸ್ಥಿತಿಯೂ ಅಂಥಾದ್ದೇ. ಹೊಲೆ ಮಾದಿಗರ ಮೈ ಮೇಲಿನ ಗಾಳಿ ಸಹ ತಮ್ಮ ಕಡೆಗೆ ಬೀಸಬಾರದೆಂದು ಕಟ್ಟೆಚ್ಚರವಹಿಸಿದ್ದ ಮೇಲ್ವರ್ಗದವರು ಶೂದ್ರರ ಮೂಲಕ ಅವರನ್ನು ಹದ್ದುಬಸ್ತಿನಲ್ಲಿಟ್ಟಿದ್ದರೆಂಬ, ಶೂದ್ರರೂ ದಲಿತರೂ ಮೈ ಮೈ ತಾಕಿಸಿಕೊಂಡು ದುಡಿದು ಅವರಿಗೆ, ಅಶನವಸನವೊದಗಿಸಿವರೆಂಬ ಸಂಗತಿ ಐತಿಹಾಸಿಕ ಸತ್ಯ. ಆ ಸತ್ಯವನ್ನು ಮರೆಮಾಚುವ ಮೂಲಕ, ಒಡಕನ್ನು ಬಿತ್ತುವ ದೇಶದ್ರೋಹದ ಪಾಪಕಾರ್ಯ ಶೂದ್ರರಿಗರಿವಾಗದಂತೆ ಸೂಕ್ಷ್ಮವಾಗಿ ನಡೆಯುತ್ತಿದೆ.

ಇಂದು ಕಗ್ಗೊಲೆ ಅತ್ಯಾಚಾರ ಚರ್ಚು ದಹನ ಮುಂತಾಗಿ ದೇಶದಲ್ಲಿ ನಡೆಯುತ್ತಿರುವ ಬರ್ಬರ ಕೃತ್ಯಗಳನ್ನು ಪೂರ್ವೋಕ್ತ ಸಂದರ್ಭಗಳ ಹಿನ್ನೆಲೆಯಲ್ಲಿ ಪರಿಶೀಲಿಸಬೇಕಾಗಿದೆ. ವಿಗ್ರಹಭಂಜನ ಮಹಮ್ಮದೀಯರು ಈ ದೇಶಕ್ಕೆ ಬರುವುದಕ್ಕಿಂತ ಮುಂಚಿನಿಂದಲೂ ಚಾಲ್ತಿಯಲ್ಲಿತ್ತೆಂಬುದನ್ನು ಮರೆಯಲಾಗದು. ಇಂದಿನ ಹಿಂದುಗಳ

ಪೂರ್ವಜರು ಅಂದು ಪ್ರದರ್ಶಿಸಿದ ಹೇಡಿತನ ಹೆಣ್ತನಗಳಿಂದಾಗಿ ಬಾಬ್ರಿ ಮಸೀದಿಯ ಧ್ವಂಸ ಕಾರ್ಯ ಸಮರ್ಥನೀಯವಾಗುವುದೆ? ಮತಾಂಧತೆಯ ಪ್ರಚೋದನೆಯಿಂದಾಗಿ ಎಂ. ಎಫ್. ಹುಸೇನರಂಥ ಕಲಾವಿದರ ಚಿತ್ರಗಳನ್ನು ದಹಿಸಿದ್ದಲ್ಲದೆ, ಅವರ ಹೃದಯಕ್ಕೆ ಸಂಕಟದ ಗುಂಡು ಹಾಕಿದ್ದು ಸಂಸ್ಕೃತಿಯ ಲಕ್ಷಣವೆ? ಕ್ರಿಸ್ತ ಜಯಂತಿಯ ಮುನ್ನ ಗುಜರಾತಿನ ಡಾಂಗ್ಸ್ ಜಿಲ್ಲೆಯಲ್ಲಿ ಚರ್ಚು ಸುಟ್ಟದ್ದು ಸರಿಯೆ? 'ಏಕಂಸತ್ ವಿಪ್ರಾ ಬಹುಧಾವದಂತಿ' ಎಂಬ ಉಪನಿಷದ್ವಾಕ್ಯವನ್ನು ಚರ್ಚ್ ದ್ರೋಹಿಗಳು ಮರೆತರೆ? ರಾಜಕೀಯ ಶತ್ರುತ್ವವನ್ನು ಕ್ರಿಕೆಟ್ ಮೈದಾನಕ್ಕೂ ಹಬ್ಬಿಸಬಹುದೆ? ದೇಶ ದೇಶಗಳ ನಡುವಣ ದ್ವೇಷವನ್ನು ಶಮನಗೊಳಿಸಿ, ಸಾಮರಸ್ಯ ವನ್ನು ಮೂಡಿಸುವಂಥ ಕ್ರೀಡೆಗಳಿಗೆ ಪ್ರೋತ್ಸಾಹ ಕೊಡಬೇಕಾದ್ದು ಸಜ್ಜನಿಕೆಯ ಲಕ್ಷಣವಲ್ಲವೆ? ಇದೂ ಸಾಲದೆಂಬಂತೆ ಒರಿಸ್ಸಾದ ಮನೋಹರಪುರದ ಕುಷ್ಠರೋಗಿ ಗಳ ಶುಶ್ರೂಷೆಯಲ್ಲಿಯ ನಿರತರಾಗಿದ್ದ, ಬುಡಕಟ್ಟು ಜನರ ಕ್ಷೇಮ ಪಾಲನೆಯಲ್ಲಿ ತಮ್ಮ ಬದುಕನ್ನೇ ತೊಡಗಿಸಿಕೊಂಡಿದ್ದ ಆಸ್ಟ್ರೇಲಿಯಾದ ಪಾದ್ರಿ ಗ್ರಹಾಮ್ ಸ್ಟೈಯಿನ್ ನನ್ನು ಅವನ ಇಬ್ಬರು ಮಕ್ಕಳನ್ನು ಜೀವಸಹಿತ ದಹಿಸಿದವರು ಪಾಕಿಸ್ತಾನದ ಉಗ್ರರಿಗಿಂತ ಕಡಮೆಯೇ? ಒಂದು ದಿನದ ಪ್ರಧಾನಿಯ ಉಪವಾಸದಿಂದಾಗಲಿ, ಆಪಾದಿತರನ್ನು ಶಿಕ್ಷಿಸುವ ವ್ಯರ್ಥ ಘೋಷಣೆಯ ಹುಸಿ ಪ್ರತಾಪದಿಂದಾಲಿ ಪಾತಕದ ದುಷ್ಪರಿಣಾಮ ವನ್ನು ತಡೆಯಲಾಗದು; ಇಂಡಿಯಾದ ಬಗ್ಗೆ ಭಾರತೀಯರ ಬಗ್ಗೆ ಅಂತರರಾಷ್ಟ್ರೀಯ ಸಮುದಾಯದಲ್ಲಿ ಮೂಡಬಹುದಾದ ವಿರೋಧವನ್ನು ನಿರೋಧಿಸಲಾಗದು. ಕ್ರಿಯೆ ಗಿಂತ ಪ್ರತಿಕ್ರಿಯೆ, ಕ್ರೌರ್ಯಕ್ಕಿಂತ ಪ್ರತಿ ಕ್ರೌರ್ಯ ಬಹುಗುಣವಾಗಿರುತ್ತದೆಂಬ ವೈಜ್ಞಾನಿಕ ಸತ್ಯವನ್ನು ರಾಜಕೀಯ ಮುತ್ಸದ್ದಿಗಳು ಮರೆಯಬಾರದು: ಈ ಎಲ್ಲ ದುಷ್ಕೃತ್ಯಗಳ ಮುನ್ಸೂಚನೆಗಳನ್ನು ರಥಯಾತ್ರೆ, ಸರಸ್ವತೀ ವಂದನ ಕಾರ್ಯಕ್ರಮಗಳಲ್ಲಿ ಕಾಣು ವವರೂ ಉಂಟು. ಕೆಲವರು ಹಿಂದೂ ಮಹಾಸಭಾ, ಬಜರಂಗ, ಆರೆಸ್ಸೆಸ್, ವನವಾಸಿ ಕಲ್ಯಾಣ ಪರಿಷತ್ತುಗಳ ಮೇಲೆ ಕ್ರಿಸ್ತ ವಿರೋಧಿ ಚಟುವಟಿಕೆಗಳನ್ನು ಆರೋಪಿಸಿದರೆ, ಮತ್ತೆ ಕೆಲವರು ಅಂತರರಾಷ್ಟ್ರೀಯ ದುಷ್ಕರ್ಮಿಗಳ ಪಿತೂರಿ ಚಿತಾವಣೆಗಳೇ ಅವುಗಳಿಗೆ ಕಾರಣ ಎಂದು ಹೇಳುತ್ತಾರೆ. ಮಧ್ಯಪ್ರದೇಶದಲ್ಲಿ ನಡೆಯಿತೆನ್ನಲಾದ ಸನ್ಯಾಸಿನಿಯರ ಮೇಲಣ ಅತ್ಯಾಚಾರ ಉರಿಯುವ ಬೆಂಕಿಗೆ ತುಪ್ಪ ಹೊಯ್ಯುವ ಸುಳ್ಳು ಅಪ ಪ್ರಚಾರ ಎನ್ನುವವರೂ ಉಂಟು. ವೈದ್ಯೋಪಚಾರ ಅಕ್ಷರ ಪ್ರಚಾರವೆಲ್ಲ ಮತಾಂತರ ಕ್ಕೊಡ್ಡಿದ ಗಾಳಗಳೆಂದೂ, ಅದರಲ್ಲಿ ಸ್ವಾರ್ಥರಹಿತ ಪರೋಪಕಾರ ಬುದ್ಧಿ ಇಲ್ಲವೆಂದೂ ಹೇಳಲಾಗುತ್ತಿದೆ. ಇವೆಲ್ಲವೂ ಸತ್ಯವನ್ನು ಮುಚ್ಚುವ, ಜನಮನವನ್ನು ತಪ್ಪು ದಾರಿಗೆಳೆ ಯುವ ಕುಟಿಲ ತಂತ್ರಗಳು. ಈಗ ಗಂಟಲು ಹರಿದುಕೊಳ್ಳುವ ಕರ್ತವ್ಯ ಭ್ರಷ್ಟಜನ ಪಾದ್ರಿ ಪ್ರಯತ್ನವನ್ನೇ, ಅಲ್ಪಸಂಖ್ಯಾತರ ಮಾರ್ಗವನ್ನೇ ಅನುಸರಿಸಿ ನತದ್ರಷ್ಟ ಜನರನ್ನು ಕೊಳಚೆಯಿಂದ ಮೇಲೆತ್ತಿ, ಅಪ್ಪಿಕೊಂಡಿದ್ದರೆ, ಅವರ ಸಾಮಾಜಿಕ ಕಾರ್ಯ ಗಳನ್ನು ಇವರೂ ಹಮ್ಮಿಕೊಂಡಿದ್ದರೆ, ಪಾದ್ರಿಗಳು ಎಂದೋ ಈ ನೆಲದಿಂದ ಕಾಲು

ಕೇಳುತ್ತಿದ್ದರು. ಅಲ್ಪಸಂಖ್ಯಾತರು ಬಹುಸಂಖ್ಯಾತರಾಗಿ ಬೆಳೆಯುತ್ತಿರಲಿಲ್ಲ. ಅದೂ ಇರಲಿ, ಈ ಪಾದ್ರಿಗಳು, ಈ ಮೌಲ್ವಿಗಳು ಈ ನೆಲದವರು ತಾನೆ! ಸ್ಟೆಯಿನ್ಸ್‌ಸಂಥವರು ಅಲ್ಲೊಬ್ಬ ಇಲ್ಲೊಬ್ಬ ಇದ್ದಿರಬಹುದು. ವಿದೇಶೀಯ ಪಾದ್ರಿಗಳು ಈ ದೇಶದ ಶಿಕ್ಷಣ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳಿಗೆ ನೀಡಿರುವ ವಿಶಿಷ್ಟ ಕೊಡುಗೆಯನ್ನು ಕೃತಜ್ಞ ಜನ ಮರೆಯಲಾರರು.

ಮುಂಬರುವ ದಿನಗಳಲ್ಲಿ ಸಾಂಸ್ಕೃತಿಕ ಸಂಘರ್ಷದಿಂದ ಜಗತ್ತಿನಲ್ಲಿ ಸಮಸ್ಯೆಗಳು ಉಲ್ಬಣವಾಗುವ, ಜೀವನ ಕ್ರಮವೇ ಬದಲಾಗುವ ಸಂಭವವಿದೆ. ಇಂಥ ಸಂದರ್ಭದಲ್ಲಿ ಜಾತೀಯ ಮತೀಯ ಸಾಂಸ್ಕೃತಿಕ ಸಂಘರ್ಷಗಳು ಭರತ ಖಂಡವನ್ನು ವಿನಾಶದ ಅಂಚಿಗೆ ತಳ್ಳುವುದರಲ್ಲಿ ಸಂಶಯವಿಲ್ಲ. ಅಲ್ಪಸಂಖ್ಯಾತರು ತಮ್ಮ ಇತಿಮಿತಿಗಳನ್ನರಿತು ಕೊಂಡು, ವಿದೇಶ ನಿಷ್ಠೆಯನ್ನು ಪರಕೀಯ ಪ್ರಜ್ಞೆಯನ್ನು ಮರೆತು, ಇಲ್ಲಿಯ ಜನ ಜೀವನದಲ್ಲಿ ಬೆರೆತರೆ ಅವರಿಗೂ ಕ್ಷೇಮ; ದೇಶಕ್ಕೂ ಶುಭ. ಬಹುಸಂಖ್ಯಾತರು ಅವರನ್ನು ಸಹೋದರರೆಂದು ಆಲಿಂಗಿಸಿಕೊಳ್ಳಬೇಕು. ಎಲ್ಲರೂ ಮತ ದೇವರುಗಳನ್ನು ತಂತಮ್ಮ ಮನೆಮಠ ಮಸೀದಿ ಚರ್ಚುಗಳಿಗೆ ಸೀಮಿತಗೊಳಿಸಿಕೊಳ್ಳಬೇಕು. ಮತಾಂತರದ ಬಗ್ಗೆ ಪಾದ್ರಿಗಳು ಮತ್ತು ಮೌಲ್ವಿಗಳು ಮರು ಚಿಂತನೆ ನಡಸಬೇಕು; ಗಾಂಧಿ ವಿವೇಕಾನಂದರ ಸಂದೇಶವನ್ನು ಅರ್ಥಮಾಡಿಕೊಳ್ಳಬೇಕು. ಸ್ವಪ್ರೇರಿತ ಮತಾಂತರ ಅಪರಾಧವೆಂದು ಯಾರೂ ಭಾವಿಸಬಾರದು. ಈಗಲೂ ಅಲ್ಪಸಂಖ್ಯಾತರಿಗೆ ಇಂಡಿಯಾದಲ್ಲಿರುವ ರಕ್ಷಣೆ ಬೇರೆ ಯಾವ ದೇಶದಲ್ಲಿಯೂ ಸಿಗದು. ದೇಶ ವಿಭಜನೆಯಾದ ಸಮಯದಲ್ಲಿ ಪಾಕಿಸ್ತಾನದಲ್ಲಿ ಹಿಂದುಗಳ ಸಂಖ್ಯೆ ಎಷ್ಟಿತ್ತು ? ಈಗ ಎಷ್ಟಿದೆ ? ಅವರೆಲ್ಲ ಏನಾದರು ? ಅಲ್ಲಿಂದ ಬಂದ ನಿರಾಶ್ರಿತರನ್ನು ಈ ದೇಶ ಚೆನ್ನಾಗಿ ನೋಡಿಕೊಳ್ಳಲಿಲ್ಲವೆ? ಇಲ್ಲಿಂದ ಪಾಕಿಸ್ತಾನಕ್ಕೆ ಹೋದ ನಿರಾಶ್ರಿತರ ಗತಿ ಏನಾಗಿದೆ ? ಈ ಪ್ರಶ್ನೆಗಳಿಗೆ ಈ ದೇಶದ ಅಲ್ಪಸಂಖ್ಯಾತರು ಮತ್ತು ಜಗತ್ತಿನ ಪ್ರಬಲ ರಾಷ್ಟ್ರಗಳು ಉತ್ತರ ಕೊಡಬಲ್ಲುವೆ ? ಹಿಂದುತ್ವವನ್ನು ಪ್ರತಿಪಾದಿಸುವ ಹಿಂದುಗಳು ಸಹ ವಸ್ತುಸ್ಥಿತಿಯನ್ನು ಮರೆಯಬಾರದು. ಪಾಕಿಸ್ತಾನದಿಂದಲ್ಲ, ಹಿಂದುಗಳಿಂದಲೇ ಹಿಂದುಗಳು ನಾಶವಾಗುತ್ತಾರೆ; ಹಿಂದುತ್ವ ಪ್ರತಿಪಾದಕರು ಹಿಂದೂಮತಕ್ಕೆ ಚರಮಗೀತೆ ಹಾಡುವ ಸಂದರ್ಭ ಸೃಷ್ಟಿಯಾದರೆ ಆಶ್ಚರ್ಯವಾಗದು. ಹಿಂದು ರಾಷ್ಟ್ರಗಳೆಂದು ಕರೆಯಬಹುದಾದಂಥವು ಜಗತ್ತಿನಲ್ಲಿ ಎರಡೋ ಎರಡೂವರೆಯೊ ಇರಬಹುದು. ಕ್ರಿಶ್ಚಿಯನ್ ಮತ್ತು ಇಸ್ಲಾಂ ರಾಷ್ಟ್ರಗಳೊ ? ಅಂತೆಯೇ ಮುಸ್ಲಿಮ್ ಮತಾಂಧರಿಂದಲೇ ಇಸ್ಲಾಮಿಕ್ ರಾಷ್ಟ್ರಗಳು ಅಂತ್ಯವನ್ನು ಕಂಡರೂ ಕಾಣಬಹುದು. ಅಣುಬಾಂಬುಗಳ ಸ್ವಾಮ್ಯವನ್ನು ಹೊಂದಿ

ರುವ ನಾಲ್ಕೈದು ರಾಷ್ಟ್ರಗಳಿಗೆ ಉಳಿದ ರಾಷ್ಟ್ರಗಳು ಶರಣಾಗಬೇಕಾಗುತ್ತದೆ, ಇಲ್ಲವೆ ನಾಗಸಾಕಿ ಹಿರೋಷಿಮಾಗಳ ದೌರ್ಭಾಗ್ಯಕ್ಕೆ ಭಾಜನವಾಗಬೇಕಾಗುತ್ತದೆ.

ಹಲವು ಬಣ್ಣ ಕಂಪುಗಳ ಹೂ ತುಂಬಿರುವ ಅರಣ್ಯ ಚೆಂದ; ಸಪ್ತವರ್ಣಗಳ ಇಂದ್ರ ಚಾಪ ಚೆನ್ನ; ವಿವಿಧ ವೇಷ ಭೂಷಣಗಳಿಂದಲಂಕೃತರಾದ ಸ್ತ್ರೀ ಪುರುಷರ ಸಮಾವೇಶ ನಯನಮನೋಹರ; ಬಹು ರಾಗರಂಜಿತ ಸಂಗೀತ ಆಹ್ಲಾದಕರ; ನಾನಾ ಪದಾರ್ಥ ವ್ಯಂಜನ ಸಮೃದ್ಧವಾದ ಭೋಜನ ಮಧುರಾತಿ ಮಧುರ; ಅಂತೆಯೇ ಮತ ಭಾಷಾ ಸಂಸ್ಕೃತಿ ಸಮ್ಮಿಳಿತ ಬಾಹುಳ್ಯ ಸಮಾಜ ಹಿತಕರ, ಬೋಧಪ್ರದ, ಫಲ ಭರಿತ. ಅಂಥ ಸಮಾಜ ನಿರ್ಮಾಣವಾಗಲು ಸಹಜೀವನ, ಸಹನೆ, ಕ್ಷಮೆ, ಸಹಾನುಭೂತಿ, ಪರೇಂಗಿತಜ್ಞತೆ, ಕೊಳುಕೊಡೆಯ ಔದಾರ್ಯ, ಪರಸ್ಪರ ಗೌರವ, ಸತ್ಯನಿಷ್ಠೆ, ಅಹಂತ್ಯಾಗ, ಪ್ರತೀಕಾರ ನಿರಸನ, ದಯೆ, ಈ ಎಲ್ಲಕ್ಕಿಂತ ಮಿಗಿಲಾಗಿ ಮಾನವಪ್ರೇಮ ಅತ್ಯಾವಶ್ಯಕ. ಈ ಗುಣಗಳು ಸೇರಿದಾಗ ಭೂಮಿಯೇ ಸ್ವರ್ಗವಾದೀತು.

ದೇಜಗೌ

ವರ್ಷದ ಮೊದಲ ಹಬ್ಬ ಯುಗಾದಿ

ಪ್ರೊ|| ಕೆ. ಕೇಶವಮೂರ್ತಿ
ಎಲ್–೪೧೧, ೭ ನೇ ಮುಖ್ಯರಸ್ತೆ
ರಾಮಕೃಷ್ಣನಗರ ಹೆಚ್.ಬ್ಲಾಕ್ ಮೈಸೂರು-೨

"ಯುಗ ಯುಗವು ಕಳೆದರೂ ಯುಗಾದಿ ಮರಳಿ ಬರುತಿದೆ"–ಎಂಬ ಕವಿವಾಣಿಯಂತೆ ನಾವಿಂದು ಬಹುಧಾನ್ಯ ನಾಮ ಸಂವತ್ಸರವನ್ನು ಹಿಂದಕ್ಕೆ ಹಾಕಿ 'ಪ್ರಮಾಥಿ' ನಾಮ ಸಂವತ್ಸರಕ್ಕೆ ಪದಾರ್ಪಣ ಮಾಡುತ್ತಿದ್ದೇವೆ. ಎಂತಲೇ ಇದು 'ಯುಗಾದಿ ಹಬ್ಬ' ಪ್ರಮಾಥಿಯು ಸಂವತ್ಸರ ಚಕ್ರದಲ್ಲಿ ಹದಿಮೂರನೆಯದು. "ಸರ್ವಸಿದ್ಧಿ-ತ್ರ್ಯಯೋದಶಿಃ"ಎಂಬಂತೆ ಈ ಸಂವತ್ಸರವು ಸಕಲ ಇಷ್ಟಾರ್ಥ ಸಿದ್ಧಿಗಳನ್ನೂ ತರುತ್ತದೆಂಬ ನಂಬಿಕೆಯಿದೆ.

ಭಾರತದಲ್ಲಿ ಬಹು ಹಿಂದಿನಿಂದಲೂ ಆಚರಣೆಯಲ್ಲಿರುವ ಹಬ್ಬ 'ಯುಗಾದಿ'. ಆಡುಭಾಷೆಯಲ್ಲಿ ಇದೇ 'ಉಗಾದಿ' ಆಗಿದೆ. ಈ ಹಬ್ಬದ ವಿಚಾರವಾಗಿ ಅಥರ್ವಣ ವೇದ ಶತಪಥ ಬ್ರಾಹ್ಮಣ, ಧರ್ಮಸಿಂಧು, ನಿರ್ಣಯ ಸಿಂಧು, ಬ್ರಹ್ಮಾಂಡಪುರಾಣ ಮತ್ತು ಮಹಾಭಾರತಗಳು ತಿಳಿಸುತ್ತವೆ.

ಜ್ಯೋತಿಷ್ಯ ಶಾಸ್ತ್ರದಲ್ಲಿ ಮೂರು ರೀತಿಯ ಲೆಕ್ಕಾಚಾರಗಳಿವೆ. ೧) ಬಾರ್ಹಸ್ಪತ್ಯಮಾನ ೨) ಸೌರಮಾನ ಮತ್ತು ೩) ಚಾಂದ್ರಮಾನ. ವಿಂಧ್ಯಪರ್ವತಕ್ಕೆ ಉತ್ತರದಲ್ಲಿರುವವರು ಬಾರ್ಹಸ್ಪತ್ಯಮಾನವನ್ನೂ, ದಕ್ಷಿಣಕ್ಕಿರುವವರು ಸೌರ ಮತ್ತು ಚಾಂದ್ರಮಾನ ಪದ್ಧತಿಯನ್ನೂ ಆಚರಿಸುತ್ತಾರೆ. ತಮಿಳುನಾಡಿನಲ್ಲಿ ಸೌರಮಾನ ಬಳಕೆಯಲ್ಲಿರುವಂತೆ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಚಾಂದ್ರಮಾನ ರೂಢಿಯಲ್ಲಿದೆ. ಈ ಕಾರಣದಿಂದಾಗಿ ಚಾಂದ್ರಮಾನ ಯುಗಾದಿ ಮತ್ತು ಸೌರಮಾನ ಯುಗಾದಿಗಳೆರಡೂ ದಕ್ಷಿಣ ಭಾರತದಲ್ಲಿ ಆಚರಣೆಯಲ್ಲಿವೆ. ಈ ವರ್ಷದ ಸೌರಮಾನ ಯುಗಾದಿ ಏಪ್ರಿಲ್ ೧೪ ರಂದು ಬರುತ್ತದೆ.

ಪುರಾಣಗಳಲ್ಲಿ ಯುಗಾದಿ :

ಜಗತ್ತು ಸೃಷ್ಟಿಯಾದದ್ದು ಚೈತ್ರಶುದ್ಧ ಪಾಡ್ಯಮಿಯೆಂದು ಬ್ರಹ್ಮಾಂಡ ಪುರಾಣ ತಿಳಿಸುತ್ತದೆ. ಬ್ರಹ್ಮನು ಚೈತ್ರಮಾಸದ ಶುಕ್ಲಪಕ್ಷದ ಮೊದಲನೆಯ ದಿನದ ಸೂರ್ಯೋದಯ ವೇಳೆಯಲ್ಲಿ ಗ್ರಹ ಋತು, ತಿಂಗಳು, ಅಧಿಪತಿಗಳನ್ನೊಳಗೊಂಡಂತೆ ಸಮಸ್ತ ಲೋಕವನ್ನೂ ಸೃಷ್ಟಿಸಿದ. ಕಾಲದ ಗಣನೆಯನ್ನೂ ಸಹ ಅಂದಿನಿಂದಲೇ ಆರಂಭಿಸಲಾಯಿತು. ಈ ಕಾರಣದಿಂದ ಚೈತ್ರಶುದ್ಧ ಪಾಡ್ಯಮಿ ವರ್ಷಾರಂಭದ ದಿನವೆಂದು ಪರಿಗಣಿಸಲಾಯಿತು. ಈ ಮಾತಿಗೆ ಹೇಮಾದ್ರಿ ಪಂಡಿತನ "ಚತುರ್ವರ್ಗ ಚಿಂತಾಮಣಿ" ಎಂಬ ಗ್ರಂಥವೂ ಆಧಾರವಾಗಿದೆ.

ಶ್ರೀರಾಮನ ಆಡಳಿತ :

ರಾವಣನ ವಧೆಯಾದ ನಂತರ ಅಯೋಧ್ಯೆಗೆ ಆಗಮಿಸಿದ ಶ್ರೀರಾಮ ಯುಗಾದಿ ದಿನದಿಂದಲೇ ನೂತನ ರಾಜ್ಯ ಭಾರ ಸೂತ್ರವನ್ನು ವಹಿಸಿಕೊಂಡನಂತೆ.

ಯುಗಾದಿಯ ಇತಿಹಾಸ :

ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಕ್ರಿ.ಪೂ. ೨೦೦೦ ವರ್ಷಗಳಷ್ಟು ಹಿಂದೆಯೇ ಮೆಸಿಪಟೋಮಿಯದಲ್ಲಿ ಯುಗಾದಿಯ ಆಚರಣೆ ಇತ್ತೆಂದು ತಿಳಿದು ಬರುತ್ತದೆ.

ಯುಗಾಂತರಗಳಲ್ಲಿ ಯುಗಾದಿ ಆಚರಣೆ ಯಲ್ಲಿದ್ದರೂ ಅದು ಚೈತ್ರಮಾಸದಂದೇ ಇರುತ್ತಿರಲಿಲ್ಲ. ತ್ರೇತಾಯುಗದಲ್ಲಿ ಉತ್ತರಾಯಣಪುಣ್ಯಕಾಲದ ದಿನದಿಂದ ವರ್ಷಾರಂಭವಾಗುತ್ತಿತ್ತು. ಇದಕ್ಕೆ ಸಾಕಷ್ಟು ಆಧಾರಗಳಿವೆ. ಬ್ಯಾಬಿಲೋನಿ ಯಾದವರು ಮೇಷ ಸಂಕ್ರಾಂತಿ ಸಮಯದ ಅಮಾವಾಸ್ಯೆಯಿಂದಲೂ, ಅಸ್ಸೀರಿಯಾ ದವರು ತುಲಾಸಂಕ್ರಮಣ ಸಮಯದ ಅಮಾವಾಸ್ಯೆಯಿಂದಲೂ, ಪರ್ಷಿಯನ್ ಮತ್ತು ಈಜಿಪ್ಟಿನವರು ತುಲಾಸಂಕ್ರಾಂತಿ ಯಿಂದೂ, ಗ್ರೀಕರು ಮಕರ ಸಂಕ್ರಾಂತಿ ಯಿಂದೂ ಯುಗಾದಿ ಹಬ್ಬವನ್ನು ಆಚರಿಸು ತ್ತಿದ್ದರು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣ "ಮಾಸಾನಾಂ ಮಾರ್ಗಶೀರ್ಷೋऽಹಂ"– 'ತಿಂಗಳುಗಳಲ್ಲಿ ನಾನೇ ಮಾರ್ಗಶಿರ ಮಾಸ' ಎಂದಿದ್ದಾನೆ. ಹಿಂದೆ ಮಾರ್ಗಶಿರ ಮಾಸ– ದಿಂದಲೇ ವರ್ಷಾರಂಭವಾಗುತ್ತಿತ್ತು.

ಆದರೆ ಕ್ರಿ. ಶ. ಆರನೆಯ ಶತಮಾನದ ಖ್ಯಾತ ಖಗೋಳಶಾಸ್ತ್ರಜ್ಞ ವರಾಹ- ಮಿಹಿರನು ಚೈತ್ರ ಶುದ್ಧ ಪಾಡ್ಯಮಿಯ ದಿನ ಮೊದಲನೇ ನಕ್ಷತ್ರ ಅಶ್ವಿನಿ ಇದ್ದು (ಎಲ್ಲ ಚೈತ್ರ ಶುದ್ಧ ಪಾಡ್ಯಗಳಲ್ಲಿ ಅಶ್ವಿನೀ ನಕ್ಷತ್ರ ವಿರುವುದಿಲ್ಲ. ಈ ವರ್ಷ ಉತ್ತರಾಭಾದ್ರ ನಕ್ಷತ್ರವಿದೆ) ಋತುಗಳ ರಾಜನಾದ ಮೊದಲನೆಯ ಋತು ವಸಂತನ ಆಗಮನ ವಾಗುವುದರಿಂದ ಅದನ್ನೇ ವರ್ಷಾರಂಭ ವೆಂದು ನಿಗದಿಪಡಿಸಿದ.

ಈ ಮೊದಲ ತಿಂಗಳಿಗೆ 'ಚೈತ್ರ' ಎಂಬ ಹೆಸರು ಬರಲೂ ಕಾರಣವಿದೆ. ಪೂರ್ಣಿಮೆ ಯದಿನ ಚಂದ್ರನು ಯಾವ ನಕ್ಷತ್ರದೊಂದಿ ಗಿರುತ್ತಾನೆಯೋ ಅದನ್ನನುಸರಿಸಿ ಆ ತಿಂಗಳನ್ನು ಹೆಸರಿಸುತ್ತಾರೆ. ಯಾವ ಪೂರ್ಣಿಮೆಯ ದಿನ ಚಂದ್ರನು ಚಿತ್ತಾ ನಕ್ಷತ್ರದೊಡನೆ ಇರುತ್ತಾನೋ ಅದು ಚೈತ್ರಮಾಸ. ಆದ್ದರಿಂದಲೇ ಆ ಪೂರ್ಣಿಮೆ ಯನ್ನು 'ಚಿತ್ತಾಪೂರ್ಣಿಮೆ' ಎನ್ನುತ್ತಾರೆ. ಅಂತೆಯೇ ಚಂದ್ರನು ವಿಶಾಖಾ ನಕ್ಷತ್ರಾಂತ ರ್ಗತನಾಗಿದ್ದರೆ ಅದು ವೈಶಾಖ, ಜ್ಯೇಷ್ಠಾ ನಕ್ಷತ್ರದೊಡನಿದ್ದರೆ ಜ್ಯೇಷ್ಠ ಮಾಸ, ಪೂರ್ವಾಷಾಢ ನಕ್ಷತ್ರದೊಡನಿದ್ದರೆ ಆಷಾಢಮಾಸ, ಶ್ರವಣನಕ್ಷತ್ರ–ಶ್ರಾವಣ ಮಾಸ....ಹೀಗೆ.

ಮತ್ತೊಂದು ದೃಷ್ಟಿಯಿಂದಲೂ ಇದು ಶುಭಮಾಸ. ಚೈತ್ರಮಾಸ ಉತ್ತರಾಯಣ ದಲ್ಲಿ ಬರುತ್ತದೆ. ಉತ್ತರ ಗೋಳಾರ್ಧ ನಿವಾಸಿಗಳಾಗಿರುವ ನಮಗೆ ಉತ್ತರಾಯಣ 'ತಮಸೋಮಾ ಜ್ಯೋತಿರ್ಗಮಯಾ'ದ ಪ್ರವೇಶ.

ಶಾಲಿವಾಹನ ಶಕೆ :

ಹಿಂದೆ ಭರತಖಂಡವನ್ನು ಆಳಿದವರಲ್ಲಿ ಶಾಲೀವಾಹನ ರಾಜನೂ ಒಬ್ಬ. ಶಕರು ಭಾರತಕ್ಕೆ ದಂಡೆತ್ತಿ ಬಂದಾಗ ಶಾಲೀವಾಹನನು ಶಕರನ್ನು ಸೋಲಿಸಿ ಹಿಮ್ಮೆಟ್ಟಿಸಿದ್ದು ಯುಗಾದಿಯಂದು. ಅಂದಿನಿಂದಲೇ ಆ ವಿಜಯೋತ್ಸವದ ಆಚರಣೆಯ ನೆನಪಿಗಾಗಿ ಶಾಲೀವಾಹನ ಶಕೆ ಆರಂಭವಾಯಿತೆಂದೂ ಹೇಳುತ್ತಾರೆ. ಹೀಗೆ ಶಾಲೀವಾಹನ ಶಕಪುರುಷನಾದ. ಶಾಲೀವಾಹನ ಶಕೆಯೆ ಇಂದು ನಮ್ಮ ವೈದಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳಿಗೆ ನಾವು ಬಳಸುತ್ತಿರುವ ಶಕೆ. ಇದರ ಪ್ರಕಾರ ಇದರ ೧೯೨೧ ನೇ ವರ್ಷ. ಕಲಿಯುಗ ಆರಂಭವಾಗಿ ಇಂದಿಗೆ ೫೧೦೦ ವರ್ಷಗಳು.

ಯುಗಾದಿ ಹಬ್ಬ ಜೈನರಿಗೂ ಪವಿತ್ರವಾದದ್ದು. ಕಾರಣ ಮಲ್ಲಿನಾಥನೆಂಬ ೧೯ನೇ ತೀರ್ಥಂಕರ ಹುಟ್ಟಿದ್ದು ಯುಗಾದಿಯಂದು. ಅಲ್ಲದೆ ಆದಿತೀರ್ಥಂಕರನ ಮಗ ಭರತ ಚಕ್ರವರ್ತಿಯು ದಿಗ್ವಿಜಯವನ್ನು ಪಡೆದ ದಿನವಿದು.

ಬೇವು ಬೆಲ್ಲ

ಯುಗಾದಿ ಹಬ್ಬದ ವಿಶಿಷ್ಟ ಹಾಗೂ ವಿಶೇಷ ಆಚರಣೆಗಳಲ್ಲಿ ಬೇವು-ಬೆಲ್ಲ ಮೆಲ್ಲುವುದು ಅತಿ ಮುಖ್ಯ. ಬೇವಿನ ಚಿಗುರಿಗೆ ಬೆಲ್ಲ ಬೆರಸಿ ದೇವರ ಮುಂದೆ ನಿವೇದಿಸಿ ಅದನ್ನು ಮಂತ್ರ ಪೂರ್ವಕವಾಗಿ ಸ್ವೀಕರಿಸುವುದು. ಇದಕ್ಕೇನು ಕಾರಣ? ಜೀವನದಲ್ಲಿ ಕಷ್ಟ-ಸುಖಗಳು ಇದ್ದೇ ಇರುತ್ತದೆ. ಈ ಸುಖ-ದುಃಖಗಳನ್ನು ಸಮಾನವಾಗಿ ಕಾಣಬೇಕೆಂಬುದರ ಸಂಕೇತವಿದು ಬೇವು ದುಃಖವನ್ನು ಪ್ರತಿನಿಧಿಸಿದರೆ ಬೆಲ್ ಸುಖವನ್ನು ಪ್ರತಿನಿಧಿಸುತ್ತದೆ.

ಇಲ್ಲಿ ಬೇವೇ ಏಕೆ? 'ವಿಷಪ್ರಹರಿ'ಯು ಕಹಿಯೇ ಅಲ್ಲವೇ? ಅದನ್ನೇಕೆ ಬೆರೆ ಬಾರದು. ಅದಕ್ಕೂ ಕಾರಣವಿದೆ. ಬೇವು ಬೆಲ್ಲ ಕೇವಲ ಕಹಿ-ಸಿಹಿಗಳ ಮಿಶ್ರಣವಲ್ಲ ಇವುಗಳ ಔಚಿತ್ಯಪೂರ್ಣ ಮಿಶ್ರಣ. ಬಿಲ್ವ ಅಶ್ವತ್ಥ ಮುಂತಾದ ವೃಕ್ಷಾರಾಧನೆಗ ನಮ್ಮಲ್ಲಿ ಮಹತ್ವವಿದೆ. ಅಂತಹ ಪೂಜಾರ್ಹ ವೃಕ್ಷಗಳಲ್ಲಿ ಬೇವೂ ಒಂದು. ಹಿಂದೆ ಇದ ಮೃತ ಸಂಜೀವಿನಿಯೇ ಆಗಿತ್ತು. ಆದ ಶ್ರೀರಾಮನ ಶಾಪದಿಂದ ಅದು ಬೇವಾ ಯಿತು. ಆದರೇನು ಅಧರಕ್ಕೆ ಕಹಿಯಾದರೂ ಉದರಕ್ಕೆ ಅದು ಸಿಹಿಯೇ. ಬೇವಿ ಚಿಗುರು, ಹೂವು, ಎಲೆ, ತೊಗಟೆ, ಬೀಜ ಕಾಂಡ, ಬೇರು, ಎಣ್ಣೆ—ಎಲ್ಲವೂ ರೋಗ ಪರಿಹಾರಕವೇ.

ಈ ಬೇವು-ಬೆಲ್ಲದ ಸೇವನೆಯಿಂ ರೋಗರಹಿತವಾದ ವಜ್ರಕಾಯ ಪ್ರಾಪ್ ವಾಗಿ ಸಕಲಾರಿಷ್ಟಗಳೂ ನಿವಾರಣೆಯಾಗಲಿ ಆರೋಗ್ಯಭಾಗ್ಯಕ್ಕಿಂತ ಬೇರೆ ಅನ್ಯ ವೇನಿದೆ.

ಸರಿ, ಬೇವಾಯಿತು, ಬೆಲ್ಲವೇ ಏಕೆ ಸಕ್ಕರೆ ಏಕಾಗಬಾರದು? ಸರಿಯಾದ ಪ್ರ ಆಯುರ್ವೇದದಲ್ಲಿ ಬೆಲ್ಲಕ್ಕೆ ವಿಶೇ ಪ್ರಾಶಸ್ತ್ಯ. ಯಾವುದೇ ಔಷಧಿ ತಯಾರಿ ಯಲ್ಲಿ ಬೆಲ್ಲವನ್ನೇ ಉಪಯೋಗಿಸುತ್ತಾರೆ ಕಾರಣ ಬೆಲ್ಲದಲ್ಲಿ ಅಂಥಹ ಔಷಧೀಯ ಗುಣವಿದೆ. ಬೆಲ್ಲ ಆಯಾಸನಿವಾರಕ ಹಾಗೂ ಕ್ರಿಮಿನಾಶಕ. ಸಕ್ಕರೆಯಲ್ಲಿ ಈ ಗುಣವಿಲ್ಲ

ಂದಮಾತ್ರಕ್ಕೆ ನಮ್ಮ ಪೂರ್ವಜರಿಗೆ ಸಕ್ಕರೆ ೊತ್ತಿರಲಿಲ್ಲ ಅದಕ್ಕೆ ಬೆಲ್ಲ ಉಪಯೋಗಿಸುತ್ತಿದ್ದರೆಂದುಹೇಳಲು ಸಾಧ್ಯವೇ ಇಲ್ಲ. ತಾನಃಶಿವಾಃಶರ್ಕರಾಃ ಸಂತು ಸರ್ವಾಃ" ಂದು ವೇದವಾಣಿಯೇ ಇದೆ. ಶರ್ಕರ ಂದರೆ ಸಕ್ಕರೆ. ಬೆಲ್ಲ ಮೃತ್ಯುಂಜಯ ಸ್ವರೂಪಿ. ದಶದಾನಗಳಲ್ಲಿ ಬೆಲ್ಲದಾನವನ್ನು ಹೇಳಿದೆ. "ಗೋ ಭೂ ತಿಲ ಹಿರಣ್ಯಾಜ್ಯ ವಾಸೋ ಗುಡಾನಿ ಚ|" ಗುಡ ಎಂದರೆ ಬೆಲ್ಲ. ಸಂಕ್ರಾಂತಿಯಲ್ಲಿ ಎಳ್ಳಿನ ಜತೆಗೆ ಸೇರಿಸುವುದು ಬೆಲ್ಲವನ್ನೇ. ಸಕ್ಕರೆ ಅಚ್ಚು ಅಲಂಕಾರಕ್ಕಾಗಿ. ಹೀಗೆ ಬೆಲ್ಲದ ಸ್ಥಾನವನ್ನು ಬೇರೆಯ ಸಿಹಿಯಾಗಲೀ ಬೇವಿನ ಸ್ಥಾನವನ್ನು ಕಹಿಯಾಗಲಿ ಆಕ್ರಮಿಸಲು ಸಾಧ್ಯವಿಲ್ಲವಾದ ಕಾರಣ "ಬೇವು-ಬೆಲ್ಲ" ಶತಶತಮಾನಗಳಿಂದ ಆಚರಣೆಯಲ್ಲಿ ಬಂದಿದೆ.

ವರ್ಷತೊಡಕು

ಯುಗಾದಿಯ ಮಾರನೆಯ ದಿನವೇ ವರ್ಷತೊಡಕು. ನಮ್ಮನ್ನು ನಾವು ಸತ್ಕಾರ್ಯದಲ್ಲಿ ತೊಡಗಿಸಿಕೊಳ್ಳುವ ದಿನವಿದು. ಅಲ್ಲದೆ ಇಡೀ ವರ್ಷದ ತೊಡಕುಗಳೆಲ್ಲಾ ನಿವಾರಣೆಯಾಗಲೆಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸುವ ದಿನವಿದು. ಯುಗಾದಿಗಿಂತಲೂ ಇದಕ್ಕೇ ಹೆಚ್ಚು ಪ್ರಾಶಸ್ತ್ಯ ಅಂದು ಸ್ಪರ್ಧಾತ್ಮಕವಾದ ಆಟಪಾಟಗಳೂ ಇರುತ್ತದೆ. ಅಂದು ವ್ಯಕ್ತಿ ಯಾವಯಾವ ಸತ್ಕಾರ್ಯಗಳನ್ನು ಮಾಡುತ್ತಾನೋ ಅದನ್ನು ವರ್ಷಾಂತ್ಯದವರೆಗೂ ಮಾಡುತ್ತಾನೆಂಬ ನಂಬಿಕೆ ಪ್ರಚಲಿತವಿದೆ.

ಇಂದು ನೂತನ ಅಳಿಯನನ್ನು ಹಬ್ಬಕ್ಕೆ ಆಹ್ವಾನಿಸುವ ಪದ್ಧತಿಯೂ ಕೆಲವರಲ್ಲಿದೆ. ಅಲ್ಲದೆ ಅಕ್ಕತಂಗಿಯರು ಅಣ್ಣತಮ್ಮಂದಿರನ್ನು ತಮ್ಮ ಮನೆಗಳಿಗೆ ಆಹ್ವಾನಿಸಿ ಹಬ್ಬದಡುಗೆ ಬಡಿಸಿ ತಮ್ಮ ಪ್ರೀತಿವಾತ್ಸಲ್ಯಗಳನ್ನು ತೋರಿಸುವುದು ಕೆಲವರಲ್ಲಿ ವಾಡಿಕೆ.

ಚಂದ್ರದರ್ಶನ

ವರ್ಷತೊಡಕಿನ ದಿನ ಸಾಯಂಕಾಲ ಆಬಾಲವೃದ್ಧರೇ ಆದಿಯಾಗಿ ಎಲ್ಲರೂ ಬಿದಿಗೆಚಂದ್ರನ ದರ್ಶನ ಮಾಡುತ್ತಾರೆ. ಇದು ಆಯುರ್ವೃದ್ಧಿಮಾಡುತ್ತದೆಂಬ ನಂಬಿಕೆಯೇ ಇದಕ್ಕೆ ಕಾರಣ. ಅಲ್ಲದೆ ಬಿದಿಗೆ ಚಂದ್ರದರ್ಶನ ಶ್ರೇಯಸ್ಕರವೆಂದೂ ಹೇಳುತ್ತಾರೆ. ಯುಗಾದಿಯಂದು ಬೆಳಗ್ಗೆ ಏಳುವಾಗ ಚಂದ್ರನಾಡಿಯಿಂದ ಉಸಿರಾಡುತ್ತ ಏಳಬೇಕೆಂಬುದು ಶಾಸ್ತ್ರವಿಧಿ. ನಮ್ಮ ಮೂಗಿನ ಹೊರಳೆಗಳಲ್ಲಿ ಎಡಹೊರಳೆ ಚಂದ್ರನಾಡಿಯಾದರೆ ಬಲಹೊರಳೆ ಸೂರ್ಯನಾಡಿ. ಚಂದ್ರನಾಡಿಯನ್ನು ಪಿಂಗಳನಾಡಿ, ಯಮುನಾನಾಡಿ ಎಂತಲೂ ಕರೆಯುತ್ತಾರೆ. ಚಂದ್ರನಾಡಿಯ ಉಸಿರಾಟ ದೇಹಕ್ಕೆ ತಂಪನ್ನುಂಟುಮಾಡುತ್ತದೆ. ಇದನ್ನು 'ಚಂದ್ರಾನುಲೋಮ ಪ್ರಾಣಾಯಾಮ' ಎನ್ನುತ್ತಾರೆ.

ಹೀಗೆ ಯುಗಾದಿ ಹಬ್ಬ ಎಲ್ಲ ದೃಷ್ಟಿಯಿಂದಲೂ ವೈಶಿಷ್ಟ್ಯಪೂರ್ಣವಾದುದು. ಇದು ಜೀವನದ ಪುನಶ್ಚೈತನ್ಯಕ್ಕೆ ಸಂಬಂಧಿಸಿದ್ದು, ಮನಸ್ಸಿನ ಹಳತನ್ನು ಕಳಚಿ, ಹೊಸ ಆಸೆ ಆಕಾಂಕ್ಷೆಗಳನ್ನು ನಿರೀಕ್ಷಿಸುವ ದಿನವೆಂಬುದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ.

ಯುಗಾದಿಯ ಧಾರ್ಮಿಕ–ಐತಿಹಾಸಿಕ ಮಹತ್ತ್ವ ವಿವರಿಸುವ ಈ ಲೇಖನಕ್ಕೆ ಪೂರಕವಾಗಿ ಆಧುನಿಕ ಖಗೋಳವಿಜ್ಞಾನದಲ್ಲಿ ಯುಗಾದಿ ಕುರಿತಂತೆ ಏನು ವಿವರಣೆ ಕೊಡಲಾಗಿದೆ ಎಂಬುದನ್ನು ಗಮನಿಸಬೇಕು : ಏಕೆಂದರೆ ಪರಂಪರೆಯ ಬೇರು–ಕಾಂಡಗಳನ್ನು ಆಧರಿಸಿ ವರ್ತಮಾನದ ಚಿಗುರು ಹೂ ಹಣ್ಣುಗಳು ನಳನಳಿಸುವುದು ಸೃಷ್ಟಿ ಧರ್ಮ. ಗಗನ ಮಂಡಲ ಮಧ್ಯದಲ್ಲಿ, ಸ್ಥಿರ ನಕ್ಷತ್ರ ಚಿತ್ರಗಳ ಮೇಲೆ, ಸೂರ್ಯ ನಮ್ಮ ಸುತ್ತ ಪಶ್ಚಿಮ–ಪೂರ್ವ ದಿಶೆಯಲ್ಲಿ ನಿತ್ಯ ಸಂಚಾರಿ ಆಗಿರುವಂತೆ ನಮಗೆ ಭಾಸವಾಗುತ್ತದೆ. ಈ ಪ್ರಾತಿಭಾಸಿಕ ವಾರ್ಷಿಕ ಪರಿಭ್ರಮಣೆಯ ಅವಧಿ ಸುಮಾರು ೩೬೫ ದಿವಸಗಳು; ಪರಿಭ್ರಮಣಕಕ್ಷೆ ಭೂಮಿ ಕೇಂದ್ರವಾಗಿರುವ ಒಂದು ಮಹಾವೃತ್ತ. ಇದರ ಹೆಸರು ಕ್ರಾಂತಿವೃತ್ತ. ಇದನ್ನು ಗುರುತಿಸಲು ಪರೋಕ್ಷವಾಗಿ (ನಿಖರವಾಗಿ ಅಲ್ಲ) ಅಶ್ವಿನಿಯಿಂದ ರೇವತಿವರೆಗಿನ ೨೭ ನಕ್ಷತ್ರಗಳು ಸಹಾಯಕಗಳಾಗುತ್ತವೆ: ಚಂದ್ರನ ನಾಕ್ಷತ್ರಿಕ ಪರಿಭ್ರಮಣಾವಧಿ (ಪಶ್ಚಿಮ–ಪೂರ್ವ ದಿಶೆ) ಸುಮಾರು ೨೭ ದಿವಸಗಳಾದ್ದರಿಂದ ಈ ಸಂಖ್ಯೆಗೆ ಪ್ರಾಶಸ್ತ್ಯ, ಅಷ್ಟೆ. ಭೂಮಿಯನ್ನು ನಿಶ್ಚಲ ಧ್ರುವನಕ್ಷತ್ರಕ್ಕೆ ಸೇರಿಸುವ ಅಕ್ಷದ ಸುತ್ತ ಇಡೀ ಖಗೋಳ ಪೂರ್ವ–ಪಶ್ಚಿಮ ದಿಶೆಯ ದೈನಂದಿನ ಆವರ್ತನೆಯಲ್ಲಿರುವ ಇನ್ನೊಂದು ದೃಶ್ಯವೂ ನಮ್ಮ ಅನುಭವಕ್ಕೆ ಬರುತ್ತದೆ. ಗಗನಕಾಯಗಳ ದೈನಂದಿನ ಮೂಡು-ಮೇಲೇರು-ಕೆಳಗಿಳಿ-ಕಂತು ಚಲನೆಯ ಕಾರಣವಿದು. ಈ ಚಲನೆಯಲ್ಲಿ ಧ್ರುವನಕ್ಷತ್ರ ಮಾತ್ರ ಭಾಗವಹಿಸದು. ಭೂಮಿ—ಧ್ರುವನಕ್ಷತ್ರ ಅಕ್ಷಕ್ಕೆ ಭೂಮಿ ಮೂಲಕ ಲಂಬವಾಗಿ ಸಮತಲವನ್ನು ರಚಿಸಿದರೆ ಇದು ಖಗೋಳವನ್ನು ಕ್ರಾಂತಿವೃತ್ತಕ್ಕಿಂತ ಬೇರೆಯದಾದ ಇನ್ನೊಂದು ಮಹಾವೃತ್ತದಲ್ಲಿ ಛೇದಿಸುತ್ತದೆ. ಇದು ವಿಷುವದ್ವೃತ್ತ. ಕ್ರಾಂತಿವೃತ್ತವೂ ವಿಷುವದ್ವೃತ್ತವೂ ಎರಡು ವ್ಯಾಸೀಯ ವಿರುದ್ಧ ಬಿಂದುಗಳಲ್ಲಿ (ಭೂಮಿಕೇಂದ್ರವೆಂಬುದು ನೆನಪಿರಲಿ) ಪರಸ್ಪರ ಛೇದಿಸುತ್ತವೆ. ಇವು ವಿಷುವದ್ಬಿಂದುಗಳು. ಕ್ರಾಂತಿವೃತ್ತಗಾಮಿ ಸೂರ್ಯ ವಿಷುವದ್ವೃತ್ತವನ್ನು ದಕ್ಷಿಣದಿಂದ ಉತ್ತರಕ್ಕೆ ದಾಟುವ ಬಿಂದುವಿಗೆ ವಸಂತ ವಿಷುವವೆಂದೂ ಉತ್ತರದಿಂದ ದಕ್ಷಿಣಕ್ಕೆ ದಾಟುವ ಬಿಂದುವಿಗೆ ಶರದ್ವಿಷುವವೆಂದೂ ಹೆಸರು. ಈ ದಿನಾಂಕಗಳು ಅನುಕ್ರಮವಾಗಿ ಮಾರ್ಚ್ ೨೨ ಮತ್ತು ಸೆಪ್ಟೆಂಬರ್ ೨೩. ಅಂದು (ಆ ದಿನಗಳಂದು ಮಾತ್ರ) ಸೂರ್ಯ ಪೂರ್ವ ಬಿಂದುವಿನಲ್ಲಿ ಮೂಡಿ ಪಶ್ಚಿಮ ಬಿಂದುವಿನಲ್ಲಿ ಕಂತುತ್ತದೆ; ಅಲ್ಲದೇ ಅಂದು ಹಗಲು-ಇರುಳುಗಳ ಅವಧಿಗಳು ಸಮ. ಉತ್ತರಗೋಳಾರ್ಧ ನಿವಾಸಿಗಳಾದ ನಮಗೆ ವಸಂತ ವಿಷುವ ಅಧಿಕ ಆತ್ಮೀಯವಾದದ್ದು—ಇದು ವಸಂತ ಋತು ಆಗಮನದ ಸೂಚಕವಾಗಿರುವುದರಿಂದ. ಒಂದು ಕಾಲದಲ್ಲಿ ವಸಂತ ವಿಷುವ ಅಶ್ವಿನೀ ನಕ್ಷತ್ರದಲ್ಲಿದ್ದದ್ದು ನಿಜ. ಆದರೆ ಈಗ ವಸಂತ ವಿಷುವ ಉತ್ತರಾಷಾಢಾ-ರೇವತಿ ಖಂಡದಲ್ಲಿದೆ—ಮಾರ್ಚ್ ೨೨. ಆದ್ದರಿಂದ ಖಗೋಳದ ಪ್ರಕಾರ ಇರುವುದು ಒಂದೇ ಯುಗಾದಿ. ಅದು ಮಾರ್ಚ್ ೨೨. ಮಿಕ್ಕ ಎಲ್ಲ ಯುಗಾದಿಗಳೂ ಅಂತಸತ್ತ್ವರಹಿತ ಶುಷ್ಕ ಆಚರಣೆಗಳು. ವರಾಹಮಿಹಿರನಂಥ ವಿಜ್ಞಾನ-ಧರ್ಮ ಸಂಗಮ ಪುರುಷ ರಂಗಪ್ರವೇಶಿಸಿದಾಗ ಮಾತ್ರ ಈ ಯುಗಾದಿ, ಅಂತೆಯೇ ಉತ್ತರಾಯಣ ಪುಣ್ಯಕಾಲ, ಗೊಂದಲಗಳು ನಿವಾರಣೆ ಆದಾವು, ಅಷ್ಟೆ.

ಸಂ.

ಸತ್ಯವಂತರಿಗಿದು ಕಾಲ?

ಮುಳಿಯ ಸರಸ್ವತಿ
೯೨೬/೪, "ಸ್ವರ್ಣವಿಲಾಸ" ೮ನೇ ಮುಖ್ಯರಸ್ತೆ
ಲಕ್ಷ್ಮೀಪುರಂ, ಮೈಸೂರು–೫೭೦ ೦೦೯.

ಪುರಂದರದಾಸರು ಹಾಡಿದರು : ಸತ್ಯವಂತರಿಗಿದು ಕಾಲವಲ್ಲ, ದುಷ್ಟಜನರಿಗೆ ಸುಭಿಕ್ಷ ಕಾಲ, ಧರ್ಮ ಮಾಡುವವ ನಿರ್ಮೂಲವಾಗುವಕಾಲ ಕರ್ಮಿ ಪಾತಕರಿಗೆ ಬಹು ಸೌಖ್ಯಕಾಲ." ಇನ್ನೊಮ್ಮೆ ಬೋಧಿಸಿದರು. "ಸತ್ಯವೆಂಬುದೆ ಸ್ನಾನ ಉಪವಾಸ ಜಪನೇಸು ಅಸತ್ಯದಲಿ ಮಾಡುವ ಕರ್ಮ ವ್ಯರ್ಥ." ಹಾಗಾದರೆ ಸತ್ಯ ಎಂದರೇನು ?

"ಸತ್ಯಮೇವ ಜಯತೇ", ಯಾವಾಗಲೂ ಸತ್ಯಕ್ಕೇ ಗೆಲವು. ನಾವು ಚಿಕ್ಕವರಿರುವಾಗಿನಿಂದಲೂ ನಮಗೆ ಹಿರಿಯರು "ಯಾವಾಗಲೂ ಸತ್ಯವನ್ನೇ ನುಡಿಯಬೇಕು" ಎನ್ನುವ ಹಿತವಾಕ್ಯ ಬೋಧಿಸುತ್ತಿರುತ್ತಾರೆ. ಆದರೆ ಕೆಲವೊಮ್ಮೆ ನಾವು ಅದರಂತೆ ನಡೆಯುವುದಿಲ್ಲ; ಹಾಗೆ ನಡೆಯಲಾಗುವುದಿಲ್ಲ ಎನ್ನುವುದೂ ಎಲ್ಲರೂ ಮನಗಂಡ ಸತ್ಯ. ಪ್ರತಿಯೊಬ್ಬನೂ ತನ್ನ ಜೀವನದಲ್ಲಿ ಒಮ್ಮೆಯಾದರೂ ಸುಳ್ಳು ಹೇಳಿಯೇ ಹೇಳಿರುತ್ತಾನೆ ಎಂಬುದೂ ಅಷ್ಟೇ ನಿಜ.

"ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಮಪ್ರಿಯಂ" ಎಂಬುದು ನೀತಿವಚನ, ಅಂದರೆ, ಎಂದಿಗೂ ಸತ್ಯವನ್ನೇ ನುಡಿ. ನುಡಿಯುವ ಸತ್ಯ ಪ್ರಿಯವಾಗಿರಲಿ. ಇನ್ನೊಬ್ಬರಿಗೆ ಅಪ್ರಿಯವಾಗುವಂತಹ ಸತ್ಯವನ್ನು ಮಾತ್ರ ನುಡಿಯಬೇಡ ಎಂದೆ ಗಾಂಧೀಜಿಯವರು ಯಾವತ್ತೂ ಸುಳ್ಳು ಹೇಳಿರಲಿಲ್ಲವಂತೆ. ಸಣ್ಣಂದಿನಲ್ಲಿ ನೋಡಿದ "ಸತ್ಯ ಹರಿಶ್ಚಂದ್ರ" ನಾಟಕವೇ ಇದಕ್ಕೆ ಪ್ರೇರಕವಂತೆ. ಒಮ್ಮೆ ಅವರ ಶಾಲೆಗೆ ಶಾಲಾ ಇನ್ಸ್‌ಪೆಕ್ಟರ್ ಬಂದಿದ್ದಾಗ, ಗಾಂಧೀಜಿಯವರು, ಗಣಿತವನ್ನು ತಪ್ಪಾಗಿ ಮಾಡಿದ್ದರಂತೆ. ಆಗ ಅವರ ಉಪಾಧ್ಯಾಯರು, "ಪಕ್ಕದಲ್ಲಿ ಕುಳಿತ ಹುಡುಗ ಸರಿ ಮಾಡಿದ್ದಾನೆ, ಅದನ್ನು ನೋಡಿ ತಿದ್ದಿಕೋ" ಎಂದು ಸಂಜ್ಞೆ ಮಾಡಿದರೂ, ಗಾಂಧೀಜಿಯವರು ಹಾಗೆ ಮಾಡದೆ ತಾನು ಮಾಡಿದ ತಪ್ಪು ಲೆಕ್ಕವನ್ನೇ ತೋರಿಸಿದರಂತೆ. ಉಪಾಧ್ಯಾಯರ ಉಪದೇಶವನ್ನು ಪಾಲಿಸಿದರೆ ತಾನು ಸುಳ್ಳು ಹೇಳಿದಂತಾಗುತ್ತದೆ ಎಂದು ಬಾಲಕ ಗಾಂಧಿಯ ಅನಿಸಿಕೆ. ವಿಷಯ ತಿಳಿದ ಇನ್ಸ್‌ಪೆಕ್ಟರ್ ಗಾಂಧೀಜಿಯ ಸತ್ಯಪರಿಪಾಲನೆಯನ್ನು ಎಲ್ಲರ ಮುಂದೆ ಪ್ರಶಂಸಿಸಿದರಂತೆ. ಹಾಗೆಯೇ ಇನ್ನೊಮ್ಮೆ ತಂದೆಯ ಬೆನ್ನು

ಕದ್ದು ತಾನೇ ಕದ್ದದ್ದು ಎಂದು ಒಪ್ಪಿಕೊಂಡರಂತೆ. ಹೀಗೆ ಯಾವ ಪರಿಸ್ಥಿತಿಯಲ್ಲೂ ಸತ್ಯವನ್ನೇ ಹೇಳಲು ತುಂಬಾ ಮನೋಸ್ಥೈರ್ಯ ಬೇಕಾಗುತ್ತದೆ.

ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಎಂಬ ಗಾದೆಯು ಮಾತೇ ಇದೆ. ಅಂಥ ಸಂದರ್ಭಗಳಲ್ಲಿ ಸುಳ್ಳಿಗೂ ಮಹತ್ವವಿದೆ. ಕಾರಣಾಂತರಗಳಿಂದ ಹೊತ್ತಾಗಿ ಶಾಲೆ ತಲಪುವ ವಿದ್ಯಾರ್ಥಿ ಒಂದು ದಿನವಾದರೂ ನಿಜವಾದ ಕಾರಣ ಹೇಳಿದ್ದಿದೆಯಾ? "ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ" ಎನ್ನುವ ಗಾದೆ ಎಷ್ಟು ಸತ್ಯ ಎಂದು ವಿಚಾರಿಸಬೇಕಾಗಿದೆ. ದಿನ ನಿತ್ಯದ ಜೀವನದಲ್ಲಿ ಜನಸಾಮಾನ್ಯರಾದ ನಾವು ಸಾಕಷ್ಟು ಸಣ್ಣಪುಟ್ಟ ಸುಳ್ಳುಗಳನ್ನು ಹೇಳುತ್ತಲೇ ಇರುತ್ತೇವೆ. ಆದರೆ ನಾವು ಹೇಳಿದ ಸುಳ್ಳಿನಿಂದ ಯಾರಿಗೂ ಹಾನಿಯಾಗಬಾರದು. ಕೃಷ್ಣ ಒಂದು ಕಡೆ ಹೇಳುತ್ತಾನೆ "ಯದ್ಭೂತಹಿತಂ ಅತ್ಯಂತಂ ಸತ್ಯಂ ಇತಿ ಧಾರಯೇತ್" ಅಂದರೆ ಯಾವುದು ಜೀವಿಗಳಿಗೆ ಹಿತವನ್ನುಂಟು ಮಾಡುತ್ತದೆಯೋ, ಅದನ್ನೇ ಪರಮ ಸತ್ಯ ಎಂದು ಪರಿಗಣಿಸಬೇಕು.

ನೀತಿಕಥೆಯೊಂದರಲ್ಲಿ ಒಬ್ಬ ಬೇಡರವನು ಒಂದು ಜಿಗರೆ ಮರಿಯನ್ನು ಅಟ್ಟಿಸಿಕೊಂಡು ಒಂದು ಆಶ್ರಮದ ಒಳಗೆ ನುಗ್ಗುತ್ತಾನೆ. ಚುರುಕಾಗಿ ಓಡಿದ ಮರಿ ಆಶ್ರಮದಲ್ಲಿ ಅಡಗಿಕೊಂಡಿತು. ಹಿಂದಿನಿಂದ ಬಂದ ವ್ಯಾಧ, ಅಲ್ಲಿದ್ದ ಋಷಿಯನ್ನು ಜಿಗರೆ ಮರಿಯೊಂದನ್ನು ಕಂಡಿರಾ ಎಂದು ಕೇಳಿದಾಗ ಋಷಿ "ನಾನು ನೋಡಲಿಲ್ಲವಲ್ಲಾ" ಎಂದನಂತೆ. ಋಷಿಗೆ ಸತ್ಯ ಗೊತ್ತಿತ್ತು. ಆದರೆ ಅವನು ಸತ್ಯವನ್ನೇ ನುಡಿದಿದ್ದರೆ ಬಡಪಾಯಿ ಜಿಗರೆ ಮರಿಯನ್ನು ಬೇಡ ಕೊಲ್ಲದೇ ಬಿಡುತ್ತಿದ್ದನೇ. ಹಾಗಾಗಿಯೇ ಋಷಿ ಒಂದು ಸಣ್ಣ ಸುಳ್ಳು ಹೇಳಿ ಅದರ ಜೀವವನ್ನು ಉಳಿಸಿದ. ಇಲ್ಲಿ ಈ ಸಣ್ಣ ಸುಳ್ಳಿಗೆ ಸತ್ಯದಷ್ಟೇ ಬಲ ಬಂತು. ಅಂದರೆ ನಾವಾಡುವ ಸುಳ್ಳಿನಿಂದ ಒಂದು ಜೀವ ಬದುಕಿಕೊಳ್ಳುತ್ತದೆಂದಾದರೆ ಸುಳ್ಳೇ ಸತ್ಯಕ್ಕಿಂತ ಬಲಶಾಲಿ. ಹಾಗೆಂದು ಯಾವಾಗಲೂ ಸುಳ್ಳನ್ನೇ ಹೇಳುತ್ತಿರಬೇಕೆಂದಲ್ಲ.

ಸತ್ಯ ಬಹುಮುಖವುಳ್ಳದ್ದು. ನಾವು ಕಂಡದ್ದೆಲ್ಲಾ ಸತ್ಯ ಎಂದು ಭಾವಿಸುತ್ತಾ ಬಂದಿದ್ದೇವೆ. ಆದರೆ ಅದು ಎಷ್ಟೋ ಸಲ ಸುಳ್ಳಾಗಿದೆ. ಉದಾಹರಣೆಗೆ, ಹೊರ ನೋಟಕ್ಕೆ ಭೂಮಿ ಚಪ್ಪಟೆಯಾಗಿ ಕಾಣುತ್ತದೆ. ಒಂದಾನೊಂದು ಕಾಲದಲ್ಲಿ ನಮ್ಮ ಪೂರ್ವಜರು ಭೂಮಿ ಚಪ್ಪಟ್ಟೆಯಾಗಿದೆ ಎಂದೇ ಅಂದುಕೊಂಡಿದ್ದರು. ಆದರೆ, ನಿಜವಾಗಿ ಭೂಮಿ ಗುಂಡಗಿದೆ ಎಂದು ಈಗ ಪ್ರಾಥಮಿಕ ಶಾಲಾ ಮಕ್ಕಳಿಗೂ ಗೊತ್ತಿದೆ. ಇದು ವೈಜ್ಞಾನಿಕ ಸತ್ಯ. ಆದರೂ ಭೂಮಿಯ ಮೇಲ್ಮೈ ಚಪ್ಪಟೆಯಾಗಿಯೇ ಕಾಣುತ್ತದೆ ಎಂಬುದು ವ್ಯಾವಹಾರಿಕ ಸತ್ಯ. ನಮ್ಮ ಇಂದ್ರಿಯಗಳಿಗೆ ಗೋಚರಿಸುವ ಅಥವಾ ಕಂಡ ಸತ್ಯ ಭಾಸವಾಗುವ ಸತ್ಯ. ನೀರು ಎಂದ ಕೂಡಲೇ ನಮ್ಮ ಕಣ್ಣಿಗೆ ಕಾಣುವುದು ಅದರ ದ್ರವರೂಪ. ಆದರೆ ನೀರಿನ ಘನ ರೂಪವಾದ ಮಂಜುಗಡ್ಡೆ ಹಾಗೂ ಅನಿಲ ರೂಪವಾದ ಆವಿ ನೆನಪಿಗೆ ಬರುವುದಿಲ್ಲ.

ಇದೇ ರೀತಿ ಸತ್ಯ ಕೂಡಾ ನಾವರಿಯದಂತೆ ಬೇರೆ ಬೇರೆ ರೂಪದಲ್ಲಿ ಇರುತ್ತದೆ.

ಮಹಾಭಾರತದಲ್ಲಿ ಸತ್ಯಧರ್ಮ ಪರಾಯಣನೆಂದೇ ಪ್ರಸಿದ್ಧನಾದ ಧರ್ಮ ರಾಯನಿಂದಲೇ ಶ್ರೀ ಕೃಷ್ಣ ಸುಳ್ಳು ಹೇಳಿಸಿದ್ದು ಯಾರಿಗೆ ಗೊತ್ತಿಲ್ಲ ಮಗನಾದ ಅಶ್ವತ್ಥಾಮ ಸತ್ತನೆಂದು ಸಾರಿ ದ್ರೋಣನ ಯುದ್ಧವನ್ನು ನಿಲ್ಲಿಸಲು, ಅದೇ ಹೆಸರಿನ ಆನೆಯೊಂದನ್ನು ಕೊಂದು, ಧರ್ಮರಾಯ ನಿಂದ "ಅಶ್ವತ್ಥಾಮೋ ಹತಃ ಕುಂಜರಃ" ಎಂದು ಶ್ರೀಕೃಷ್ಣ ಹೇಳಿಸಿದ. ಆದರೆ ಅವನು ಕುಂಜರಃ ಎನ್ನುವಷ್ಟರಲ್ಲಿ ಶಂಖ ನಿನಾದ ದ್ರೋಣ ಶಸ್ತ್ರಸನ್ಯಾಸ ಮಾಡುವಂತೆ ಮಾಡಿದ. ಧರ್ಮರಾಯ ಸತ್ಯವನ್ನೇ ನುಡಿದಿದ್ದರೂ, ದ್ರೋಣ ತನ್ನ ಮಗನೆ ಸತ್ತನೆಂದುಕೊಂಡ. ಹೀಗೆ ಸತ್ಯಕ್ಕೆ ಯಾವಾ ಗಲೂ ಜಯವಿದ್ದರೂ, ಒಮ್ಮೊಮ್ಮೆ ಸುಳ್ಳಿನೆದುರು ತಲೆಬಾಗುತ್ತದೆ ಎನ್ನು ವುದೂ ಅಷ್ಟೇ ನಿಜ.

ಹೀಗೆ ಸುಳ್ಳು ಮತ್ತು ಸತ್ಯಗಳು ಪರಸ್ಪರ ವಿರುದ್ಧಾರ್ಥ ಕೊಡುವ ಪದಗಳಾ ದರೂ ಅವುಗಳ ನಡುವಿನ ಅಂತರ ಎಷ್ಟೋ ಸಲ ಗೌಣವಾಗುತ್ತದೆ. ಎಂದಿಗೂ ಸತ್ಯಕ್ಕೇ ಜಯ ಎಂಬುದಂತೂ ನಿಜ, ಆದುದ ರಿಂದಲೇ "ಸತ್ಯಂ ವದ, ಧರ್ಮಂ ಚರ" ಎಂಬುದು ನೀತಿವಾಕ್ಯ.



ನಂಬಿಕೆ ; ತನ್ನ ಶಕ್ತಿಯಲ್ಲಿ ನಂಬಿಕೆ, ದೇವರಲ್ಲಿ ನಂಬಿಕೆ-ಇದೇ ಮಹಿಮೆ ರಹಸ್ಯ

ನಿಮ್ಮ ನರಗಳನ್ನು ಬಲಿಷ್ಠವನ್ನಾಗಿ ಮಾಡಿಕೊಳ್ಳಿ. ನಿಮಗೆ ಬೇಕಾಗಿರುವುದು ಕಬ್ಬಿಣ ದಂತಹ ಮಾಂಸಖಂಡಗಳು ; ಮತ್ತು ಉಕ್ಕಿನಂತಹ ನರಗಳು.

ಮೊದಲು ಅನ್ನ ; ಅನಂತರ ಧರ್ಮ

—ಸ್ವಾಮಿ ವಿವೇಕಾನಂದ

ಹೆದ್ದಾರಿಯಲ್ಲಿ ಕೊಲೆಗಡುಕರು

ಭಾರತಿ ಎಸ್. ಭಟ್
೫೩೩, ಮೊದಲನೆ ಮಹಡಿ
೧೫ ನೇ ಮುಖ್ಯರಸ್ತೆ, ೫ ನೇ ಅಡ್ಡರಸ್ತೆ
ಸರಸ್ವತಿಪುರಂ, ಮೈಸೂರು-೯

ಫ್ಲೋರಿಡಾಕ್ಕೆ ಹೋಗುವ ಹೆದ್ದಾರಿಯಲ್ಲಿ ಬಿಸಿ ಗಾಳಿ ಬೀಸುತ್ತಿತ್ತು. ೫೯ ವರ್ಷ ಪ್ರಾಯದ ಎಡಿತ್ ಸಿಲ್ವರ್ ತನ್ನ ಹೊಸ ಹಸುರು ಬಣ್ಣದ ಬಿ ಎಂ ಡಬ್ಲ್ಯು ಕಾರಿನಲ್ಲಿ ವೇಗವಾಗಿ ಹೋಗುತ್ತಿದ್ದಳು. ಕಾರಿನ ಮಾಡನ್ನು ತೆರೆದಿರಿಸಿದುದರಿಂದ ಅವಳ ಮೇಲೆ ಬಿಸಿಲು ಬೀಳುತ್ತಿತ್ತು. ಆದರೆ ಅದು ಆಕೆಯ ಲಕ್ಷ್ಯಕ್ಕೆ ಬಂದಿರಲಿಲ್ಲ. ಆಕೆಯ ಕೂದಲು ಗಾಳಿಗೆ ಹಾರಾಡುತ್ತಿತ್ತು. ತನ್ನ ಹೊಸ ಎಸ್ಟೇಟ್ ಏಜೆಂಟ್ ಕೆಲಸಕ್ಕೆ ಸೇರುವ ಮುನ್ನ ಒಂದು ಪ್ರವಾಸಕ್ಕೆ ಹೋಗಬೇಕೆಂದು ಕೂಡ ಅವಳು ಆಲೋಚಿಸುತ್ತಿದ್ದಳು. ಅಂದು ಸಾಯಂಕಾಲ ಆಕೆ ಬೋನಿಟ್ ಸ್ಪ್ರಿಂಗ್‌ಗೆ ತನ್ನ ಹೊಸ ಕೆಲಸದ ಕಾರ್ಡುಗಳನ್ನು ತರಲು ಹೊರಟಿದ್ದಳು.

ಹೆದ್ದಾರಿಯ ಬದಿಯಲ್ಲಿ ಪೊಲೀಸಿನವನೊಬ್ಬ ಒಂದು ಕಾರನ್ನು ನಿಲ್ಲಿಸಿ ಅದರ ತನಿಖೆಗೆ ತೊಡಗಿದ್ದ. ಆದರೆ ಅದು ಆಕೆಯ ಗಮನಕ್ಕೆ ಬಂದಿರಲಿಲ್ಲ. ಅವಳು ಸೀದಾ ಮುಂದಕ್ಕೆ ಹೋಗುತ್ತಿದ್ದಳು. ಪೊಲೀಸಿನವನು ತಾನು ನಿಲ್ಲಿಸಿದ ಕಾರಿನ ಹತ್ತಿರ ಹೋಗಿ ವಿಚಾರಣೆಗೆ ತೊಡಗಿದ. ಆ ಕಾರಿನಲ್ಲಿ ಇಬ್ಬರು ಯುವಕರಿದ್ದರು. ಅವರಲ್ಲಿ ಕಾರು ಬಿಡುತ್ತಿದ್ದವನ ಹತ್ತಿರ ಡ್ರೈವಿಂಗ್ ಲೈಸೆನ್ಸ್ ತೋರಿಸಲು ಹೇಳಿದ. ಆದರೆ ಅವನು ತೋರಿಸಿದ್ದು ಬೇರೊಬ್ಬನ ಲೈಸೆನ್ಸ್ ಆಗಿತ್ತು. ಆ ಕಾರನ್ನು ತಾವು ತಮ್ಮ ಗೆಳೆಯನ ಕೈಯಿಂದ ತೆಗೆದುಕೊಂಡಿರುವುದಾಗಿ ಅವರು ಹೇಳಿದರು. ಆದರೆ ಆ ಗೆಳೆಯನ ಹೆಸರೇನೆಂದು ಕೇಳಿದಾಗ ಅದನ್ನು ಹೇಳಲು ಅವರಿಗೆ ಸಾಧ್ಯವಾಗಲಿಲ್ಲ. ಅವರು ಡ್ರೈವಿಂಗ್ ಲೈಸೆನ್ಸ್‌ನಲ್ಲಿ ಯಾವ ಹೆಸರಿತ್ತೆಂಬುದನ್ನು ನೋಡಿರಲಿಲ್ಲ. ಕಾರನ್ನು ಎಲ್ಲೋ ಕದ್ದು ಬಂದಿದ್ದರು.

"ಎಂಜಿನ್ ಆಫ್ ಮಾಡಿ ಕೆಳಗಿಳಿಯಿರಿ" ಎಂದ ಪೊಲೀಸಿನವ. ಆದರೆ ಹಾಗೆ ಹೇಳುತ್ತಿದ್ದಂತೆ ಕಾರಿನಲ್ಲಿದ್ದ ಜಾರ್ಜ್ ಎಂಬಾತ ಕಾರನ್ನು ಮುಂದಕ್ಕೆ ಓಡಿಸಿದ.

ಪೊಲೀಸಿನವ ಆ ಕಾರನ್ನು ತನ್ನ ಕಾರಿನಲ್ಲಿ ಹಿಂಬಾಲಿಸಲು ಪ್ರಯತ್ನಿಸಿದ.

ಮೂಲ: ೧೯೯೮ರ ಡಿಸೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಅನಿತಾಬರ್ ತೊಲೋಮಿ ಅವರ ಲೇಖನ.

ಇದನ್ನು ನೋಡಿ ಕಾರಿನಲ್ಲಿದ್ದ ಇನ್ನೊಬ್ಬ ಪಿಸ್ತೂಲಿನಿಂದ ಆತನ ಕಾರಿನ ಮೇಲೆ ಗುಂಡು ಹಾರಿಸಲು ಸುರು ಮಾಡಿದ.

ಗುಂಡು ಕಾರಿನ ಟಯರಿನೊಳಕ್ಕೆ ಹೋಯಿತು. ಪೊಲೀಸಿನವ ಕಷ್ಟದಿಂದ ಕಾರನ್ನು ಹತೋಟಿಗೆ ತರುವಷ್ಟರಲ್ಲಿ ಇನ್ನೊಂದು ಗುಂಡು ಎದುರಿರುವ ಕನ್ನಡಿಯ ಮೇಲೆ ಬಿತ್ತು. ಇನ್ನು ಮುಂದಕ್ಕೆ ಹೋಗುವುದು ಅಸಾಧ್ಯವೆಂದು ಮನಸ್ಸಿಲ್ಲದಿದ್ದರೂ ಆತ ಕಾರನ್ನು ಅಲ್ಲೇ ನಿಲ್ಲಿಸಬೇಕಾಯಿತು. ಪೊಲೀಸ್ ಸ್ಟೇಷನ್ನಿಗೆ ಫೋನ್ ಮಾಡಿ ವಿಷಯವನ್ನೆಲ್ಲ ತಿಳಿಸಿದ.

ಬೋನಿಟ್ ಸ್ಪ್ರಿಂಗ್‌ಗೆ ತಿರುಗುವ ರಸ್ತೆ ಬಂದಾಗ ಎಡಿತ್ ಸಿಲ್ವರ್ ತನ್ನ ಕಾರಿನ ವೇಗವನ್ನು ಕಡಿಮೆ ಮಾಡಬೇಕಾಯಿತು. ಆಗ ಅವಳ ಹಿಂದಿನಿಂದ ವೇಗವಾಗಿ ಬರುತ್ತಿದ್ದ ಆ ಕಳ್ಳರ ಕಾರು ಅವಳ ಕಾರಿನ ಎದುರಿಗೆ ಅಡ್ಡವಾಗಿ ಬಂದು ನಿಂತಿತು. ಮತ್ತು ಅದರಲ್ಲಿದ್ದವರು ಇಬ್ಬರು ಕೆಳಗಿಳಿದು ಓಡಿ ಬಂದು ಅವಳ ಕಾರಿನಲ್ಲಿ ಹತ್ತಿ ಕುಳಿತರು.

"ನಾವು ಹೇಳಿದ ಹಾಗೆ ಮಾಡು, ಇಲ್ಲವಾದರೆ ಸತ್ತು ಹೋಗುತ್ತಿ" ಎಂದು ಅವರಲ್ಲೊಬ್ಬ ಪಿಸ್ತೂಲನ್ನು ಅವಳ ಕಡೆಗೆ ತೋರಿಸುತ್ತ ಹೇಳಿದ.

"ಕಾರನ್ನು ನೀವೇ ಇಟ್ಟುಕೊಳ್ಳಿ, ನಾನು ಕೆಳಗೆ ಇಳಿದು ಬಿಡುತ್ತೇನೆ" ಎಂದಳು ಆಕೆ.

"ಅದೆಲ್ಲ ಆಗುವುದಿಲ್ಲ, ನೀನೇ ಕಾರು ಬಿಡು" ಎಂದು ಆತ ಜೋರಾಗಿ ಹೇಳಿದ.

೩೦ ವರ್ಷದ ವಿಲ್ ಕಿಲ್ಮರ್ ಎಂಬಾತನೊಬ್ಬ ಅದೇ ಹೆದ್ದಾರಿಯಲ್ಲಿ ಹೋಗುತ್ತಿದ್ದ. ಅವನಿಗೆ ಈ ದೃಶ್ಯ ಕಾಣಿಸಿತು. ಒಂದು ಕಾರಿನಲ್ಲಿದ್ದವರು ಓಡುತ್ತಾ ಹೋಗಿ ಇನ್ನೊಂದು ಕಾರಿನ ಬಾಗಿಲನ್ನೂ ತೆರೆಯದೆ ಒಳಗೆ ಹಾರಿ ಕುಳಿತುದನ್ನು ನೋಡಿ ಆತನಿಗೆ ಸಂಶಯ ಬಂತು. ಅದು ಆ ಮಾರ್ಗದಿಂದ ತಿರುಗಿ ಹೆದ್ದಾರಿಯನ್ನು ಸೇರುತ್ತಿದ್ದಂತೆ ಆತ ಅದರ ನಂಬರ್ ಪ್ಲೇಟನ್ನು ಗಮನಿಸಿಕೊಂಡ.

ಹೆದ್ದಾರಿಯಲ್ಲಿ ಸ್ವಲ್ಪ ದೂರ ಹೋಗಿ ಆ ಬಿಯಂಡಬ್ಲ್ಯು ಕಾರು ಪುನಃ ಹೆದ್ದಾರಿಯನ್ನು ಬಿಟ್ಟು ಬಲಕ್ಕೆ ತಿರುಗಿತು. ಕಿಲ್ಮರ್ ಅಲ್ಲಿಂದಲೇ ತನ್ನ ಕಾರನ್ನು ಹಿಂದಕ್ಕೆ ತಿರುಗಿಸಿ ಅವರು ಬಿಟ್ಟು ಬಂದ ಕಾರಿರುವಲ್ಲಿಗೆ ಓಡಿಸಿದ.

ಎಡಿತ್ ಸಿಲ್ವರ್ ಹತ್ತಿರ ಜಾರ್ಜ್ ಹೇಳಿದ, "ನೀನು ನಾವು ಹೇಳಿದ ಹಾಗೆ ಮಾಡಿದರೆ ಸರಿ. ಸ್ವಲ್ಪ ಏನಾದರೂ ಅನುಮಾನ ಬರುವ ಹಾಗೆ ಮಾಡಿದೆಯಾದರೆ ನಿನ್ನ ಪ್ರಾಣ ಉಳಿಯಲಿಕ್ಕಿಲ್ಲ". ಆಕೆಗೆ ಅವರೊಡನೆ ಚರ್ಚಿಸುವುದು ಬೇಕಿರಲಿಲ್ಲ. ಆಕೆಗೆ ತನ್ನ ಮಕ್ಕಳನ್ನು ಮತ್ತೊಮ್ಮೆ ಮೊಮ್ಮಕ್ಕಳನ್ನು ಪುನಃ ನೋಡಬೇಕೆಂಬ ಬಯಕೆಯಿತ್ತು.

ಜಾರ್ಜನ ತಮ್ಮ ಡೇವಿಡ್ ಹಿಂದೆ ಕುಳಿತಿದ್ದ. ಜಾರ್ಜ್ ಮುಂದೆ ಕುಳಿತುಕೊಂಡು ಎಡಿತ್‌ಗೆ ಆದಷ್ಟು ಬೇಗನೆ ಕಾರು ಓಡಿಸುವಂತೆ ಹೇಳುತ್ತಿದ್ದ. ಮಾಡು ತೆರೆದಿಟ್ಟ ಕಾರಿನಲ್ಲಿ ತಮ್ಮನ್ನು ಜನರು ಬೇಗನೆ ಗುರುತು ಹಿಡಿಯಬಹುದೆಂದು ಗ್ರಹಿಸಿ ಅವನು ಕಾರಿನ ಮೇಲ್ಭಾಗವನ್ನು ಮುಚ್ಚುವಂತೆ ಆಕೆಗೆ ಹೇಳಿದ. ಕಿಟಕಿಯ ಗಾಜುಗಳನ್ನೂ ಮೇಲೆ ಮಾಡಲು ಹೇಳಿದ.

ಬೋನಿಟಾ ಸ್ಪ್ರಿಂಗ್‌ಗೆ ತಿರುಗುವ ಜಾಗದಲ್ಲಿ ಬಹಳ ಮಂದಿ ಪೊಲೀಸರು ಗುಂಪುಕೂಡಿದ್ದರು. ಕಿಲ್ಮರ್ ಅಲ್ಲಿಗೆ ಬಂದು, ಕ್ಷಮಿಸಿ, ನೀವು ಹುಡುಕುತ್ತಿರುವ ವ್ಯಕ್ತಿಗಳು ಇನ್ನೊಂದು ಕಾರಿನಲ್ಲಿ ಪರಾರಿಯಾಗಿದ್ದಾರೆ" ಎಂದು ತಿಳಿಸಿದ.

ತಾನು ನೋಡಿದ ಸಂಗತಿಗಳನ್ನೆಲ್ಲ ಆತ ತಿಳಿಸಿದಾಗ ಅವರು ಆತನಿಂದ ಆ ಕಾರಿನ ನಂಬರನ್ನು ತಿಳಿದುಕೊಂಡು ಫೋನಿನ ಮೂಲಕ ಆ ಕಾರನ್ನು ತಡೆಯುವಂತೆ ಬೇರೆ ಪೊಲೀಸರಿಗೆ ತಿಳಿಸಿದರು.

ಜಾರ್ಜ್ ಒಂದಾದ ಮೇಲೆ ಒಂದರಂತೆ ಸಿಗರೇಟು ಸೇದುತ್ತಿದ್ದ. ತುಂಬಾ ಉದ್ರಿಕ್ತನಾಗಿರುವಂತೆ ಕಾಣಿಸುತ್ತಿದ್ದ. ಕಾರು ನಡೆಸುವವಳು ತನಗೆ ಹೆದರಿ ತಾನು ಹೇಳಿದಂತೆ ಮಾಡುತ್ತಿರಬೇಕು ಆದರೆ ಜಾಸ್ತಿ ಹೆದರಿಕೊಂಡಿರಲೂ ಬಾರದು ಎಂಬುದು ಆತನ ಆಶಯವಾಗಿತ್ತು. ಆದರೆ ಎಡಿತ್ ಸಿಲ್ವರ್ ಒಳ್ಳೆ ಬುದ್ಧಿವಂತೆಯಾಗಿದ್ದಳು.

ಡೇವಿಡ್‌ಗೆ ರೇಡಿಯೋ ಕೇಳಬೇಕೆಂದಿತ್ತು. ಆದರೆ ಜಾರ್ಜ್‌ಗಿದು ಇಷ್ಟವಿರಲಿಲ್ಲ. ರೇಡಿಯೋ ಕೇಳಿದಲ್ಲಿ ಎಡಿತ್ ಸಿಲ್ವರ್‌ಗೆ ಬೇಕಾದ್ದಕ್ಕಿಂತ ಜಾಸ್ತಿ ಗೊತ್ತಾಗಬಹುದೆಂದು ಆತನಿಗೆ ಸಂಶಯವಿತ್ತು.

ನಾವು ಮಾಡದೇ ಇರುವ ತಪ್ಪನ್ನು ನಮ್ಮ ಮೇಲೆ ಹೊರಿಸಿದ್ದಾರೆ. ನಮ್ಮನ್ನು ಯಾರೂ ನಂಬುವುದಿಲ್ಲ" ಎಂದು ಜಾರ್ಜ್ ಎಡಿತ್ ಸಿಲ್ವರ್‌ಗೆ ಹೇಳಿದ.

"ಹಾಗಿದ್ದರೆ ನಾನು ನಿಮ್ಮನ್ನು ಒಬ್ಬ ವಕೀಲನಿರುವಲ್ಲಿಗೆ ಕರೆದುಕೊಂಡು ಹೋಗಬಲ್ಲೆ" ಎಂದು ಅವರ ಮೇಲೆ ಕರುಣೆ ತೋರಿಸುವವಳಂತೆ ಸಿಲ್ವರ್ ಹೇಳಿದಳು.

"ನಮಗೆ ನಮ್ಮವನೇ ವಕೀಲ ಇದ್ದಾನೆ" ಎಂದ ಜಾರ್ಜ್.

"ಆದರೆ ನನಗೆ ಪರಿಚಯವಿರುವವನು ಬಹಳ ಸಮರ್ಥ" ಎಂದಳು ಸಿಲ್ವರ್.

ಅನಂತರ ಜಾರ್ಜ್ ಆಕೆಗೆ ತಮ್ಮ ಕತೆ ಹೇಳಿದ. ತಾವೊಂದು ಹೋಟೆಲಿನ ಕೋಣೆಯನ್ನು ಕೆಡಿಸಿದುದಾಗಿಯೂ ಮತ್ತು ಅದಕ್ಕಾಗಿ ತಮ್ಮನ್ನು ಬಹಳ ಮಂದಿ ಒಂದು ಬಿಳೀ ಜೀಪಿನಲ್ಲಿ ಹಿಂಬಾಲಿಸುತ್ತಿರುವುದಾಗಿಯೂ ಹೇಳಿದ. ಸಿಲ್ವರ್ ಇದನ್ನು ನಂಬದಿದ್ದರೂ ಅದನ್ನು ತೋರಗೊಡಲಿಲ್ಲ. ಅವರು ಮಾತಾಡುತ್ತಾ ಇದ್ದಷ್ಟೂ ಒಳ್ಳೆಯದೇ ಎಂದು ಆಕೆ ಎಲ್ಲದಕ್ಕೂ ಹೂಂಗುಡುತ್ತಿದ್ದಳು.

ಎಡಿತ್ ಸಿಲ್ವರ್‌ಗೆ ಮಾತನಾಡುವುದು ಹೇಗೆಂದು ಗೊತ್ತಿತ್ತು. ತನಗೆ ಅವರ ಪರಿಚಯವಾಗಿರುವ ಕಾರಣ ಅವರು ತನ್ನನ್ನು ಕೊಲ್ಲದೆ ಬಿಡಲಿಕ್ಕಿಲ್ಲ. ಆದರೂ ತಾನು ಅವರ ಕಡೆಯವಳೆಂದು ತೋರಿಸಿಕೊಟ್ಟರೆ, ಬಹುಶಃ ತನ್ನನ್ನು ಹಾಗೆಯೇ ಬಿಡಬಹುದೇನೋ ಎಂಬುದು ಅವಳ ಆಲೋಚನೆಯಾಗಿತ್ತು.

ಜಾರ್ಜ್ ಮತ್ತು ಅವನ ತಮ್ಮ ಹಲವಾರು ಕ್ರೂರ ಕೃತ್ಯಗಳನ್ನು ಮಾಡಿದವರು, ಬ್ಯಾಂಕ್ ದರೋಡೆ, ಜನರ ಅಪಹರಣ ಇತ್ಯಾದಿಗಳಿಗಾಗಿ ಅವರ ಮೇಲೆ ವಾರೆಂಟ್ ಇದೆ ಎಂಬ ವಿಷಯ ಇಷ್ಟುಹೊತ್ತಿಗೆ ಪೊಲೀಸರಿಗೆ ಗೊತ್ತಾಗಿತ್ತು. ಮೊದಲು ಅವರ ಬಳಿಯಿದ್ದ ಕಾರನ್ನು ಅವರು ಡೇವಿಡ್

ತನಗೆ ಕೆಲಸ ಕೊಟ್ಟವನಿಂದ ಕದ್ದು ಕೊಂಡಿದ್ದ. ಇದಲ್ಲದೆ ಕೆಲವು ತಿಂಗಳುಗಳ ಹಿಂದೆ ಅವರ ಅಜ್ಜ ಮತ್ತು ಅಜ್ಜಿಯರ ಕೊಲೆಯಾಗಿತ್ತು. ಈ ಕೊಲೆಯನ್ನು ಅವರೇ ಮಾಡಿರಬಹುದೇನೋ ಎಂದು ಪೊಲೀಸರಿಗೆ ಸಂಶಯವಿತ್ತು.

ಎಡಿತ್ ಸಿಲ್ವರ್ ತನ್ನ ಮಾತಿನಿಂದ ಇತರರನ್ನು ಬಹಳ ಸುಲಭವಾಗಿ ನಂಬು ವಂತೆ ಮಾಡಬಲ್ಲವಳಾಗಿದ್ದಳು. ಇದಕ್ಕಾಗಿ ಆಕೆಯನ್ನು ಅವಳ ಗಂಡ ಎಡಿತ್ ಸ್ವೀಟಿ ಎಂದು ಕರೆಯುತ್ತಿದ್ದ. ಈಗ ಆಕೆ ತನ್ನ ಆ ಶಕ್ತಿಯನ್ನು ತನ್ನೊಡನಿರುವವರ ಮೇಲೆ ಬಳಸಲು ಪ್ರಯತ್ನಿಸಿದಳು.

"ಈಗ ನಿಮ್ಮ ಈ ಕತೆಯ ಮೇಲೆ ಯಾರಾದರೂ ಒಂದು ಸಿನಿಮಾ ತಯಾರಿಸು ವುದಿದ್ದರೆ, ಅದರಲ್ಲಿ ನಿಮ್ಮ ಪಾರ್ಟನ್ನು ಯಾರು ಮಾಡಬೇಕು?" ಎಂದು ತಮಾಶೆ ಯಾಗಿ ಅವರನ್ನು ಕೇಳಿದಳು.

ಡೇವಿಡ್‌ನಿಗೆ ನಿಕೊಲಸ್ ರೇಂಜ್‌ನನ್ನು ತೆಗೆದುಕೊಳ್ಳಬೇಕೆಂದಿತ್ತು. ಆದರೆ ಜಾರ್ಜ್‌ಗೆ ಟ್ರಾವೋಲ್ಟಾನನ್ನು ಆರಿಸಿ ಕೊಳ್ಳಬೇಕೆಂದಿತ್ತು. ಆ ಸಿನಿಮಾದಲ್ಲಿ ಸಿಲ್ವರ್ ಆಗಿ ನಟಿಸಲು ಯಾರಾದರೊಬ್ಬರು ಬೇಕಾಗಿತ್ತು. ಜಾರ್ಜ್ ಒಬ್ಬ ನಟಿಯ ಹೆಸರು ಸೂಚಿಸಿದ. "ನೀನು ನೋಡಲು ಅವಳ ಹಾಗೆಯೇ ಇದ್ದಿ. ಅಲ್ಲದೆ ನೀನು ಶಕ್ತಿ ಶಾಲಿಯೂ ಮತ್ತು ಧೈರ್ಯವಂತೆಯೂ ಆಗಿರುವೆ" ಎಂದ.

ಸಿಲ್ವರ್‌ಗೆ ತನ್ನ ಮಾತನ್ನು ಅವರು ನಂಬಬಹುದೆಂದು ಅನಿಸತೊಡಗಿತು. ಅಲ್ಲದೆ ಅಷ್ಟುಹೊತ್ತಿಗೆ ಅವರು ತಕ್ಕಮಟ್ಟಿಗೆ ಶಾಂತ ರಾಗಿದ್ದರು. ಜಾರ್ಜ್ ಹೇಳಿದ, "ನಿನ್ನನ್ನು ನೋಡುವಾಗ ನನಗೆ ನನ್ನ ತಾಯಿಯು ನೆನಪಾಗುತ್ತದೆ. ನೀನು ಕಾರಿನ ಟಾಪನ್ನು ಯಾಕೆ ತೆರೆದಿರಿಸಿದ್ದೆ? ನಾವು ನಿನ್ನ ಕಾರನ್ನು ಬಳಸಲು ಆಲೋಚಿಸಿದ್ದು ಆದರಿಂದಾ ಗಿಯೇ" ಎಂದ. ಇಷ್ಟೆಲ್ಲಾ ಮಾತನಾಡು ತ್ತಿದ್ದರೂ ಆತ ತನ್ನ ಬಂದೂಕನ್ನು ದಾರಿ ಯುದ್ದಕ್ಕೂ ಅವಳಿಗೆದುರಾಗಿ ಗುರಿ ತಪ್ಪಿ ಸದೆ ಹಿಡಿದಿದ್ದ.

ಅವರೀಗ ಯಾರೂ ಇಲ್ಲದಿರುವ ಜಾಗ ದಲ್ಲಿ ಒಂದು ಪಾರ್ಕಿನ ಮೂಲಕ ಹೋಗುವ ಮಾರ್ಗದಲ್ಲಿ ಕಾರನ್ನು ಓಡಿಸುತ್ತಿದ್ದರು. ಹೀಗೇ ಸ್ವಲ್ಪ ಹೊತ್ತು ಹೋಗುವಾಗ ಇವರು ಮೈಮರೆತು ನಿದ್ರಿಸತೊಡಗಿದ ರಾದರೆ ತಾನು ಇನ್ನೊಂದು ಕಾರಿನ ಡ್ರೈವರ ನನ್ನು ಸಹಾಯಕ್ಕೆ ಕರೆಯಲು ಸಾಧ್ಯ ವೇನೋ ಎಂದು ಆಕೆ ಆಲೋಚಿಸುತ್ತಿದ್ದಳು.

ಜಾರ್ಜ್ ಆಕೆಯ ಮನಸ್ಸನ್ನು ಓದಿದವ ನಂತೆ ಹೇಳಿದ, "ಕಾರಿನಿಂದ ಹೊರಗೆ ಹಾರಿ ಹೋಗುವ ಆಲೋಚನೆ ಮಾಡಬೇಡ, ಯಾಕೆಂದರೆ ಅಲ್ಲಿಗೇ ನಿನ್ನ ಕಥೆ ಮುಗಿ ದೀತು. ಅರ್ಥವಾಯಿತಷ್ಟೇ?"

ಅವನಿಗೆ ಹಾಗೆ ಮಾಡಲು ತಾನು ಸಂದರ್ಭವನ್ನೇ ಕೊಡಬಾರದೆಂದು ಆಕೆ ಮನಸ್ಸಿನಲ್ಲಿ ನಿರ್ಧರಿಸಿಕೊಂಡಳು. ಜಾರ್ಜ್ ಪಿಸ್ತೂಲಿನಲ್ಲಿ ಗುಂಡುಗಳಿರುವುದನ್ನು ಪರೀಕ್ಷಿಸಿ ನೋಡಿದ. ಅನಂತರ ಒಂದು ಸಿಗರೇಟ್ ಹಚ್ಚಿದ.

ಕೆಲವು ಕಿಲೋಮೀಟರ್‌ಗಳಿಂದ ಅವರು ಒಂದು ಟ್ಯಾಂಕರ್‌ನ ಹಿಂದೆಯೇ ಹೋಗು ತ್ತಿದ್ದರು. ಇದೇ ರೀತಿ ಅದರ ಹಿಂದೆಯೇ ಹೋಗುತ್ತಿರು ಆದರಿಂದ ಮುಂದಕ್ಕೆ ಹೋಗುವುದು ಬೇಡ" ಎಂದು ಜಾರ್ಜ್

ಹೇಳಿದ. ಆಗ ಫ್ಲೋರಿಡಾ ಹೆದ್ದಾರಿಯ ಪೊಲೀಸ್ ಕಾರೊಂದು ಅವರ ಎದುರು ದಿಕ್ಕಿನಿಂದ ಬಂತು.

ಜಾರ್ಜ್ ನೆಟ್ಟಗೆ ಕುಳಿತುಕೊಂಡ. "ಆ ಪೊಲೀಸಿನವ ನನ್ನನ್ನೇ ನೋಡುತ್ತಿದ್ದಾನೆ!" ಎಂದು ಉದ್ಗರಿಸಿದ.

"ಇದು ಅವರೇ ಆಗಿರಬೇಕು" ಎಂದು ಕೊಂಡ ಪೊಲೀಸ್ ಸಾರ್ಜೆಂಟ್, ಮೈಕೆಲ್ ರೋಡೆನ್, ಹಸಿರು ಬಣ್ಣದ ಬಿ ಎಂ ಡಬ್ಲ್ಯು ಕಾರು ಆ ಪ್ರದೇಶದಲ್ಲಿ ಎಷ್ಟಿರಬಹುದು ?

ಕೂಡಲೇ ಹಿಂದಕ್ಕೆ ತಿರುಗುವ ಬದಲು ಅವನು ಒಂದೆರಡು ಕಾರುಗಳನ್ನು ಹೋಗಲು ಬಿಟ್ಟ. ತಾನು ಹಿಂಬಾಲಿಸುತ್ತಿದ್ದೇನೆಂದು ಗೊತ್ತಾದರೆ ಅವರು ಏನು ಮಾಡಬಹುದೆಂದು ಹೇಳಲು ಸಾಧ್ಯವಿಲ್ಲವೆಂದು ಅವನಿಗೆ ಗೊತ್ತಿತ್ತು.

ಅಷ್ಟರಲ್ಲಿ ಆತನಿಗೆ ಆ ಕಾರಿನ ನಂಬರ್ ಪ್ಲೇಟು ಕಾಣಿಸಿತು. ಅದೇ ಕಾರು ! ರೋಡೆನ್ ಕೂಡಲೇ ಇತರ ಪೊಲೀಸರಿಗೆ ಫೋನಿನ ಮೂಲಕ ವಿಷಯ ತಿಳಿಸಿದ. "ಅವರನ್ನು ಇಲ್ಲೇ ನಿಲ್ಲಿಸೋಣ" ಎಂದು ಅವರಿಗೆ ಕರೆ ಕೊಟ್ಟ.

"ಮುಂದೆ ಹೋಗುವ ಟ್ಯಾಂಕರ್ ಏನು ಮಾಡುತ್ತದೆಯೋ ನೀನೂ ಹಾಗೇ ಮಾಡು" ಎಂದು ಜಾರ್ಜ್ ಸಿಲ್ವರ್‌ಗೆ ಪುನಃ ತಿಳಿಸಿದ. ಇತರ ವಾಹನಗಳಿಗೆ ಮುಂದೆ ಹೋಗಲು ರಸ್ತೆ ಬಿಟ್ಟು ಕೊಡುವುದಕ್ಕಾಗಿ ಆ ಟ್ಯಾಂಕರ್ ಆಗಾಗ ರಸ್ತೆಯ ಬದಿಗೆ ಹೋಗುತ್ತಿತ್ತು.

ಮುಂದೆ ಒಂದು ಸರ್ಕಲ್‌ನಲ್ಲಿ ಸಿಲ್ವರ್‌ಗೆ ಕೆಂಪು ಲೈಟ್ ಉರಿಸುತ್ತಿರುವ ಪೊಲೀಸ್ ಕಾರು ನಿಂತಿರುವುದು ಕಾಣಿಸಿತು. ಆಕೆ ಜಾರ್ಜ್ ಹೇಳಿದಂತೆ ಮಾಡುವುದೇ ಈ ಸಂದರ್ಭದಲ್ಲಿ ಉತ್ತಮವೆಂದು ನಿರ್ಧರಿಸಿದಳು.

"ಆ ಕೆಂಪು ಲೈಟಿನ ವಾಹನದ ಹತ್ತಿರಕ್ಕೆ ತಲುಪಿದಾಗ ನೀನು ಮಾರ್ಗದ ಎಡಬದಿಗೆ ಹೋಗಬೇಕು" ಎಂದು ಜಾರ್ಜ್ ಅಪ್ಪಣೆ ಕೊಟ್ಟ. ಡೇವಿಡ್ ತನ್ನ ಕುತ್ತಿಗೆಯ ಹಿಂದೆ ಪಿಸ್ತೂಲನ್ನು ಹಿಡಿದಿರುವುದು ಆಕೆಗೆ ಕನ್ನಡಿಯಲ್ಲಿ ಕಾಣಿಸಿತು.

ಆಗ ಹಿಂದಿನಿಂದ ಇನ್ನೊಂದು ಪೊಲೀಸ್ ಕಾರು ಬರುವುದು ಕಾಣಿಸಿತು. ಇವರು ಒಬ್ಬರ ಮೇಲೊಬ್ಬರು ಗುಂಡು ಹಾರಿಸುವಾಗ ತಾನು ಅವರ ನಡುವೆ ಸಿಕ್ಕಿಹಾಕಿಕೊಳ್ಳಲಿದೆಯೆಂದು ಸಿಲ್ವರ್‌ಗೆ ಭಯವಾಯಿತು.

ಜಾರ್ಜ್ ತನ್ನ ಬಂದೂಕನ್ನು ಪರೀಕ್ಷಿಸಿಕೊಂಡ. "ಜಂಕ್ಷನ್‌ನಲ್ಲಿ ಲೈಟ್ ಬದಲಾದೊಡನೆ ಯಾರಿಗೂ ಕಾಯದೆ ನಿನಗೆ ಸಾಧ್ಯವಿದ್ದಷ್ಟು ಜೋರಾಗಿ ಕಾರು ಓಡಿಸು" ಎಂದು ಹೇಳಿದ.

ಇದ್ದಕ್ಕಿದ್ದಂತೆ ಹಿಂದಿನಿಂದ ಬರುತ್ತಿದ್ದ ಕಾರು ಜೋರಾಗಿ ಅವರ ಕಾರಿನ ಹಿಂಭಾಗಕ್ಕೆ ಢಿಕ್ಕಿ ಕೊಟ್ಟಿತು. ಇದರಿಂದಾಗಿ ಅವರ ಕಾರು ಸ್ವಲ್ಪ ಅಡ್ಡಕ್ಕೆ ತಿರುಗಿತು. ಒಡನೆಯೇ ಹಲವಾರು ಜನ ಪೊಲೀಸರು ಕಾರಿನ ಸುತ್ತಲೂ ಓಡುತ್ತಾ ಬರತೊಡಗಿದರು. "ಹತ್ತಿರ ಬಂದರೆ ನಾನು ಈಕೆಯನ್ನು ಕೊಲ್ಲುತ್ತೇನೆ" ಎಂದು ಜಾರ್ಜ್ ಕಿರುಚಿದ. ಅನಂತರ ಬಂದೂಕನ್ನು ಪೊಲೀಸರ ಕಡೆಗೆ ತಿರುಗಿಸುತ್ತ, "ಬೇಗನೆ ಜೋರಾಗಿ ಓಡಿಸು" ಎಂದು ಸಿಲ್ವರ್‌ಗೆ ಹೇಳಿದ.

ಸಿಲ್ವರ್ ಕಾರನ್ನು ಮುಂದಕ್ಕೆ ಓಡಿಸಿದಳು. ಎಲ್ಲಾ ಕಡೆಗಳಿಂದಲೂ ಗುಂಡುಗಳು ಬಂದು ಕಾರಿಗೆ ಅಪ್ಪಳಿಸುತ್ತಿದ್ದುವು. ಒಂದು ಗುಂಡು ಸಿಲ್ವರ್‌ನ ಕಿವಿಯ ಹತ್ತಿರವೇ ಹೋಯಿತು. ಅಂತಹ ಶಬ್ದವನ್ನು ಆಕೆ ಆದು ತನಕ ಕೇಳಿರಲಿಲ್ಲ. ಡೇವಿಡ್ ಹಿಂಭಾಗದ ಕಿಟಕಿಯಿಂದ ಗುಂಡು ಹಾರಿಸುತ್ತಿದ್ದ.

ಈಗ ಅವರ ಕಾರು ಅತ್ತಿತ್ತ ಓಲಾಡುತ್ತಾ ೧೬೦ ಕಿಲೋಮೀಟರ್ ವೇಗದಲ್ಲಿ ಓಡುತ್ತಿತ್ತು. ಇದ್ದಕ್ಕಿದ್ದಂತೆ ಜಾರ್ಜ್ ಹಿಂದಕ್ಕೆ ಬಗ್ಗಿದ. ಅವನ ಅಂಗಿ ಕೆಂಪು ರಕ್ತದಿಂದ ಒದ್ದೆಯಾಗಿತ್ತು. "ನನಗೆ ಗುಂಡು ತಾಗಿದೆ! ನಾನು ಸತ್ತೇ ಹೋಗುತ್ತೇನೆ!" ಎಂದಾತ ತನ್ನ ತಮ್ಮನ ಹತ್ತಿರ ಕೂಗಿ ಹೇಳಿದ.

ಸಿಲ್ವರ್‌ಗೆ ಈಗ ತನ್ನ ಕೊನೆಯ ಚಾನ್ಸ್ ಬಂದಂತೆ ತೋರಿತು. "ನೀವು ಯಾಕೆ ಶರಣಾಗತರಾಗಬಾರದು?" ಎಂದಾಕೆ ಡೇವಿಡ್‌ನ ಹತ್ತಿರ ಕೇಳಿದಳು. "ಅವನಲ್ಲಿ ಸಾಯುತ್ತಿದ್ದಾನೆ. ನೀನೂ ಕೂಡ ಇವರಿಂದ ತಪ್ಪಿಸಿಕೊಂಡು ಹೋಗುವುದು ಸಂಶಯವೇ."

"ಅವಳು ಹೇಳುವುದು ನಿಜ" ಎಂದ ಡೇವಿಡ್. ಜಾರ್ಜ್ ಕೂಡ ಕಷ್ಟದಿಂದ ಒಪ್ಪಿಕೊಂಡ. ಸಿಲ್ವರ್ ಒಡನೆಯೇ ಬ್ರೇಕ್ ಒತ್ತಿ ಕಾರನ್ನು ನಿಲ್ಲಿಸಿದಳು. ಹಿಂದಿನಿಂದ ಬರುತ್ತಿದ್ದ ಎರಡು ಪೊಲೀಸ್ ಕಾರುಗಳೂ ಅದಕ್ಕೆ ಡಿಕ್ಕಿ ಹೊಡೆದುವು. ಸಿಲ್ವರ್ ಒಡನೆಯೇ ಸೀಟಿನಲ್ಲಿ ಅದಷ್ಟು ತಲೆಯನ್ನು ಬಗ್ಗಿಸಿ ಕುಳಿತಳು. ಜಾರ್ಜ್ ಕಾರಿನ ಕಿಟಕಿಯಿಂದ ಹೊರಗೆ ಹೋಗಲು ಪ್ರಯತ್ನಿಸಿದ. ಒಡನೆಯೇ ಆತನನ್ನು ಪೊಲೀಸಿನವನೊಬ್ಬ ಗಟ್ಟಿಯಾಗಿ ಹಿಡಿದುಕೊಂಡ. "ನಾನು ನಿನ್ನನ್ನು ಕೊಲ್ಲುತ್ತೇನೆ" ಎಂದಾತ ಬೊಬ್ಬೆ ಹಾಕುತ್ತಿದ್ದ.

ಅಷ್ಟರಲ್ಲಿ ಒಂದು ಗುಂಡಿನ ಸದ್ದು ಕೇಳಿಸಿತು. ಜಾರ್ಜನನ್ನು ಹಿಡಿದಿರುವ ಪೊಲೀಸನಿಗೆ ಗುಂಡು ತಗಲಬಾರದೆಂದು ಇನ್ನೊಬ್ಬ ಜಾರ್ಜನ ಮೇಲೆ ಗುಂಡು ಹಾರಿಸಿದ. ಅವನಲ್ಲೇ ಸತ್ತುಬಿದ್ದ.

ಇನ್ನೊಬ್ಬ ಪೊಲೀಸರವನು ಡೇವಿಡ್‌ನನ್ನು ಹಿಡಿದಿರಿಸಲು ಪ್ರಯತ್ನಿಸುತ್ತಿದ್ದ. ಆದರೆ ಆತ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಕೊನೆಗೆ ಒಬ್ಬ ಸ್ವಲ್ಪ ಮೆಣಸಿನ ಪುಡಿಯನ್ನು ಆತನ ಮುಖಕ್ಕೆ ಎರಚಿದ. ಅನಂತರ ಅವನ ಕೈಗೆ ಕೋಳ ತೊಡಿಸಿದರು.

ಆಗ ಅವರಿಗೆ ಸೀಟಿನ ಕೆಳಗೆ ಅವಿತಿರುವ ಎಡಿತ್ ಸಿಲ್ವರ್ ಕಾಣಿಸಿದಳು.

"ನಿಮಗೇನೂ ತೊಂದರೆಯಾಗಿಲ್ಲವಷ್ಟೆ?" ಎಂದು ಪೊಲೀಸಿನವ ಕೇಳಿದ.

ಎರಡು ಗಂಟೆ ಹೊತ್ತು ಆ ಕೊಲೆಗಾರರಿಂದ ತಪ್ಪಿಸಿಕೊಳ್ಳಲು ಹೆಣಗಾಡುತ್ತಿದ್ದ ಆವಳಿಗೆ ಏನು ಹೇಳಲೂ ಬಾಯಿಬಾರದೆ ಮೌನದಿಂದ ತಲೆ ಅಲ್ಲಾಡಿಸಿದಳು.

ಎಲ್ಲವೂ ಮುಗಿಯಿತು—ಅವಳಿನ್ನೂ ಜೀವಂತ ಇದ್ದಾಳಲ್ಲವೇ, ಅಷ್ಟೇ ಸಾಕು.

ಪ್ರತೀಕಾರ

ಎಚ್. ಆರ್. ಚಂದ್ರವದನರಾವ್
೨೮೭೭/೧೦, ೬ನೇ ಕ್ರಾಸ್
ಚಾಮುಂಡಿಪುರಂ, ಮೈಸೂರು–೫೭೦ ೦೦೪

ಕನಸು ಕಾಣುತ್ತಾ ಜ್ಞಾಪಿಸಿಕೊಂಡು ಹೇಳುವಂತೆ ಲೂಯಿ ಡಿ' ಅರೆಂಡೇಲ್ ಹೇಳಿದ—

ಅವಳನ್ನು ಮೊದಲು ನೋಡಿದಾಗ ನಾನು ಹಿಂದೆ ಕೇಳಿದ ಹಾಡೊಂದು ಜ್ಞಾಪಕಕ್ಕೆ ಬಂತು. ಯಾರು ಬರೆದರೆಂದು ಮರೆತು ಹೋಗಿದ್ದರೂ ಆ ಹಾಡು ಮತ್ತು ಬರಿಸುವಂಥದು. ಅದರಲ್ಲಿ ಹೊಂಗೂದಲಿನ ಹೆಂಗಸೊಬ್ಬಳು ಬರುತ್ತಾಳೆ. ಆಕೆಯ ಕೂದಲು ರೇಷ್ಮೆಯಂತೆ, ಹೊಳಪಿನಿಂದ ಹಾರಾಡುತ್ತಿದ್ದು ಆಕೆಯ ಪ್ರೇಮಿ ಅದನ್ನು ಅವಳು ಸತ್ತ ನಂತರ ಕತ್ತರಿಸಿ ಪಿಟೀಲಿಗೆ ಮತ್ತು ಬಿಲ್ಲಿಗೆ ತಂತಿಯ ಬದಲು ಹಾಕಿಕೊಂಡಿದ್ದ. ಅದರಿಂದ ಹೊರಹೊಮ್ಮುತ್ತಿದ್ದ ಪ್ರೇಮದ ರಾಗಗಳನ್ನು ಕೇಳುಗರು ಸಾಯುವವರೆಗೂ ಆಸ್ವಾದಿಸುತ್ತಿದ್ದರು.

ಅವಳ ಕಣ್ಣುಗಳಲ್ಲಿ ಆಳವಾದ ಜಲದ ರಹಸ್ಯವಿದ್ದು ನೋಡುವವರು ಅವುಗಳಲ್ಲಿ ಮುಳುಗಿ ಹೋಗುತ್ತಿದ್ದರು. ಅವಳ ತುಟಿಯ ತುದಿಗಳಲ್ಲಿ ತನ್ನನ್ನು ಗೆಲ್ಲಬಹುದೆಂಬ ಹೆದರಿಕೆ ಇಲ್ಲದ ಸ್ತ್ರೀಯ ದಯಾಹೀನ, ನಿರಂಕುಶ ನಗೆ ಕಾಣಿಸುತ್ತಿತ್ತು. ಲಂಪಟರ ಮಧ್ಯೆ ಇದ್ದರೂ ಹೃದಯಗಳಲ್ಲಿ ಕನ್ಯತ್ವವನ್ನು ಇಟ್ಟುಕೊಂಡಿರುವ ಕಾರ್ಮೆಲೈಟ್ ಸಂನ್ಯಾಸಿನಿಯರ, ಪುರುಷರನ್ನಾಳುವ ಕ್ರೂರ ರಾಣಿಯರ ನಗೆ ಅವಳದು.

ನಾನು ಅವಳ ದೇವಕನ್ನಿಕೆಯಂಥ ಮುಖವನ್ನು ಕಂಡಿದ್ದೆ. ಅವಳ ತಲೆಯಲ್ಲಿದ್ದ ಹೊನ್ನಿನಂಥ ಕೂದಲು, ಎತ್ತರವಾದ ಸೊಬಗಿನ ನಿಲವು, ಬೆಳ್ಳಗಿನ ಮೃದು ಕೈಗಳು ಚರ್ಚಿನ ಕಿಟಕಿ ಗಾಜಿನಲ್ಲಿರುವ ಚಿತ್ರದಂತಿತ್ತು. ಬಹುಶಃ ಜೀವನ ಭಾರವೆನಿಸಿರಬಹುದು, ಅವಳು ಒಬ್ಬಳೇ ನಾಟಕಗೃಹಕ್ಕೆ ಮೊದಲನೆಯ ನಾಟಕಕ್ಕೆ ಬಂದು ಬಾಕ್ಸ್‌ನಲ್ಲಿ ಕುಳಿತುಕೊಳ್ಳುತ್ತಿದ್ದಳು. ಅವಳನ್ನು ತಬ್ಬಿಕೊಂಡು ಹೋದವನು ಅವಳ ಹಿಡಿತಕ್ಕೆ ಸಿಕ್ಕಿಕೊಂಡು ಅವನಲ್ಲಿರುವ ಕಡೆಯ ಅರ್ಧ ಪೆನ್ನಿಯನ್ನೂ ಕಳೆದುಕೊಳ್ಳುತ್ತಿದ್ದ. ಅವಳ ಹೆಸರು ಲಿಲಿ ಲಾಲಾ. ತುಂಡು ಲಂಗ ಹಾಕಿಕೊಂಡು ಸ್ಕಿಪಿಂಗ್ ಹಗ್ಗ ಉಪಯೋಗಿಸುವ ಶಾಲಾ ಹುಡುಗಿಯ ಮೃದು ಧ್ವನಿ ಆಕೆಯದು.

ಮೂಲ : ಗಯ್ ಡ ಮೊಪಾಸಾನ 'ಲಿಲಿ ಲಾಲಾ' ಕಥೆ.

ಒಂದು ಸಂಜೆ ವಿಪರೀತ ಸೆಕೆ. ಆಕಾಶ ತೀಕ್ಷ್ಣವಾಗಿ ಕಾಣುತ್ತಿತ್ತು. ಸಮುದ್ರ ಕಪ್ಪಗೆ ಭಯವಾಗುವಂತೆ ಉಕ್ಕುತ್ತಾ, ಭಾರಿ ಅಲೆಗಳು ಮರಳು ದಂಡೆಯ ಮೇಲೆ ಬಂದು ಹೋಗುತ್ತಿದ್ದಾಗ ಲಿಲೀ ಮನಸ್ಸಿನಲ್ಲಾದ ಉದ್ವೇಗದಿಂದ ಹಾಕಿಕೊಂಡ ಪಾದರಕ್ಷೆಗಳ ಹಿಮ್ಮಡಿಯಿಂದ ಮರಳಿನಲ್ಲಿ ಹಳ್ಳ ಮಾಡುತ್ತಾ ಹೇಳಿದಳು—

ನಾನು ಸಂತಳಾಗುವುದಕ್ಕೆ ಯೋಗ್ಯಳಲ್ಲ. ನನ್ನ ಜೀವನ ಒಂದು ನಾಟಕಕ್ಕೆ ವಿಷಯವಾಗಬಹುದೇ ವಿನಾ ಸುವಾರ್ತೆಯ ಅಧ್ಯಾಯವಾಗಲಾರದು. ನನಗೆ ಜ್ಞಾಪಕವಿರುವ ಹಾಗೆ ನನ್ನನ್ನು ಒಬ್ಬಳು ಸಾಕುತ್ತಾ ಯಾವಾಗಲೂ ನನ್ನನ್ನು ಮುದ್ದುಗರೆಯುತ್ತಿದ್ದಳು. ಅವಳ ಆ ಮುತ್ತುಗಳ ಸಿಹಿಯನ್ನು ಈಗಲೂ ನಾನು ಅನುಭವಿಸುತ್ತೇನೆ. ನನ್ನ ಹೃದಯ ದೇಗುಲದಲ್ಲಿ ಅವು ಅಳಿಸದೆ ಹಾಗೇ ಇದೆ. ನಾನಿದ್ದ ಜಾಗ, ಜಾಗವನ್ನು ಸುತ್ತುವರೆದ ದೊಡ್ಡ ಮರಗಳು, ಸರೋವರದಲ್ಲಿ ತೇಲುತ್ತಿದ್ದ ಬಾತುಗಳು ಇವೆಲ್ಲವೂ ನನ್ನ ಒಳಗಣ್ಣಿಗೆ ಕಾಣಿಸಿಕೊಳ್ಳುತ್ತವೆ. ಕನ್ನಡಿಯ ಮುಂದೆ ನಿಂತು ತುಂಬ ಹೊತ್ತು ನೋಡುತ್ತಾ ನಿಂತಾಗ ನನ್ನನ್ನು ಮುದ್ದು ಮಾಡುತ್ತಿದ್ದ ಆ ಹೆಂಗಸಿನ ಮುಖ ಕಾಣಿಸುತ್ತದೆ. ಅವಳ ಪ್ರೀತಿಯ ಮಾತುಗಳು ಕೇಳಿಸುತ್ತವೆ. ಆಮೇಲೇನಾಯಿತು? ವಿಶ್ವಾಸ ಘಾತಕ ಆಳು ನನ್ನನ್ನು ಅಲೆದಾಡುವ ಸರ್ಕಸ್ ಕಂಪೆನಿಗೆ ಮಾರಿದನೇ? ನನಗೆ ಗೊತ್ತಿಲ್ಲ. ತಿಳಿದುಕೊಳ್ಳಲು ಸಾಧ್ಯವಿಲ್ಲ. ನನ್ನ ಬಾಲ್ಯ ಜಾತ್ರೆಯಿಂದ ಜಾತ್ರೆಗೆ, ಊರಿಂದ ಊರಿಗೆ ವ್ಯಾನುಗಳಲ್ಲಿ ಸಾಮಾನುಗಳನ್ನು ಹಾಕಿಕೊಂಡು ಡೋಲು ಬಾರಿಸುತ್ತಾ ಪ್ರಾಣಿಗಳನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುವ ಸರ್ಕಸ್‌ನಲ್ಲಿ ಕಳೆಯಿತು.

ನಾನು ಸರ್ಕಸ್ಸಿಗೆ ಬಂದಾಗ ಸಣ್ಣಗಿದ್ದೆ, ಚಿಕ್ಕವಳು. ಅನೇಕ ಕಷ್ಟಕರ ಜಾದುವಿದ್ಯೆಗಳನ್ನು ನನಗೆ ಹೇಳಿಕೊಟ್ಟರು. ಹಗ್ಗದ ಮೇಲೆ ನೃತ್ಯ ಮಾಡಿಕೊಂಡು ಹೋಗುವುದು, ಕುಣಿಯುವುದು, ಸೈಕಲ್ ಸವಾರಿ ಹೀಗೆ ಅನೇಕ ಆಟೋಟಗಳನ್ನು ಕಲಿಸಿದರು. ತಪ್ಪು ಮಾಡಿದಾಗ ಏಟು ಬೀಳುತ್ತಿತ್ತು. ತಿನ್ನುವುದಕ್ಕೆ ಒಣಗಿದ ಬ್ರೆಡ್ಡು. ನನಗೆ ಜ್ಞಾಪಕವಿದೆ—ಒಂದು ದಿನ ನಾನು ಸರ್ಕಸ್ಸಿನ ನಕಲೀಶ್ಯಾಮ ನಾಯಿಗಳಿಗೆ ಇಟ್ಟಿದ್ದ 'ಸೂಪ್' ಅನ್ನು ಕದ್ದು ಕುಡಿದಿದ್ದೆ.

ನನಗೆ ಗೆಳೆಯರು ಅಥವಾ ಸಂಬಂಧಿಕರು ಯಾರೂ ಇರಲಿಲ್ಲ. ತುಂಬಾ ಕೆಳದರ್ಜೆಯ ಕೆಲಸ. ಅಂದರೆ ಲಾಯದಲ್ಲಿ ನಾನು ಕೆಲಸ ಮಾಡಬೇಕಾಗಿತ್ತು. ಏಟು ತಿಂದು ಮೈಕೈ ಎಲ್ಲಾ ಗಾಯವಾಗಿತ್ತು. ಕಂಪೆನಿಯಲ್ಲಿ ನನ್ನನ್ನು ಹೆಚ್ಚಿಗೆ ಗೋಳುಹೊಯ್ದುಕೊಳ್ಳುತ್ತಿದ್ದವನು ಎಂದರೆ ಕಂಪೆನಿಯ ಮ್ಯಾನೇಜರ್. ಅವನೇ ಕಂಪೆನಿಯ ಯಜಮಾನ. ಹಿಂಸೆ ಕೊಡುವುದರಲ್ಲಿ ಒಂದು ಬಗೆಯ ಆನಂದ ಆ ಮುದುಕನಿಗೆ. ಪ್ಲೇಗಿಗೆ ಹೆದರುವಂತೆ ಎಲ್ಲರೂ ಅವನಿಗೆ ಹೆದರುತ್ತಿದ್ದರು. ಆತ ಒಬ್ಬ ಜಿಪುಣ. ಆದ ಸಂಪಾದನೆ ಎಲ್ಲವನ್ನೂ ಹಾಸಿಗೆ ಬುಡಕ್ಕೆ ಸೇರಿಸುತ್ತಾ ಕೆಲಸಗಾರರಿಗೆ ಆದಷ್ಟೂ ಕಮ್ಮಿ ಕೊಡುತ್ತಿದ್ದ.

ಆತನ ಹೆಸರು ರಾಫಾ ಜಿನೆಸ್ಟಸ್. ಅನ್ಯಾಯವಾದರೂ ಹುಡುಗಿಯಾಗಿದ್ದರೆ ಅವನು ಕೊಡುತ್ತಿದ್ದ ಶಿಕ್ಷೆಗೆ ಸತ್ತುಹೋಗಿ ಅವುರವಾಗುತ್ತಿತ್ತು. ಆದರೆ ನಾನು ಬೆಳೆದೆ. ಬೆಳೆದಂತೆ ರೂಪವತಿಯಾದೆ. ನನ್ನನ್ನು ಇಷ್ಟಪಡುವವರು ಜಾಸ್ತಿಯಾದರು. ಹೀಗಾಗಿ ೧೫ ವರ್ಷ ಆಗುವುದರೊಳಗಾಗಿ ನನಗೆ ಅನೇಕರು ಪ್ರೇಮಪತ್ರ ಬರೆಯುತ್ತಿದ್ದರು. ಸರ್ಕಸ್ ರಿಂಗಿಗೆ ಬಂದಾಗ ಪ್ರೇಕ್ಷಕರು ಹೂ ದಂಡೆ ಎಸೆಯುತ್ತಿದ್ದರು. ಕಂಪೆನಿಯವರ ಎಲ್ಲರ ಕಣ್ಣು ನನ್ನ ಮೇಲೆ ಎನಿಸತ್ತಿತ್ತು. ಎಲ್ಲರಿಗೂ ನನ್ನನ್ನು ತಮ್ಮ ಬೇಟೆಯನ್ನಾಗಿ ಮಾಡಿಕೊಳ್ಳಬೇಕೆಂಬ ಆಸೆ. ಅವರ ಮಾದಕದ ಕಣ್ಣುಗಳು ನನ್ನ ಬಿಗಿಉಡುಪುಗಳ ಮೇಲೆ, ನನ್ನ ದೇಹದ ಉಬ್ಬು ತಗ್ಗುಗಳ ಕಡೆಗೆ. ಹಿಂದೆ ಇದ್ದ ಹಾಗೆ ಈಗ ಅವರಿಲ್ಲ. ನನ್ನೊಡನೆ ಮಾತನಾಡುವಾಗ ಅವರ ಧ್ವನಿಯಲ್ಲಿ ಮಾರ್ಪಾಡಾಯಿತು. ನಾನು ಉಡುಪು ಬದಲಾಯಿಸುತ್ತಿದ್ದಾಗ ಅವರು ನನ್ನ ಕೋಣೆಗೆ ಬರಲು ಪ್ರಯತ್ನಿಸುತ್ತಿದ್ದರು. ರಾಫಾ ನನ್ನನ್ನು ನೋಡುತ್ತಾ ತಲೆ ಕೆಡಿಸಿಕೊಂಡ. ನನ್ನ ಬಳಿ ಬಂದಾಗ ಅವನ ಹೃದಯ ಬಡಿದುಕೊಳ್ಳುವುದು ಕೇಳಿಸುತ್ತಿತ್ತು. ಹಣದಾಸೆ ತೋರಿಸಿ ನನ್ನನ್ನು ಬುಟ್ಟಿಗೆ ಹಾಕಿಕೊಳ್ಳಬೇಕೆಂದು ನನ್ನ ಬಳಿ ಪ್ರಸ್ತಾಪಿಸಿದ ಮಾತುಗಳಿಂದ ನನ್ನ ಕೆನ್ನೆಗಳು ಕೆಂಪಾಯಿತು. ಅವನನ್ನು ಕಂಡರೆ ನನಗೆ ಜಿಗುಪ್ಸೆ, ದ್ವೇಷ. ನಾನು ಚಿಕ್ಕವಳಾಗಿರುವಾಗ ನನ್ನ ಮೇಲೆ ಮಾಡಿದ ದೌರ್ಜನ್ಯ ಜ್ಞಾಪಕಕ್ಕೆ ಬಂದು ಸೇಡು ತೀರಿಸಿಕೊಳ್ಳುವ ಗುರಿ ನನ್ನದಾಯಿತು.

ಕುತಂತ್ರ, ಎಲ್ಲಾ ತರಹದ ಸುಳ್ಳು, ಜೆಡಗು ಬಿನ್ನಾಣಗಳಿಂದ ಸುಲಭವಾಗಿ ಮರುಳಾಗದವನನ್ನೂ, ಅನುಮಾನ ಪ್ರವೃತ್ತಿ ಇರುವವನನ್ನೂ ನಾನು ನಮ್ರತೆಯ ಪ್ರಾಣಿಯನ್ನಾಗಿ ಮಾಡುತ್ತಿದ್ದೆ. ರಾಫಾ ಹೆಂಗಸೆಂದರೆ ಉಪಯೋಗಕ್ಕೆ ಬರುವ ಒಂದು ಉಪಕರಣ, ಮರೆಯುವುದಕ್ಕೆ ಒಂದು ಸಾಧನ, ಒಂದು ರೀತಿಯ ಮೃದು ಹಾಸಿಗೆ ಎಂದು ತಿಳಿದಿದ್ದನೇ ಹೊರತು ಅವನು ಸ್ತ್ರೀಯಲ್ಲಿ ಇನ್ನೇನನ್ನೂ ಕಂಡಿರಲಿಲ್ಲ. ಆದರೆ ನನ್ನ ಮೇಲೆ ವಯಸ್ಸಾದವರು ತೋರುವ ಹುಚ್ಚುಪ್ರೇಮ. ಅವನು ದೈಹಿಕವಾಗಿ ಹಾಗೂ ಮಾನಸಿಕವಾಗಿ ನನಗೆ ಪೂರ್ಣವಾಗಿ ಶರಣಾಗತನಾದ. ಈಗ ನಾನು ಅವನನ್ನು ಇಷ್ಟ ಬಂದ ಹಾಗೆ ಆಡಿಸುತ್ತಿದ್ದೆ. ಸರ್ಕಸ್‌ನಲ್ಲಿ ಅವನ ಆಡಳಿತಕ್ಕಿಂತ ನನ್ನ ಆಡಳಿತ ಜೋರಾಗಿತ್ತು.

ಪಾಪ! ಅವನ ಅಭಿಲಾಷೆಗಳೆಲ್ಲವೂ ವ್ಯರ್ಥವಾಗಿತ್ತು ನನ್ನ ಬೆರಳಿನ ತುದಿಯನ್ನೂ ಅವನು ಮುಟ್ಟಿರಲಿಲ್ಲ. ನನ್ನ ಪಾದರಕ್ಷೆ, ಬಿಗಿ ಉಡುಪು, ಕೃತಕ ಕೇಶವನ್ನು ಮುಟ್ಟಲು ಮಾತ್ರ ನಾನು ಅವನಿಗೆ ಅವಕಾಶ ಕೊಟ್ಟಿದ್ದೆ. ಸ್ವಲ್ಪ ಸದರ ಕೊಟ್ಟರೂ ಅವನು ಹುಚ್ಚನಾಗುತ್ತಿದ್ದ. ನನ್ನನ್ನು ಮದುವೆಯಾಗೆಂದು ಪೀಡಿಸಿದ, ಬೇಡಿದ, ಕಣ್ಣಲ್ಲಿ ನೀರು ತಂದುಕೊಂಡ ಪ್ರಾರ್ಥಿಸಿದ. ನಾನು ನಗುತ್ತಾ ಕೂಗಾಡಿದೆ. ಹಿಂದೆ ನನ್ನನ್ನು ಹೊಡೆದುದ್ದನ್ನು, ಬೈದದ್ದನ್ನು, ಅವಮಾನ ಮಾಡಿದ್ದನ್ನು ಜ್ಞಾಪಿಸಿದೆ. ನನ್ನ ಪ್ರೇಮವನ್ನು ಗಳಿಸಲಾರದೆ

ಹೋಗಿ ಕಂಠಪೂರ್ತಿ ಕುಡಿದು ನೆಲಕ್ಕೆ ಉರುಳುತ್ತಿದ್ದ.

ಅವನು ನನ್ನನ್ನು ಆಭರಣಗಳಿಂದ ಮುಚ್ಚಿದ. ಮದುವೆಯಾಗೆಂದು ಎಲ್ಲಾ ರೀತಿಯ ಆಮಿಷಗಳನ್ನೊಡ್ಡಿದ. ನನಗೇನೂ ಜೀವನದಲ್ಲಿ ಅನುಭವವಿಲ್ಲದಿದ್ದರೂ, ಎಲ್ಲಾ ವಿಷಯಗಳಲ್ಲೂ ನನ್ನ ಅಭಿಪ್ರಾಯ ಕೇಳುತ್ತಿದ್ದ. ಒಂದು ಸಂಜೆ ಅವನ ಗಲ್ಲವನ್ನು ಸವರುತ್ತಾ ಉಯಿಲು ಬರೆಯುವಂತೆ ಮಾಡಿದೆ. ಆ ಮರಣ ಶಾಸನದಿಂದ ಅವನ ಉಳಿತಾಯ, ಅವನ ಎಲ್ಲಾ ಆಸ್ತಿಪಾಸ್ತಿಗಳೂ ಅವನು ಸತ್ತನಂತರ ನನಗೆ ಬರುವುದು.

ಮಾಸ್ಕೋ ಬಳಿ ನಮ್ಮ ಸರ್ಕಸ್ ಡೇರೆ ಹೊಡಿತ್ತು. ಶಿಶಿರದ ಮಧ್ಯಭಾಗ. ಎಡೆ ಇಲ್ಲದೆ ಮಂಜು ಸುರಿಯುತ್ತಿತ್ತು. ವಿಪರೀತ ಚಳಿ. ಬೆಚ್ಚಗಿರಲು ಸದಾ ಬೆಂಕಿ ಮುಂದೆ ಕುಳಿತುಕೊಂಡಿರಬೇಕು. ಆ ರಾತ್ರಿ ಸರ್ಕಸ್ ಪ್ರದರ್ಶನವಾದ ನಂತರ ರಾಫಾ ತನ್ನ ರಾತ್ರಿಯ ಊಟವನ್ನು ತನ್ನ ವ್ಯಾನಿಗೇ ತರಿಸಿಕೊಂಡ. ಜೊತೆಗೆ ಊಟ ಮಾಡಲು ನನ್ನನ್ನು ಆಹ್ವಾನಿಸಿದ. ನಾವು ಗಂಟೆಗಟ್ಟಲೆ ಕುಡಿಯುತ್ತಾ, ತಿನ್ನುತ್ತಾ ಕಾಲ ಕಳೆದೆವು. ಅವನಲ್ಲಿ ನಾನು ತುಂಬ ಹಿತವಾಗಿ ನಡೆದುಕೊಂಡೆ. ಖಾಲಿಯಾದಾಗಲೆಲ್ಲಾ ಅವನ ಗ್ಲಾಸಿಗೆ ವ್ಹಿಸ್ಕಿ ತುಂಬುತ್ತಿದ್ದೆ. ಅವನ ತೊಡೆಯ ಮೇಲೆ ಕುಳಿತು ಮುತ್ತಿಟ್ಟೆ. ಮದ್ಯದ ಪ್ರಭಾವ ಅವನ ತಲೆಗೇರಿತು. ಅಮಲಿನಿಂದ ಅವನು ಕೆಳಕ್ಕೆ ಬಿದ್ದ. ಮಾತನಾಡದೆ ಕಣ್ಣು ಮುಚ್ಚಿಕೊಂಡ.

ಕಂಪೆನಿಯಲ್ಲಿದ್ದವರೆಲ್ಲಾ ನಿದ್ದೆ ಮಾಡುತ್ತಿದ್ದರು. ಯಾವ ಕಿಟಕಿಯೂ ತೆಗೆದಿರಲಿಲ್ಲ. ಎಲ್ಲೂ ಬೆಳಕು ಕಾಣಿಸುತ್ತಿರಲಿಲ್ಲ, ಶಬ್ದವಿರಲಿಲ್ಲ. ಆದರೆ ಹಿಮಮಾತ್ರ ಬೀಳುತ್ತಿತ್ತು. ನಾನು ಪೆಟ್ರೋಲಿಯಂ ದೀಪವನ್ನು ಆರಿಸಿ ಬಾಗಿಲು ತೆರೆದೆ. ತಣ್ಣನೆಯ ಗಾಳಿ ಒಳಗೆ ನುಗ್ಗಿತು. ನಾನು ಕುಡಿದು ಬಿದ್ದಿದ್ದ ರಾಫಾನ ಕಾಲುಗಳನ್ನು ಹಿಡಿದು ಅದೊಂದು ವಸ್ತುವೆನ್ನುವ ಹಾಗೆ ಹೊರಗೆ ಬಿಳಿಯ ಹಿಮದ ಮೇಲೆ ಹಾಕಿದೆ. ಬಿಳಿಯ ಮಂಜು ಶವವಸ್ತ್ರದಂತೆ ಮುಚ್ಚಿತು.

ಮಾರನೇ ಬೆಳಗ್ಗೆ ಮರಗಟ್ಟಿದ ರಾಫಾನ ದೇಹವನ್ನು ಜನ ನೋಡಿದರು. ಅವನೊಬ್ಬ ಅಸಾಧ್ಯ ಕುಡುಕ ಎಂದು ಎಲ್ಲರಿಗೂ ಗೊತ್ತು. ಅವನ ಸಾವಿನ ಬಗ್ಗೆ ವಿಚಾರಣೆ ನಡೆಸುವ ಅಗತ್ಯ ಯಾರಿಗೂ ಕಾಣಲಿಲ್ಲ. ಈ ಹೀನ ಕೃತ್ಯಕ್ಕೆ ನಾನು ಕಾರಣ ಎಂದು ಹೇಳಬೇಕೆಂದು ಯಾರಿಗೂ ಅನಿಸಲಿಲ್ಲ. ಹೀಗೆ ನಾನು ಅವನ ಮೇಲೆ ಸೇಡು ತೀರಿಸಿಕೊಂಡೆ. ಈಗ ನನ್ನ ವರ್ಷದ ಆದಾಯ ಹದಿನೈದು ಸಾವಿರ ಫ್ರಾಂಕುಗಳು. ಪ್ರಾಮಾಣಿಕವಾಗಿದ್ದು, ಶತ್ರುಗಳ ತಪ್ಪನ್ನು ಕ್ಷಮಿಸುತ್ತಿದ್ದರೆ ನನಗೇನು ಲಾಭವಾಗುತ್ತಿತ್ತು.

ಲೂಯಿ ಡಿ' ಅರೆಂಡೇಲ್ ಈ ಕಥೆ ಮುಗಿಸಿ, "ನಾವು ಯಾವುದಾದರೂ ಕ್ಯಾಸಿನೋಗೆ ಹೋಗಿ ಕುಡಿದು ಬರೋಣ. ನಾನು ಯಾವಾಗಲೂ ಇಷ್ಟು ಮಾತಾಡಿದ್ದಿಲ್ಲ" ಎಂದ.

ಬರಡು ರಾಸು ಬದುಕಬೇಕಾದರೆ ನಮ್ಮ ಹುಸಿ ಹಸಿವು ಸಾಯಬೇಕು

ಎ. ಪಿ. ಚಂದ್ರಶೇಖರ
ಕಳಲವಾಡಿ ಗ್ರಾಮ, ಅಂಚೆ ಉದ್ಬೂರು
ಮೈಸೂರು–೫೭೦ ೦೦೮

ಪ್ರಾಣಿ ಬಲಿ !

"ಎಂಥಾ ಮೂರ್ಖ ಸಂಪ್ರದಾಯ! ವೈಜ್ಞಾನಿಕವಾಗಿ ಅತ್ಯಂತ ಮುಂದುವರಿದ ಇಂದು ಇಂಥಾ ಮೌಢ್ಯ ನಮ್ಮ ನಡುವೆ ಆಚರಣೆಯಲ್ಲಿರುವ ಬಗ್ಗೆ ನಾಗರಿಕ ಸಮಾಜ ನಾಚಬೇಕು." ಇಂಥಾ ಹುಚ್ಚು ಸಂಪ್ರದಾಯಗಳನ್ನು ನಿಲ್ಲಿಸಬೇಕು, ನಿಷೇಧಿಸಬೇಕು ಎಂದು ಪ್ರಾಣಿಗಳ ಪರವಾಗಿ ಹೋರಾಟ ಮಾಡುವ ಪ್ರಾಣಿ ದಯಾ ಸಂಘಗಳು ನಮ್ಮ ಮಧ್ಯೆ ಇವೆ. ಬರಡು ಹಸುಗಳನ್ನು ಲಾರಿಗಳಲ್ಲಿ ಉಸಿರು ಕಟ್ಟಿಸುವ ವಾತಾವರಣದಲ್ಲಿ ತುಂಬಿ ಕಸಾಯಿಖಾನೆಗೆ ಸಾಗಿಸುವ ವಿರುದ್ಧ ಹೋರಾಟ ನಡೆಸುತ್ತಿವೆ. ಈ ಕುರಿತು ಜನಾಂದೋಲನವಾಗಬೇಕೆಂದು ವಿಚಾರ ಗೋಷ್ಠಿಗಳನ್ನು ಹಮ್ಮಿಕೊಳ್ಳುತ್ತಿವೆ.

ಸಮಗ್ರತೆ ಬೇಕು

ಇಂಥಾ ಸುಂದರ ಆದರ್ಶ ಆಚರಣೆಯಲ್ಲಿ ಬರಬೇಕಾದರೆ, ಸಮಸ್ಯೆಗಳ ಆಮೂಲಾಗ್ರ ಪರಿಕಲ್ಪನೆಬೇಕು. ಇಂದು ನಮ್ಮಲ್ಲಿ ಸಮಸ್ಯೆಗಳು ಸಾವಿರ. ಅದರಲ್ಲಿ ಒಂದು ಪ್ರಾಣಿಬಲಿ, ಗೋಹತ್ಯೆ. ಈ ಸಮಸ್ಯೆಯನ್ನು ಒಂಟಿಯಾಗಿ ವಿಶ್ಲೇಷಿಸಿ ನಿವಾರಣೆಗೆ ಪ್ರಯತ್ನಿಸಿದರೆ ಫಲ ದೊರೆಯಲಾರದು. ಏನೆಲ್ಲಾ ಸಮಸ್ಯೆಗಳಿವೆಯೋ ಅವೆಲ್ಲಾ ಪರಸ್ಪರ ಅವಲಂಬಿ ಸಂಬಂಧಿ. ಸಮಸ್ಯೆಗಳ ಹಿನ್ನೆಲೆಯಲ್ಲಿರುವ ಕಾರಣಗಳನ್ನು ಅರಿತುಕೊಳ್ಳದಿದ್ದರೆ, ನಿರೀಕ್ಷಿತ ಫಲಿತಾಂಶ ಸಿಗಲಾರದು. ವಿಧ್ವಂಸಕಾರಿಯಾದ ಬೆಂಕಿಯು ಪ್ರಕಟಿತ ರೂಪವಾದ ಜ್ವಾಲೆಯನ್ನು ಆರಿಸುವುದಕ್ಕೆ ಕೊಡುವಷ್ಟೇ ಮಹತ್ವವನ್ನು ಮೂಲದಲ್ಲಿರುವ ಇಂಧನವನ್ನು ನಿಯಂತ್ರಿಸುವಲ್ಲಿಗೂ ಕೊಡಬೇಕಾಗುತ್ತದೆ.

ಎಲ್ಲ ಜೀವಿಗಳೂ ಪರಾವಲಂಬಿಗಳು

ಜೀವ ವೈಜ್ಞಾನಿಕವಾಗಿ ಒಂದು ಆಡಿಗೂ, ಹಸುವಿಗೂ, ಮನುಷ್ಯನಿಗೂ ಅಥವಾ ಕೀಟಕ್ಕೂ ಯಾವುದೇ ವ್ಯತ್ಯಾಸ ವಿಲ್ಲ,ಎಲ್ಲಜೀವಿಗಳೂ ಪ್ರಕೃತಿಯ ಮಕ್ಕಳೆ. ಎಲ್ಲ ಜೀವಿಗಳೂ ಸಂತೋಷದಿಂದ, ಸಮೃದ್ಧಿಯಿಂದಜೀವಿಸುವುದನ್ನು ಪ್ರಕೃತಿ

ಸ್ವಂತ ಕೃಷಿ, ಪ್ರಯೋಗ ಮತ್ತು ಅನುಭವ ಪೂರಿತವಾದ ವೈಚಾರಿಕ ಲೇಖನ.

ಅಪೇಕ್ಷಿಸುತ್ತದೆ. ಈ ಉದ್ದೇಶ ಸಾಧನೆಗಾಗಿ ಸುವ್ಯವಸ್ಥಿತವಾದ ಆಹಾರ ಸರಪಳಿಯನ್ನು ಪ್ರಕೃತಿ ನಿರ್ಮಾಣಮಾಡಿದೆ. ಸಸ್ಯಗಳು ಪ್ರಾಣಿಗಳಿಗೆ ಆಹಾರ, ಪ್ರಾಣಿ ತ್ಯಾಜ್ಯ ಸ್ಯಸಗಳ ಆಹಾರ. ಒಂದು ಪ್ರಾಣಿ ಇನ್ನೊಂದು ಪ್ರಾಣಿಯ ಆಹಾರ. ಇಂಥಾ ಪರಸ್ಪರಾವಲಂಬಿತ ಸ್ಥಿತಿಯಲ್ಲಿ ಒಟ್ಟಾಗಿ ಪ್ರಕೃತಿ ಬೆಳವಣಿಗೆಯನ್ನು ಕಂಡಿತು. ಮಾನವ ಹಸ್ತಕ್ಷೇಪ ಪ್ರಾರಂಭವಾಗುವ ವರೆಗೆ ಹಸುರುಳ್ಳ ಮರಗಿಡಬಳ್ಳಿಗಳು ಹೆಚ್ಚುತ್ತಾ ಹೆಚ್ಚುತ್ತಾ ಬಂದವು. ಜೀವ ಯೋಗ್ಯ ಪರಿಸರ ನಿರ್ಮಾಣದಲ್ಲಿ ಹಸುರಿನ ಪಾತ್ರ ಮಹತ್ತರವಾದದ್ದು. ತನ್ನ ಆಹಾರ ವನ್ನು ತಾನೇ ಸೃಷ್ಟಿಸುವ ಸಾಮರ್ಥ್ಯ ಇರುವುದು ಹಸುರುಳ್ಳ ಗಿಡಗಳಿಗೆ ಮಾತ್ರ. ಇತರ ಎಲ್ಲಾ ಜೀವಿಗಳೂ ಒಂದಿಲ್ಲೊಂದು ರೀತಿಯಲ್ಲಿ ಸಸ್ಯಾವಲಂಬಿ. ತಾನು ನಿಂತ ಗೆಲ್ಲನ್ನೇ ಕಡಿಯುವ ಮಾನವನ ಸ್ವಾರ್ಥ ಪ್ರವೃತ್ತಿ, ಯಾವುದೇ ಇತರ ಜೀವಿಗಳಿಗೆ ಇಲ್ಲದ ಸಂಗ್ರಹ ಪ್ರಕೃತಿಯಿಂದಾಗಿ, ಇದು ಮೊದಲು ಬೆಳವಣಿಗೆಯನ್ನು ಕಂಡಿದ್ದ ಪ್ರಕೃತಿ ಇಂದು ಜೀವಮಾರಕವಾಗುತ್ತಿದೆ.

ಸಹಜ ಕೃಷಿಯಿಂದ ನಾಗರಿಕತೆ ಪ್ರಾರಂಭ

ಪ್ರಕೃತಿಯಲ್ಲಿ ಆಹಾರದ ಸುಂದರ ಸರಪಳಿ ಇದೆ ಎಂಬುದನ್ನು ಪ್ರಸ್ತಾಪಿಸಿದ್ದೆ. ಈ ಸರಪಳಿಯೊಳಗೆ ಮನುಷ್ಯನ ಆಹಾರ ಯಾವುದು? ಹಣ್ಣು, ಗೆಡ್ಡೆ, ಸೊಪ್ಪು, ತರಕಾರಿ, ಧಾನ್ಯ ಹೀಗೆ ಸಸ್ಯಾಹಾರ. (ಮನುಷ್ಯನ ಮೊದಲ ಆಹಾರ ಹಣ್ಣು ಹಾಗೂ ಕೊನೆಯ ಆಹಾರ ಧಾನ್ಯ) ಖಂಡಿತ ವಾಗಿ ಮಾಂಸಾಹಾರ ಅಲ್ಲ. ಈ ಮಾತನ್ನು ಸಮರ್ಥಿಸಲು, ಮಥನಗೊಂಡ ಹತ್ತಾರು ಸುಂದರ ತರ್ಕಗಳಿವೆ. ವೈಜ್ಞಾನಿಕ ವಿವರಣೆಗಳಿವೆ. ಅದನ್ನೆಲ್ಲ ಸದ್ಯಕ್ಕೆ ಇಲ್ಲಿ ವಿವರಿಸುವುದಿಲ್ಲ. ಬೇಟೆಯಾಡುತ್ತಿದ್ದ ಆದಿಮಾನವ ಕೃಷಿಯನ್ನು ಉದ್ಯೋಗ ವಾಗಿ, ಜೀವನ ವಿಧಾನವಾಗಿ ಸ್ವೀಕರಿಸಿ ದಾಗ ನಾಗರಿಕತೆ ಪ್ರಾರಂಭವಾಯಿತು. ಬೇಟೆಯಾಡಿ ಪ್ರಾಣಿಗಳನ್ನು ಕೊಲ್ಲುವ ಕ್ರೂರ ವಿಧಾನಕ್ಕಿಂತ ಸೌಮ್ಯವಾಗಿ ಆಹಾರ ಸಂಗ್ರಹಿಸುವ ಸಜ್ಜನಿಕೆ ಮಾನವನ ಮೆದುಳಿನ ಹೆಚ್ಚುಗಾರಿಕೆ ಎನಿಸಿತು. ಜನಾಂಗದಿಂದ ಜನಾಂಗಕ್ಕೆ ಕ್ರೌರ್ಯ ಕಡಿಮೆ ಯಾಗುತ್ತಾ ಕುಟುಂಬ, ಹಳ್ಳಿ, ಊರು, ದೇಶ ಹೀಗೆ ಪರಸ್ಪರ ಸಹಜೀವನ ನಡೆಸುವ ಆದರ್ಶ ಬೆಳೆಯುತ್ತಾ ಬಂತು. "ತಾನು ಇರಬೇಕಾದರೆ ಇನ್ನೊಬ್ಬರನ್ನು ಇರಗೊಡ ಬೇಕು" ಎಂಬ ಅನುಭವ ಸತ್ಯದ ಮೆಲ್ನೆಲೆ ಯಲ್ಲಿ ನೀತಿ, ಶಾಸ್ತ್ರ, ಧರ್ಮ ರೂಪುಗೊಳ್ಳ ತೊಡಗಿತು. ಕಡಿಮೆ ಹಿಂಸೆ, ಹೆಚ್ಚಿನ ಸಾಮರಸ್ಯಕ್ಕಾಗಿ ಹುಡುಕಾಟ ನಡೆ ಯುತ್ತಾ ಬಂತು.

ಲಾರಿ ತಡೆಗಿಂತ ಹೆಚ್ಚಿನ ಚಿಂತನೆಬೇಕು

ಆದರೆ, ಸಾವಿರಾರು ವರ್ಷಗಳಲ್ಲಿ ಮಥನ ಗೊಂಡು ರೂಪುಪಡೆದ ಅಹಿಂಸಾತ್ಮಕ, ಸೃಜನಾತ್ಮಕ, ಪರಿಸರಪೂರಕ, ಸ್ವಾವ ಲಂಬಿ, ಜೀವನ ಸಂಸ್ಕೃತಿಯು ಪಶ್ಚಿಮ ದಿಂದ ಕಟ್ಟೆಯೊಡೆದು ಬಂದ ಭೋಗ ಸಂಸ್ಕೃತಿಯಿಂದ ವಿಘಟಿತಗೊಂಡಿರುವ ಇಂದು "ಗೋಮಾತೆ" ಎಂಬ ಪ್ರಾಣಿ ದಯಾ ಸಂಘದವರ ಕೂಗಿಗೆ ಯಾವ ಬೆಲೆ

ಬರಲು ಸಾಧ್ಯ ? ಈ ಮಾತು ಹೇಳುವಾಗ, ಪ್ರಾಣಿದಯಾ ಸಂಘಗಳ ಕೂಗು ಅನಗತ್ಯ ಎಂಬುದು ನನ್ನ ಇಂಗಿತವಲ್ಲ. ದನಗಳು ಅಸಹಜ ಸಾವನ್ನು ಕಾಣುವಂತಾಗಿರುವುದು ಘೋರ ಪಾತಕವೆ. ಇದು ತಪ್ಪಬೇಕಾದದ್ದೂ ಅಗತ್ಯ. ಆದರೆ ಭಾರತೀಯ ಪರಂಪರೆಯಲ್ಲಿ ಮಾತೃ ಸ್ಥಾನವನ್ನು ಹೊಂದಿರುವ ಗೋವುಗಳ ರಕ್ಷಣೆ ಲಾರಿಗಳನ್ನು ತಡೆಯುವಂಥಾ ಪ್ರದರ್ಶನಗಳಿಂದ ಸಾಧ್ಯವಿಲ್ಲ. ಇದಕ್ಕೆ ಹೆಚ್ಚಿನ ಚಿಂತನೆ ಬೇಕು. ನಮ್ಮ ಪೂರ್ವಿಕರು ಗೋವುಗಳನ್ನು ಪೂಜಿಸುವಲ್ಲಿ ಹಿನ್ನೆಲೆಯಾಗಿ ನಿಂತಿರುವ ಮೌಲ್ಯಾಧಾರಿತವಾದ ವ್ಯವಹಾರ ಕುಶಲತೆಯ ಪರಿಚಯ ಆಗಬೇಕು. ನಮ್ಮ ಜೀವನ ವಿಧಾನ ಬದಲಾಗಬೇಕು. ಕೈಗಾರಿಕೆಗಳು ಅಭಿವೃದ್ಧಿಯ ಮಾನಂಡವೆಂಬ ಮನೋಭಾವ ಹೋಗಬೇಕು. ಜೀವನದ ರೀತಿ ನೀತಿಗಳಲ್ಲಿ ಕೃಷಿ ಅಳವಡಬೇಕು. ಪ್ರತಿಯೊಬ್ಬ ಪ್ರಜೆಯೂ ಬದಲಾಗುತ್ತಾ ಆಗುತ್ತಾ ಮತ್ತೊಮ್ಮೆ ಕೃಷಿತನಾಗುವ ಸುಂದರ ಕನಸು ಮೂಡಬೇಕು (ಇದು ವಾಸ್ತವವಾಗುವ ಮಾತು ಆಮೇಲೆ) ಆದರೆ ಇಂಥಾ ಯಾವ ಬದಲಾವಣೆಯ ಸೂಚನೆಯೂ ಇಲ್ಲದ ಇಂದಿನ ಪರಿಸ್ಥಿತಿಯಲ್ಲಿ, ಭೋಗವೇ ಜೀವನದ ಪರಮ ಧ್ಯೇಯವಾಗಿರುವ ಈ ಕಾಲ ಘಟ್ಟದಲ್ಲಿ, ಬರಡು ದನಗಳನ್ನು ಕೇರಳಕ್ಕೆ ಸಾಗಿಸಲಾಗದು ಎಂಬ ಕೂಗಿಗೆ ಹೆಚ್ಚಿನ ಅರ್ಥವಿಲ್ಲ.

ದನಗಳು ಇಂದು ಲಾರಿಗಳಲ್ಲಿ ಯಾಕೆ ಸಾಗಿಸಲ್ಪಡುತ್ತಿವೆ ?

ಈ ಪ್ರಶ್ನೆ ನಿಮ್ಮಲ್ಲಿ ಮೂಡಿದರೆ, ನಿಮಗೆ ಸಮಸ್ಯೆಗಳ ಅರಿವಾದೀತು. ಅಥವಾ ನೀವು ಸ್ವಯಂಕೃಷಿಕರಾದರೆ ಹೆಚ್ಚಾಗಿ ಅರ್ಥವಾದೀತು. ಆಗ ಮಾತ್ರ ಮೇಲಿನ ನನ್ನ ಮಾತುಗಳು ಹೃದ್ಗತವಾದೀತು. ನಿಮ್ಮ ಕಷ್ಟ ಕಡಿಮೆಯಾಗುವಂತೆ ಸೂಕ್ಷ್ಮವಾಗಿ ವಿವರಿಸುವ ಕಷ್ಟ ಸದ್ಯಕ್ಕೆ ನನಗಿರಲಿ.

"ಜೀವ ವೈಜ್ಞಾನಿಕವಾಗಿ ಪ್ರಾಕೃತಿಕವಾಗಿ ಎಲ್ಲ ಜೀವಿಗಳೂ ಒಂದೆ!" ಈ ಮಾತನ್ನು ಮತ್ತೆ ನೆನಪಿಸಿಕೊಳ್ಳಿ, ಈ ಆದರ್ಶವನ್ನು ಸಾಧಿಸುವ ಸಲುವಾಗಿ, ಬೇಟೆಯನ್ನು, ಮಾಂಸಾಹಾರವನ್ನು ಕಡಿಮೆ ಮಾಡುವ ಸಲುವಾಗಿ ಆದಿಮಾನವ ಜೀವಾಧಾರಕವಾದ ಕೃಷಿ ಪರಂಪರೆಯನ್ನು ಸೃಷ್ಟಿಸಿದ.

"ಹುಲಿ ದನವನ್ನು ತಿನ್ನುತ್ತದೆ". ಹಾಗಾದರೆ ಹುಲಿ ಹಿಂಸೆ ಮಾಡಿತು ಎನ್ನೋಣವೇ ? ಇದು ಪ್ರಾಕೃತಿಕವಾಗಿ ಸರಿಯಲ್ಲ. ಹುಲಿಗೆ ದನವೇ ಆಹಾರ. ಅದು ದನವನ್ನು ಕೊಲ್ಲದಿದ್ದರೆ ಹಸಿವಿನಿಂದ ಸ್ವಯಂ ತಾನೇ ಹಿಂಸೆಪಡಬೇಕಾಗುತ್ತದೆ. ತನ್ನ ಹೊಟ್ಟೆಯ ಹಸಿವನ್ನು ಹಿಂಗಿಸಲು, ದೇಹ ಚೈತನ್ಯವನ್ನು ಕಾಯ್ದುಕೊಳ್ಳಲು ಎಷ್ಟು ಆಹಾರ ಬೇಕೋ ಅಷ್ಟು ಮಾತ್ರ ಪ್ರಾಣಿಗಳನ್ನು ಕೊಂದು ತಿಂದಾಗ ಹುಲಿ ಹಿಂಸೆಮಾಡಿದಂತಾಗುವುದಿಲ್ಲ. ಇಂಥಾ ಆದರ್ಶಮಯ ಸಂಯಮ ಪ್ರಾಕೃತಿಕವಾಗಿಯೇ ಹುಲಿಗೆ ಇದೆ. ಹೊಟ್ಟೆ ತುಂಬಿದ ಸಮಯ ಎದುರು ಬಂದ ದನದ ಮೇಲೆ ಹುಲಿ ಎರಗುವುದಿಲ್ಲ.

ಕ್ರೂರ ಪ್ರಾಣಿಯೆಂದು ನಾವು ಹೆಸರಿಸುವ ಹುಲಿಗೆ ಪ್ರಾಕೃತಿಕವಾಗಿ ಇರುವ ಸಂಯಮವನ್ನು ಪ್ರಯತ್ನ ಪೂರ್ವಕವಾಗಿ

ಸ್ವಾಂಗೀಕರಿಸುವ ದಿಶೆಯಲ್ಲಿ ನಮ್ಮ ಪೂರ್ವಿಕರು ಕೃಷಿ ಹಾಗೂ ಜೀವನ ವಿಧಾನಗಳನ್ನು ಚಿತ್ರಿಸುತ್ತಾ ಬಂದರು. ಹುಲಿಗೆ ಆಹಾರವಾಗುವಲ್ಲಿ ದನದ ಸಾವು ಹೇಗೆ ಹಿಂಸೆ ಅಲ್ಲವೋ ಹಾಗೆಯೆ ಮನುಷ್ಯನಿಗೆ ನಿಜವಾಗಿ ಬೇಕಾದಷ್ಟು ಆಹಾರಗಳನ್ನು ಅವಶ್ಯಕತೆಗಳನ್ನು ಹೊಂದುವಲ್ಲಿ ಪ್ರಕೃತಿಯ ಮೇಲೆ ಆತ ನಡೆಸುವ ಕ್ರಿಯೆ (ಕೃಷಿ) ಹಿಂಸೆ ಅಲ್ಲ. ಅಥವಾ ಅಷ್ಟು ಹಿಂಸೆ ಮಾಡುವ ಹಕ್ಕು ಆತನಿಗಿದೆ. ಈ ಚಿಂತನೆಯ ಮುನ್ನೆಲೆಯಲ್ಲಿ ಭೂಮಿಯ ಮೇಲೆ ಒಂದಷ್ಟು ಉಳುಮೆ, ಗಿಡಕ್ಕೆ ಗೊಬ್ಬರ, ಸವಿಯಲು ಹಾಲು ಇತ್ಯಾದಿ ಅತ್ಯಂತ ಅಗತ್ಯಗಳನ್ನು ಪೂರೈಸಿಕೊಳ್ಳಲು ದನ ಸಾಕಣೆ ಪ್ರಾರಂಭವಾಯಿತು. ಇಲ್ಲಿ ದನಗಳ ನೈಸರ್ಗಿಕ ಸ್ವಾತಂತ್ರ್ಯ ಹರಣವಾಯಿತು ನಿಜ. ತಪ್ಪಿನ ದೋಷವನ್ನು ಅಷ್ಟರಮಟ್ಟಿಗೆ ಕಡಿಮೆ ಮಾಡುವ ದೃಷ್ಟಿಯಿಂದ, ದನಗಳ ಮೇಲೆ ಅನಗತ್ಯ ಹಿಂಸೆ ಆಗಬಾರದೆಂಬ ಆದರ್ಶದಿಂದ ಅದಕ್ಕೆ ಪೂಜನೀಯ ಸ್ಥಾನವನ್ನು ಕಲ್ಪಿಸಿದರು. ಇದು · ನಮ್ಮ ಹಿರಿಯರ ಬುದ್ಧಿವಂತಿಕೆ. ಮೌಢ್ಯ ಅಲ್ಲ. ನಮ್ಮ ಸಂಸ್ಕೃತಿಯಲ್ಲಿ ಅಥವಾ ಪರಂಪರೆಯಲ್ಲಿ ಸೇರಿಕೊಂಡು ಬಂದ ಒಂದೊಂದು ಆಚರಣೆಗಳ ಹಿನ್ನೆಲೆಯಲ್ಲಿ ಕಡಿಮೆ ಹಿಂಸೆಯನ್ನು ಪ್ರೋತ್ಸಾಹಿಸುವ ಪ್ರವೃತ್ತಿಯನ್ನು ನಾವು ಗುರುತಿಸಬಹುದು.

ನಮ್ಮ ಅನಿವಾರ್ಯ ಅಗತ್ಯಗಳನ್ನು ಮಾತ್ರ ಪ್ರಕೃತಿಯಿಂದ ಪಡೆಯುತ್ತಿದ್ದ ಕೃಷಿ ಸಂಸ್ಕೃತಿ ಬದಲಾಗಿ ಹೊಸ ಹೊಸ ಅಗತ್ಯಗಳನ್ನು ಸೃಷ್ಟಿಸುವ ಕೈಗಾರಿಕಾ ಸಂಸ್ಕೃತಿ ವಿಜೃಂಭಿಸುತ್ತಿರುವ ಈ ಕಾಲದಲ್ಲಿ "ಎಲ್ಲಾರು ದುಡಿಯುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಎಂಬ ಜೀವನ ನೀತಿ ಬದಲಾಗಿ "ಎಲ್ಲಾರು ದುಡಿಯುವುದು ದುಡ್ಡಿಗಾಗಿ" ಜೀವನಕ್ಕೆ ಹೊಸ ವ್ಯಾಖ್ಯಾನ ಬರೆದ ಈ ದಿನಗಳಲ್ಲಿ, ರೈತ ಮಾತ್ರ ಪ್ರಾಣಿದಯಾ ಪರನಾಗಬೇಕು, ಬರಡು ದನಗಳನ್ನು ಮಾರಬಾರದು ಎಂಬ ಮಾತಿಗೆ ಯಾವ ಅರ್ಥವೂ ಬರುವುದಿಲ್ಲ. ತಾನು ಸಾಕಲಾರದ, ತನಗೆ ಬೇಕಾಗಿರದ ದನಗಳನ್ನು ಮಾರಿ, ಒಂದಷ್ಟು ಹಣ ಸಂಪಾದಿಸಿದ ಅನಂತರವೂ ಭವಿಷ್ಯದಲ್ಲಿ ಭರವಸೆಯನ್ನು, ಬೆಳಕನ್ನು ಕಾಣಲಾಗದೆ ಆತ್ಮಹತ್ಯೆ ಮಾಡಬೇಕಾಗಿ ಬಂದಿರುವ ಗಂಭೀರ ಸನ್ನಿವೇಶದ ಹಿನ್ನೆಲೆಯಲ್ಲಿರುವ ಆಧುನಿಕ ಕೃಷಿ ವಿಧಾನಗಳ ಬಗ್ಗೆ ಗಮನ ಹರಿಸದೆ, ಕೃತಕ ಬೀಜ, ಗೊಬ್ಬರ, ಕೀಟನಾಶಕ, ಉಳುಮೆಗಳ ಆಕ್ಟೋಪಸ್ ಹಿಡಿತದಿಂದ ರೈತನನ್ನು, ಭೂಮಿಯನ್ನು ಮುಕ್ತಗೊಳಿಸದೆ, ಮತ್ತೆ ಪ್ರಕೃತಿ ನಳನಳಿಸುವ ಚಿಂತನೆ ಹರಿಸದೆ, ಯಾವುದೋ ಒಂದು ಮೂಲೆಯಲ್ಲಿ ಹೆಸರಿಗೆ ಹಾಕುವ ಪ್ರಯತ್ನಕ್ಕೆ ಫಲ ಸಿಗಲಾರದು.

ಆಧುನಿಕ ಕೃಷಿಯಲ್ಲಿ ದಯೆಗೆ ಸ್ಥಾನವಿಲ್ಲ

ಉದಾಹರಣೆ ಭತ್ತ, ರಾಗಿ, ಜೋಳಗಳಲ್ಲಿ ಅಧಿಕ ಇಳುವರಿ ಬೀಜಗಳು ಬಂದುದರಿಂದ ಏನಾಯಿತು ಎಂದು ನೋಡೋಣ. ಒಂದೆಕ್ರೆಯಲ್ಲಿ ಕಾಳಿನ ಇಳುವರಿ ತಾತ್ಕಾಲಿಕವಾಗಿ ದ್ವಿಗುಣಗೊಂಡಿತು. ಆದರೆ ಹುಲ್ಲಿನ ಇಳುವರಿ ಕಾಲು ಭಾಗಕ್ಕೆ ಇಳಿಯಿತು. ಇದರಿಂದಾಗಿ ಉಳುಮೆಗೆ

ಬೇಕಾದ ಎತ್ತುಗಳನ್ನು ಸಾಕಲು ಮೇವು ಸಾಲದಾಯಿತು. ಎತ್ತು ಮಾರುವುದು ಅನಿವಾರ್ಯವಾಯಿತು. ಟ್ರ್ಯಾಕ್ಟರ್ ರಂಗ ಸ್ಥಳ ಪ್ರವೇಶಮಾಡಿತು. ಭೂಮಿಯ ಸಾರ ಯುಕ್ತ ಮೇಲ್ಪಣ್ಣು ಹೆಚ್ಚು ಹೆಚ್ಚಾಗಿ ಕೊಚ್ಚಿಹೋಯಿತು. ಎರೆಹುಳಗಳ ಸರ್ವ ನಾಶವಾಯಿತು.

ಅಧಿಕ ಇಳುವರಿ ಬೀಜಗಳು! ಇದು ಕೃತಕ ಬೀಜಗಳಿಗೆ ಸೂಕ್ತ ಹೆಸರಲ್ಲ. ಇವು ಅಧಿಕ ಪ್ರತಿಸ್ಪಂದನಶೀಲ ಬೀಜಗಳು. ಇವು ರಾಸಾಯನಿಕ ಗೊಬ್ಬರಗಳಿಗೆ ಚೆನ್ನಾಗಿ ಸ್ಪಂದಿಸುತ್ತವೆ. ಹೆಚ್ಚಾಗಿ ಬೆಳೆ ಕೊಡುತ್ತವೆ. ರಾಸಾಯನಿಕ ಗೊಬ್ಬರಗಳಿಲ್ಲದೆ ಇವು ಬೆಳೆಯಲಾರವು. ಹೀಗೆ ಒಟ್ಟಾಗಿ ಸಾವಯವ ಗೊಬ್ಬರ ಮಹತ್ವ ಕಳಕೊಂಡಿತು. ಹಳೆಯ ಅಹಿಂಸಾ ಮೌಲ್ಯಗಳೂ ಕಳಕೊಂಡವು. ಹಣವೇ ಮೌಲ್ಯವಾಗುಳ್ಳ ಹೊಸ ಪದ್ಧತಿ ಯಲ್ಲಿ ದನಗಳಿಗೆ ಸ್ಥಾನವಿಲ್ಲ. ಇಲ್ಲಿ ದಯೆಗೆ ಅವಕಾಶವೇ ಇಲ್ಲ. ದನದ ಉಚ್ಚೆ ಕೃತಕ ಬೆಳೆಗಳಿಗೆ ಕೀಟನಾಶಕ ವಾಗುವುದಿಲ್ಲ.

ವ್ಯವಸ್ಥಿತವಾಗಿ ರೈತನನ್ನು ಪರಾವಲಂಬಿ ಯಾಗಿ ಮಾಡಿರುವ ಇಂದಿನ ಸ್ಥಿತಿಯೊಳಗೆ ರೈತ ದನಗಳನ್ನು ಮಾರುವುದು ಬಿಟ್ಟು ಇನ್ನೇನು ಮಾಡಲು ಸಾಧ್ಯ? ತನ್ನದಲ್ಲದ ತಪ್ಪಿಗೆ ಆತ ಹೊಣೆಗಾರನಾಗಬೇಕೇ? ಎಲ್ಲರೂ ಸಮಾನವಾಗಿ ಹೊಣೆಗಾರಿಕೆಯನ್ನು ಹೊರಲು ತಯಾರಾಗುವವರೆಗೆ ಬರಡು ರಾಸುಗಳ ಕ್ಷೇಮ ಸುಧಾರಿಸಲು ಶಕ್ಯವಿಲ್ಲ. ಹಸುವನ್ನು ಸಾಕಿ, ಕಟುಕನಿಗೆ ಮಾರುವ ಗೋಪಾಲರಿಗೆ ಎಷ್ಟು ಪಾಪ ತಟ್ಟುವುದೋ ಅಷ್ಟೇ ಪಾಪ ಹಸು ಸಾಕದವರಿಗೂ ತಟ್ಟು ವುದು. ಗೋಪಾಲನೆಯಲ್ಲಿ ಲಾಭವಿಲ್ಲವೆಂದು ಬೇರೆ ಉದ್ಯೋಗ ಮಾಡುವ ಎಲ್ಲರದು ಪಾಲುಗಾರಿಕೆ ಇರುವುದು. ಹಾಲು ಕು ಯುವ ಎಲ್ಲರೂ ಗೋಹತ್ಯ ಪಾಪದಲ್ಲಿ ಭಾ ಗಳೆ. ಗೋರಕ್ಷಣೆ ಪವಿತ್ರ ಕರ್ತವ್ಯವೆಂದ ಭಾವಿಸುವವರು, ಹಣ ಉಳ್ಳವರು ಬರಡ ರಾಸುಗಳನ್ನು ಖರೀದಿಸಿ ಪಿಂಜ್ರಾಪೋಲ ಗಳಿಗೆ ಹಸ್ತಾಂತರಿಸುವ ಹಿರಿತನವನ ಪ್ರದರ್ಶಿಸಿದರೆ, ಪರಿಸ್ಥಿತಿ ಸ್ವಲ್ಪವಾದರು ಸುಧಾರಿಸಲು ಸಾಧ್ಯ.

ಹಣ್ಣು ಕೊಡುವ ಮರಗಳು ಪ್ರಕೃ ಯಲ್ಲಿ ಅಧಿಕ ಇಳುವರಿಯ ವ್ಯವಸ್ಥೆ

ಅಧಿಕ ಇಳುವರಿ ಬೀಜಗಳ ಅಧಿ ಪ್ರಸಂಗದ ಬಗ್ಗೆ ಸ್ಥೂಲವಾಗಿ ತಿಳಿದದಾ ಯಿತು. ಇಂಥಾ ಬೀಜಗಳು, ಅಧಿ ಇಳುವರಿ, ಬೇಕಾದೆಂಥಾ ಪರಿಸ್ಥಿ ನಿರ್ಮಾಣವಾದದ್ದು ಮನುಷ್ಯ ತನ ನೈಸರ್ಗಿಕ ಆಹಾರವನ್ನು ಮರೆತದ್ದರಿಂದ ಹಣ್ಣು, ಗೆಡ್ಡೆ, ಸೊಪ್ಪು, ತರಕಾರಿ, ಧಾನ –ಇವು ಆದ್ಯತೆಯ ಮೇಲೆ ಮಾನವಾಹಾರ ಮೊದಲ ಆದ್ಯತೆಯಾದ ಹಣ್ಣಿಗೆ ಗಮ ಕೊಡದೆ, ನಮ್ಮೆಲ್ಲಾ ಗಮನ ಧಾನ್ಯಕ್ಕಾದ ದರಿಂದ ಇಂದಿನ ಅವ್ಯವಸ್ಥೆ ಸೃಷ್ಟಿಯಾಗಿದೆ ಧಾನ್ಯದ ಬದಲಿಗೆ ಅದೇ ಭೂಮಿಯಿಂ ಹಣ್ಣುಗಳ ರೂಪದಲ್ಲಿ ಮರಗಳಿಂದ ಆಹಾ ಪಡೆಯುತ್ತಿದ್ದರೆ, ಉತ್ಪತ್ತಿಯ ನ ಸುಮಾರು ನಲ್ವತ್ತು ಪಟ್ಟು ಹೆಚ್ಚಿಸಲ ಶಕ್ಯವಿದೆ. ಹಾಗೆಯೇ ಸಾವಯವ ಗೊಬ್ಬ ಗಳನ್ನು, ದನಗಳ ಮೇವನ್ನು ಕೂಡ, ಧಾನ್ಯಗಳ ಮೇಲೆ ನಡೆದಿರುವ ಸಂಶೋಧ ಗಳಾದರೂ ಸಾಮಾನ್ಯವೇ? ಹೋಟೆ ಮ್ಯಾನೇಜ್‌ಮೆಂಟ್ ಎಂಬ ವಿದ್ಯೆ, ವಿಜ್ಞಾ ವಿಭಾಗವೇ ಪ್ರಾರಂಭವಾಗಿ, ಆಹಾರವನ

ಗತ್ಯಕ್ಕಿಂತ ಹತ್ತು ಪಟ್ಟು ಹೆಚ್ಚು ತಿನ್ನುವ ಾಳುವಮಾಡುವ ಆಧುನಿಕ ಕಲೆಯಿಂದಾಗಿ ಪ್ರಕೃತಿ ಕಳಾಹೀನವಾಗಿದೆ. ಸಮಸ್ಯೆಗಳ ಮೂಲವನ್ನು ಅರ್ಥಮಾಡದೆ, ಗೋಹತ್ಯೆ ಸಮಸ್ಯೆಯನ್ನು ಒಂಟಿಯಾಗಿ ನಿರ್ವಹಿಸಿದರೆ ಪ್ರಯೋಜನವಾಗಲಾರದು.

ವಿದೇಶಿ ತಳಿ ಹಸುಗಳು ಕೂಡ ಸಮಸ್ಯೆ

ಬರಡು ದನ ಮಾರಾಟಕ್ಕೆ ಇನ್ನೊಂದು ಮುಖ ಉಂಟು. ನಮ್ಮ ನಾಟಿ ತಳಿಗಳು ಪ್ರಯೋಜನವಿಲ್ಲವೆಂದು, ಕ್ಷೀರ ಕ್ರಾಂತಿಯಾಗಬೇಕೆಂದು, ವಿದೇಶೀ ತಳಿಗಳನ್ನು ಇಲ್ಲಿ ತುಂಬಿಸಲಾಯಿತು. ಕ್ಷೀರ ಕ್ರಾಂತಿಯಾಯಿತು. ಆದರೆ ಭೂಮಿಗೆ ಹೊರೆಯಾಯಿತು. ರೈತನಿಗೆ ಹೊರೆಯಾಯಿತು. ಇಷ್ಟೊಂದು ಹಾಲು ಕೊಡಬೇಕಾದರೆ ಅವಕ್ಕೆ ಅಷ್ಟೊಂದು ಕೃತಕ ತಿಂಡಿ ತೀರ್ಥ ಅನಿವಾರ್ಯ. ಇಂದು ಗೋಪಾಲಕರಿಗೆ ಹಾಲಿಗೆ ಸಿಗುವ ಬೆಲೆ ಲೀಟರಿಗೆ ರೂಪಾಯಿ ಎಂಟು. ಆದರೆ ಉತ್ಪಾದನಾ ವೆಚ್ಚ ರೂಪಾಯಿ ಹದಿನೈದಕ್ಕೂ ಮಿಕ್ಕ ಇದನ್ನು ಸರಿತೂಗಿಸಲು ಗಂಡು ಕರು ಹುಟ್ಟಿದರೆ ಆಗುವ ನಷ್ಟವನ್ನು ತುಂಬಿಕೊಡಲು ಎಷ್ಟು ಜನ ಗ್ರಾಹಕರು. ಪ್ರಾಣಿ ಪ್ರಿಯರು ತಯಾರಾಗುವರು? ಹಾಲಿಗೆ ಲೀಟರಿಗೆ ಹದಿನೈದು ರೂಪಾಯಿಗಿಂತ ಜಾಸ್ತಿ ಸಿಗುವಂತೆ ನೋಡಿಕೊಳ್ಳುವ ಉದಾರಿಗಳಿಗೆ ಮಾತ್ರ ಬರಡು ರಾಸುಗಳನ್ನು ಪಿಂಜ್ರಾಪೋಲಿಗೆ ಹಾಕಿ ಎಂದು ಹೇಳಿ ಪ್ರಾಣಿದಯೆ ಪ್ರದರ್ಶಿಸಲು ಅರ್ಹತೆ ಬರುವುದು.

ಅಥವಾ ತರ್ಕದ ಇನ್ನೊಂದು ಮುಖವೇನೆಂದರೆ, ವಿದೇಶೀ ತಳಿಗಳಿಂದ ಕ್ಷೀರ ಕ್ರಾಂತಿ ಆದ ಕಾರಣ ಹಾಲಿಗೆ ಬೇಡಿಕೆ ಆಗದೆ ಎಂತಲೇ ಬೆಲೆ ಇಳಿದಿದೆ. ಕ್ರಾಂತಿ ಮಾಡದ ಹಳೇ ತಳಿಗಳೇ ಇರುತ್ತಿದ್ದರೆ ಕಡಿಮೆ ಖರ್ಚಿನಲ್ಲಿ ಹಾಲು ಉತ್ಪತ್ತಿ ಮಾಡಬಹುದಾಗಿತ್ತು. ಒಂದು ವಿದೇಶೀ ಹಸುವಿನ ಸ್ಥಾನದಲ್ಲಿ ಅಷ್ಟೇ ಖರ್ಚಿನಲ್ಲಿ ನಾಲ್ಕು ದೇಶೀ ಹಸುಗಳು ಬದುಕುತ್ತಿದ್ದುವು. ಆಗ ಬಹಳಷ್ಟು ಹಸುಗಳು ನಮಗೆ ಅಗತ್ಯವಾಗುತ್ತಿದ್ದುವು.

ಹುಲಿಗಳು ಕೂಡ ನಮಗಿಂತ ಮೇಲು

ಮಾನವಾಹಾರದ ಆದ್ಯತೆಯಾಗಿ ಹಣ್ಣಿನ ಬದಲು ಧಾನ್ಯ ಸ್ಥಾನಾಂತರಗೊಂಡುದರಿಂದಲೇ ನೂರಾರು ಸಮಸ್ಯೆಗಳು ಸೃಷ್ಟಿಯಾಗಿವೆ. ಇವನ್ನಾದರೂ ಪ್ರಕೃತಿ ಸಹಿಸೀತು. ಆದರೆ ಮಾನವಾಹಾರದ ಆದ್ಯತೆಯಾಗಿ ಮಾಂಸಾಹಾರ ಸ್ಥಾನ ಪಡೆಯುತ್ತಿರುವ, ಇಂದಿನ ಪರಿಸ್ಥಿತಿಯಲ್ಲಿ ಸಮಸ್ಯೆಗಳಿಗೆ ಯಾವುದೇ ಪರಿಹಾರದ ಕಲ್ಪನೆಯೂ ಸಾಧ್ಯವಿಲ್ಲ. "ಕಡಿಮೆ ಹಿಂಸೆ" ಎಂಬ ಆದರ್ಶದಿಂದ ಬೆಳೆದು ಬಂದ ನಮ್ಮ ಪರಂಪರೆಗೆ ಇಂದು ವಜ್ರಾಘಾತವಾಗಿದೆ. ಆಹಾರದ ಹೆಸರಿನಲ್ಲಿ, ಕ್ರೂರ ಪ್ರಾಣಿಯೆಂದು ನಾವು ಹೆಸರಿಸುವ ಹುಲಿಗಿಂತ ಸಾವಿರಪಟ್ಟು ಕ್ರೂರರೂ, ಹಿಂಸ್ರರೂ ಆಗಿ ನಾವಿಂದು ಬದಲಾಗುತ್ತಿದ್ದೇವೆ.

ಸಾಲಯೋಜನೆಗಳು ನಮಗೆಂದೂ ಬೇಡ

ಹಿಂದೊಮ್ಮೆ ನಮ್ಮ ಮುಖ್ಯಮಂತ್ರಿಗಳೊಬ್ಬರು, ಕುರಿಸಾಕಣೆಗೆ ಸಾಲ ಯೋಜನೆಯನ್ನು ಉದ್ಘಾಟಿಸುತ್ತಾ ಕುರಿಯನ್ನು ತಬ್ಬಿ ಹಿಡಕೊಂಡ ಚಿತ್ರ ಪತ್ರಿಕೆ

ಗಳಲ್ಲಿ ಮೂಡಿತ್ತು. "ಮುಖ್ಯ ಮಂತ್ರಿಗಳಿಗೆ ಮುಗ್ಧ ಪ್ರಾಣಿಯ ಮೇಲೆಷ್ಟು ಪ್ರೀತಿ!" ಮೆಚ್ಚುಗೆ ವ್ಯಕ್ತವಾಗಿತ್ತು. ಕೊಲ್ಲಲೆಂದೇ ಸಾಕುವ ಪ್ರಾಣಿಗಳಲ್ಲಿ ನಮಗೆ ಪ್ರೀತಿ ಎಂದರೆ ಇದಕ್ಕಿಂತ ದೊಡ್ಡ ಆತ್ಮಘಾತುಕತನ ಇದೆಯೇ? ಹಣದ ಮೇಲಣ ಪ್ರೀತಿಯನ್ನು ಪ್ರಾಣಿ ಪ್ರೀತಿಯೆಂದು ವ್ಯಾಖ್ಯಾನಿಸುವ ವಿಚಾರ ವೈರುಧ್ಯದಿಂದಾಗಿ ನಮ್ಮ ಸಮಾಜದಲ್ಲಿ ಇಷ್ಟೊಂದು ಗೊಂದಲ, ಗಲಾಟೆಗಳು ನಡೆಯುತ್ತಿರುವುದು.

ಪ್ರಾಣಿಗಳನ್ನು ಸಾಕಲು ಸರಕಾರದ ಸಾಲ ಯೋಜನೆಗಳು ನಿಂತಂದು ನಮ್ಮ ಬಹಳಷ್ಟು ಸಮಸ್ಯೆಗಳು ತೊಲಗುವುವು. ಈ ಕುರಿತು ಸ್ವಯಂ ಸೇವಾ ಸಂಸ್ಥೆಗಳು ಗಮನ ಹರಿಸುವುದು ಬಹಳ ಮುಖ್ಯ. ಪ್ರಾಣಿಗಳು ಈ ಪ್ರಕೃತಿಯಲ್ಲಿ ಇರಬೇಕು. ಆದರೆ ಪ್ರಕೃತಿಗೆ ಎಷ್ಟು ಸಾಧ್ಯವೋ ಅಷ್ಟು ಮಾತ್ರ ಇರಬೇಕು. ಸಾಲಯೋಜನೆಗಳಿಲ್ಲದಿದ್ದರೆ ಅಷ್ಟು ಮಾತ್ರ ಇರುತ್ತವೆ. ಅಷ್ಟು ಮಾತ್ರ ಸಾಕುತ್ತಾರೆ. ಮಾಂಸಾಹಾರ ಪಾಪಕರವಾದದ್ದು ಎಂದು ವಾದಿಸುವುದು ನನ್ನ ಉದ್ದೇಶ ಅಲ್ಲ. ಮಾಂಸಾಹಾರವನ್ನು ಕಡಿಮೆ ಮಾಡುವ ದಿಶೆಯಲ್ಲಿ ಬೆಳೆಯುತ್ತಿದ್ದ ನಮ್ಮ ಚಿಂತನೆಯನ್ನು, ವ್ಯವಸ್ಥೆಯನ್ನು ಅಲುಗಾಡಿಸಿ, ಮಾಂಸಾಹಾರವನ್ನು ಪ್ರೇರೇಪಿಸುವ, ಪ್ರಚೋದಿಸುವ ಯೋಚನೆಗಳಿಂದಾಗಿ, ಪ್ರಕೃತಿ ತಾಳಲಾರದಷ್ಟು ಪ್ರಾಣಿಗಳ ಸಂತತಿ ಇಂದು ವೃದ್ಧಿಸಿದೆ. ಪ್ರಕೃತಿಯ ತಾಳಕ್ಕೆ ಹೊಂದದ ಕರ್ಕಶ ಸಂಗೀತದ ಕಾರಣವಾಗಿ ಮಾನವ ಮನಸ್ಸು ಉದ್ವಿಗ್ನಗೊಂಡಿದೆ. ಗಲಾಟೆಯೇ ಸಂಗೀತವೆಂಬ ತೀರ್ಮಾನವೂ ಆಗಿಬಿಟ್ಟಿದೆ.

ಜೀವಧಾರಕ ಕೃಷಿಯನ್ನು ಪ್ರೋತ್ಸಾ ಹಿಸುವುದರಲ್ಲಿ ನಿಜವಾದ ಪ್ರಾಣಿದಯೆ ಇದೆ

ಕೋಳಿ, ದನ, ಕುರಿ, ಆಡು, ಹಂದಿ ಮೀನು, ಮೊಲ, ಮೊಸಳೆ ಹೀಗೆ ಸಾಕು ಪ್ರಾಣಿಗಳ ಪಟ್ಟಿ ಬಹಳ ದೊಡ್ಡದಿದೆ. ಈ ಸಂದರ್ಭದಲ್ಲಿ ಮೀನು ಸಾಕಣೆಯ ಬಗ್ಗೆ ಎರಡು ಮಾತು. ಹೊಳೆಯಲ್ಲಿ, ಹಳ್ಳದಲ್ಲಿ ಮೀನು ಇರುವುದು, ಬೆಳೆಯುವುದು ಪ್ರಕೃತಿ ನಿಯಮ. ಯಾರೂ ಬಿತ್ತನೆ ಮಾಡಬೇಕಾಗಿಲ್ಲ, ಪೋಷಣೆ ಮಾಡಬೇಕಾ ಗಿಲ್ಲ. ಇಂಥ ಪ್ರಾಕೃತಿಕ ಮೀನನ್ನು ಅಪರೂಪಕ್ಕೊಮ್ಮೆ ತಿನ್ನುವ ಸ್ವಾವಲಂಬಿ ಪದ್ಧತಿಯ ಬಗೆಗೆ ನಾನು ಗೌರವಿಸುತ್ತೇನೆ ಆದರೆ ಎಲ್ಲರಿಗೂ ಮೀನು ತಿನ್ನಿಸುವುದಕ್ಕಾ ಈಗ ಕೃತಕ ಹಳ್ಳಗಳನ್ನು ವೈಜ್ಞಾನಿಕವಾ ಮಾಡಿಸಲಾಗುತ್ತದೆ. ಅದಕ್ಕಿಂತ ಹೆಚ್ಚು ವೈಜ್ಞಾನಿಕವಾಗಿ ತೋಡಿದ ತೂತುಬಾ ಗಳಿಂದ ವಿದ್ಯುತ್ ಉಪಯೋಗಿಸಿ ನೀರೆತ್ತಿ ಹಳ್ಳಗಳನ್ನು ತುಂಬಿಸಲಾಗುತ್ತದೆ ಮುಮ್ಮಡಿ ವೈಜ್ಞಾನಿಕವಾಗಿ ಪ್ರಯೋಗಾ ಲಯಗಳಲ್ಲಿ ಬೆಳೆಸಿದ ಮೀನು ಮರಿಗಳನ್ನು ಬಿತ್ತಲಾಗುತ್ತದೆ. ಪ್ರಕೃತಿಗೆ ಸಂಥಾಹ್ವಾ ನೀಡುವ ಹಿರಿತಜ್ಞತೆಯನ್ನು ಮೆರೆದ ತಯಾರಿಸಿದ ವೈಶಿಷ್ಟ್ಯಪೂರ್ಣ ಮೀನಿ ಆಹಾರವನ್ನು ಉಚಿತವಾಗಿ ಹಂಚಲಾಗು ತ್ತದೆ....

ವರ್ಷದಿಂದ ವರ್ಷಕ್ಕೆ ಅಂತರ್ಜಲ ಮಟ್ಟ ಮೂವತ್ತು ನಲ್ವತ್ತು ಅಡಿ ಕೆಳಗಿ ಯುತ್ತಿರುವ ಗಂಭೀರ ಸಮಸ್ಯೆಯೂ ಕೂ ಮೀನು ತಿನ್ನುವ ಕೊದಿಯು (ಆಸೆಯ

ಮುಂದೆ ಗೌಣವಾಗಿರುವ ಇಂದಿನ ಸನ್ನಿವೇಶದಲ್ಲಿ ಪಾಪಕಾರ್ಯವೆಂಬುದು ಯಾವುದೂ ಅಲ್ಲ. ಪ್ರಾಣಿದಯೆ, ಗೋಹತ್ಯೆ ಮೊದಲಾದ ಶಬ್ದಗಳಿಗೆ ಅರ್ಥವಿಲ್ಲ.

ನಮ್ಮ ಆಹಾರಕ್ಕಾಗಿ, ಆನಂದಕ್ಕಾಗಿ, ಹಣಕ್ಕಾಗಿ, ಕೀಟನಾಶಕಗಳಿಂದ ತೊಡಗಿ, ಟ್ರ್ಯಾಕ್ಟರ್ ಉಳುಮೆಯುವರೆಗೆ, ಕೋಳಿ ಸಾಕಣೆಯಿಂದ ಹಿಡಿದು ನೀರಾನೆ (ಹಿಪ್ಪೋ-ಪೊಟಮಸ್) ಸಾಕಣೆವರೆಗೆ ಪ್ರಾಣಿಹತ್ಯೆ ಅವ್ಯಾಹತವಾಗಿ ನಡೆಯುತ್ತಿರುವ ಇಂದಿನ ಕಾಲಘಟ್ಟದಲ್ಲಿ, ಕೃಷಿ ಎಂದರೆ ಹಿಂಸೆ ಎಂಬ ವ್ಯಾಖ್ಯಾನ ಪಡೆದಿರುವ ಇಂದಿನ ಸಂದರ್ಭದಲ್ಲಿ, ಎಲ್ಲೋ ಒಂದೆರಡು ಕಡೆ ಸಂಪ್ರದಾಯದಂತೆ ಪೂಜೆ ಮಾಡಿ ಬಲಿಕೊಡುವುದನ್ನು ದೊಡ್ಡ ಪ್ರಕರಣಮಾಡಿ, ಪ್ರಚಾರಮಾಡಿ ವಿರೋಧಿಸುವ ಬದಲು 'ಆಧುನಿಕ ಕೃಷಿಯ ಬದಲಾವಣೆಯೆಡೆಗೆ' ಎಲ್ಲ ಚಿಂತಕರೂ ಗಮನಹರಿಸಬೇಕೆಂದೂ, ಅದೇ ನಿಜವಾದ ಪ್ರಾಣಿದಯೆ ಎಂದೂ ನಾನಾದರೊ ಭಾವಿಸಿದ್ದೇನೆ.



ಹಣ, ಹೆಸರು, ಪಾಂಡಿತ್ಯ–ಯಾವುದರಿಂದಲೂ ಲಾಭವಿಲ್ಲ, ಕಷ್ಟಗಳ ಅಭೇದ್ಯ ಕೋಟೆಗಳನ್ನು ಸೀಳಿಕೊಂಡು ನುಗ್ಗಬಲ್ಲದ್ದು ಚಾರಿತ್ರ್ಯವೊಂದೇ ಎಂಬುದು ಜ್ಞಾಪಕದಲ್ಲಿರಲಿ.

ಇಡೀ ಮಾನವಕೋಟಿಗೆ ಅನುಕಂಪ ಹಾಗೂ ಪ್ರೀತಿ ತೋರುವುದೇ ನಿಜವಾದ ಧರ್ಮ.

—ಸ್ವಾಮಿ ವಿವೇಕಾನಂದ

ಪ್ರಚಂಡ ಪುಟಾಣಿಗಳು

ಟಿ. ಎಸ್. ಸಂಜೀವರಾವ
೧, ಕಾನ್ತಿ ಬ್ಲಾಕ್ಸ್
ಘಂಟಾಲಿ ದೇವಿಪಾತ'
ಥಾನೆ–೪೦೦೬೦೨ ಮಹಾರಾಷ್ಟ್ರ

ನಮ್ಮೆಲ್ಲರ ಮಿದುಳಿನಲ್ಲಿ ಒಂದು ಪ್ರಚಂಡ ಪುಟಾಣಿ ಅಡಗಿದೆ. ಅದರ ಹೆಸರು ಪೈನಿಯಲ್ ಗ್ರಂಥಿ. ಸುಮಾರು ಒಂದು ದಪ್ಪ ಅವರೆಕಾಳಿನ ಗಾತ್ರ ಇರುವ ಈ ಪುಟಾಣಿಗೆ ನಮ್ಮ ಜೀವನವನ್ನು ಅತ್ಯಂತ ಶ್ರೀಮಂತ ಮಾಡುವ ಶಕ್ತಿ ಇದೆ ಎಂಬುದನ್ನು ವಿಜ್ಞಾನಿಗಳು ಈಗೀಗ ಕಾಣುತ್ತಿದ್ದಾರೆ.

ಈ ಗ್ರಂಥಿ ಸೂಸುವ ರಸಗಳಲ್ಲಿ ಬಹು ಮುಖ್ಯವಾದದ್ದು ಮೆಲಾಟೋನಿನ್. ಈ ಮೆಲಾಟೋನಿನ್ ಉತ್ಪನ್ನವಾಗುವುದು ಪೈನಿಯಲ್ ಗ್ರಂಥಿಯಲ್ಲಿ ಮಾತ್ರವೆ. ಈ ಗ್ರಂಥಿಯ ಇತರ ಸ್ರವಗಳಾದ ಸೆರೋಟೋನಿನ್ ಮತ್ತು ನೋರಾಡ್ರಿನಾಲಿನ್ ದೇಹದ ಬೇರೆ ಬೇರೆ ಭಾಗಗಳಲ್ಲೂ ಉತ್ಪನ್ನವಾಗುತ್ತವೆ.

ಅಮೆರಿಕದ ವರ್ಜೀನಿಯ ಕಾಮನ್-ವೆಲ್ತ್ ವಿಶ್ವವಿದ್ಯಾನಿಲಯದ ವೈದ್ಯಕೀಯ ಪ್ರಾಧ್ಯಾಪಕರು ಅನೇಕ ವರ್ಷಗಳಿಂದ ನಡೆಸಿದ ಪ್ರಯೋಗಗಳಿಂದ ಮೆಲಾಟೋನಿನ್ನಿನ ಮಹಾತ್ಮೆ ತಿಳಿದುಬಂದಿದೆ. ಈ ಪ್ರಯೋಗಗಳ ಪ್ರಕಾರ ಮೆಲಾಟೋನಿನ್ ಮಾನವನನ್ನು ದೀರ್ಘಾಯುಷಿಯಾಗಿಯೂ, ಒಳ್ಳೆ ಆರೋಗ್ಯವಂತನನ್ನಾಗಿಯೂ ಮಾಡ
ಬಲ್ಲದು ಎನ್ನುತ್ತಾರೆ ಆ ಪ್ರಾಧ್ಯಾಪಕರ
ಎಂಭತ್ತು ವರ್ಷದ ವೃದ್ಧ ಐವತ್ತು ವ
ದವನಂತೆ ದೃಢಕಾಯನಾಗಿ ಲವಲವಿ
ಯಿಂದ ಕಳಕಳಿಸಲು ಮೆಲಾಟೋನಿನ್
ಸಹಾಯ ಮಾಡುತ್ತದೆ; ಅದು ಕ್ಯಾನ್ಸರ್
ಮೊದಲಾದ ರೋಗಗಳನ್ನು ವಾಸಿಮಾಡು
ವುದಲ್ಲದೆ, ಬರದೇ ಇರುವ ಹಾಗೂ ಮಾ
ಬಲ್ಲದು; ರಾಸಾಯನಿಕ ಔಷಧಿಗಳ ಅಧಿ
ಸೇವನೆಯಿಂದ ಆಗುವ ನಂಜನ್ನು ಸ
ಅದು ತಡೆಗಟ್ಟುತ್ತದೆ; ಲೈಂಗಿಕವಾ
ರತಿಶಕ್ತಿಯನ್ನು ವೃದ್ಧಿ ಮಾಡುತ್ತದೆ
ಸಾಮಾನ್ಯವಾಗಿ ಎಲ್ಲಾ ರೋಗಗಳಿಗೆ
ನಿರೋಧಕ ಶಕ್ತಿಯನ್ನು ದೇಹದಲ್ಲಿ ವರ್ಧಿ
ತ್ತದೆ ಎಂದು ಆ ತಜ್ಞರು ಹೇಳುತ್ತಾರೆ.

ಮೆಲಾಟೋನಿನ್ನಿಂದ ಇನ್ನೂ ಹಲ
ಕಾರ್ಯಗಳು ಆಗುತ್ತವೆ ಎಂದು ಪ್ರಯೋ
ಗಳಿಂದ ತಿಳಿದು ಬಂದಿದೆ. ಚರ್ಮಕ್ಕೆ ಕ
ಬಣ್ಣ ಕೊಡುವ ಮೆಲಾನಿನ್ ಎಂಬ ವ
ದ್ರವವನ್ನು ಮೆಲಾಟೋನಿನ್ ಜ
ಕೋಶದ ಕೇಂದ್ರದ ಕಡೆಗೆ ವತ್ತರಿಸಿ ಚ
ಬೆಳ್ಳಗಾಗುವಂತೆ ಮಾಡುತ್ತದೆ. ಪ್ರಾ
ಗಳಲ್ಲಿ ಬೆದೆಯಾಗುವುದನ್ನು ಅದು
ಬಂಧಿಸುತ್ತದೆ. ಹೃದಯವು ಆರೋಗ್ಯ ಸ
ಯಲ್ಲಿರುವಂತೆಯೂ, ರಾತ್ರಿ ನಿದ್ದೆ ಚೆನ್

ರುವಂತೆಯೂ ಮಾಡುತ್ತದೆ. ಮಾನಸಿಕ
ತ್ತಡವನ್ನು ತಗ್ಗಿಸುತ್ತದೆ. ರಕ್ತದಲ್ಲಿ
ಲೆಸ್ಟರಾಲ್ ಮಟ್ಟವು ಸರಿಸಮವಾಗಿರು
ತೆ ಮಾಡುತ್ತದೆ. ಸಾಕೇ ಈ ಪುರಾಣಿಯ
ಪ್ರಭಾವ?

ಹಾಗಾದರೆ ಎಲ್ಲರಲ್ಲೂ ಈ ಗ್ರಂಥಿ ಇರು
ವುದರಿಂದ, ಎಲ್ಲರೂ ಅದು ಉತ್ಪಾದಿಸುವ
ಮೆಲಾಟೋನಿನಿಂದ ಆರೋಗ್ಯವಂತ
ರಾಗಿಯೂ ದೀರ್ಘಾಯುಗಳಾಗಿಯೂ ಇರ
ಬೇಕಲ್ಲವೆ? ದುರ್ದೈವ! ಅನೇಕ ಪ್ರಾಣಿ
ಗಳಲ್ಲೂ ಇರುವ ಪೈನಿಯಲ್ ಗ್ರಂಥಿ
ಮಾನವನಿಗೆ ಪಳೆಯುಳಿಕೆಯಾಗಿ
ಬಂದಿದೆಯೇ ಹೊರತು, ಅವನ ಅವಶ್ಯ-
ಕತೆಯ ದೇಹಭಾಗವಾಗಿ ಅಲ್ಲ. ಹುಟ್ಟು
ವಾಗಲೇ ಇದ್ದು, ಮಗು ಬೆಳೆದು ಏಳು
ವರ್ಷದ ಪ್ರಾಯಕ್ಕೆ ಬರುವ ಹೊತ್ತಿಗೆ
ಈ ಗ್ರಂಥಿ ಕ್ಷಯಿಸಿ, ನಿರ್ಜೀವವಾಗಿ ಸುಣ್ಣ
ಕಲ್ಲಿನಂತೆ ಗಟ್ಟಿಯಾಗಿ ಬಿಡುತ್ತದೆ. ಎಲ್ಲೋ
ಕೆಲವರಲ್ಲಿ ಇದು ಜೀವಂತವಾಗಿದ್ದು ತನ್ನ
ಬಲುಮೆಯನ್ನು ತೋರಿಸಿಕೊಳ್ಳಬಹುದು.
ಮೆಲಾಟೋನಿನ್ನಿನ ಪ್ರಯೋಗಗಳನ್ನೆಲ್ಲಾ
ಈಗ ಮಾಡಿರುವುದು ಇಲಿಗಳ ಮೇಲೆ
ಮಾತ್ರ. ಅವುಗಳ ಮೇಲಿನ ಪರಿಣಾಮ
ವನ್ನು ಮಾನವನಿಗೂ ಅನ್ವಯ ಮಾಡ
ಲಾಗುತ್ತೆ: ಏಕೆಂದರೆ ಸಾಮಾನ್ಯವಾಗಿ
ಮಾನವನ ಪ್ರತಿಕ್ರಿಯೆಗಳೂ ಇಲಿಗಳ ಪ್ರತಿ
ಕ್ರಿಯೆಗಳಂತೆಯೇ ಇರುತ್ತವೆ. ಇನ್ನು
ಮೇಲೆ ಮಾನವನ ಮೇಲೂ ಪ್ರಯೋಗ
ಮಾಡಿ ಮೆಲಾಟೋನಿನ್ನಿನ ಪ್ರಭಾವವನ್ನು
ಪರೀಕ್ಷಿಸಿ ನೋಡಬೇಕಾಗಿದೆ.

ಪ್ರಾಚೀನರಿಗೆ ಪೈನಿಯಲ್ ಗ್ರಂಥಿಯ
ಮಹತ್ವ ನೇರವಾಗಿ ಅಲ್ಲವಾದರೂ ಇನ್ನು
ಹೇಗೋ ತಿಳಿದಿತ್ತೆಂದು ಕಾಣುತ್ತೆ.
ಕುಂಡಲಿನಿ ಯೋಗದಲ್ಲಿ ಸಾಮಾನ್ಯವಾಗಿ
ಎಲ್ಲ ಗ್ರಂಥಿಗಳಿರುವ ಸ್ಥಾನಗಳನ್ನು ಚಕ್ರ
ಎಂಬ ಹೆಸರಿನ ಶಕ್ತಿಕೇಂದ್ರಗಳಾಗಿ ಗುರುತಿ
ಸುತ್ತಾರೆ. ಅವುಗಳಲ್ಲಿ ತುತ್ತ ತುದಿಯದು
ಮಿದುಳಿನ ಹಿಂಭಾಗದಲ್ಲಿ ಮಧ್ಯಸ್ಥವಾಗಿ
ರುವ ಸಹಸ್ರಾರ ಚಕ್ರ ಎಂಬುದು. ಇದು
ಸುಮಾರು ಪೈನಿಯಲ್ ಗ್ರಂಥಿ ಇರುವ
ಜಾಗದಲ್ಲೇ ಇದೆ. ಕುಂಡಲಿನಿ ಶಕ್ತಿಯು
ಯೋಗಾಭ್ಯಾಸದಿಂದ ಇಲ್ಲಿಗೆ ತಲುಪಿದಾಗ
ಈ ಚಕ್ರಸ್ಥಾನವು ಅರಳಿ ಸಹಸ್ರ ದಳಗಳಿ
ರುವ ಕಮಲ ಪುಷ್ಪದಂತಾಗುತ್ತದೆ ಎಂಬ
ನಂಬಿಕೆ ಇದೆ. (ಇಲ್ಲಿ ಸಹಸ್ರ ಎಂದರೆ
ಅನೇಕ ಎಂಬ ಅರ್ಥವನ್ನು ತೆಗೆದುಕೊಳ್ಳ
ಬೇಕು). ಆಗ ಮಾನವ ತನ್ನ ಅಧ್ಯಾತ್ಮಿಕ
ಗುರಿಯನ್ನು ಮುಟ್ಟುತ್ತಾನೆ ಎನ್ನುತ್ತಾರೆ.
ಈ ಅರಳುವಿಕೆಯೇ ಕಲ್ಲಾದ ಪೈನಿಯಲ್
ಗ್ರಂಥಿಯು ಮತ್ತೆ ಜೀವಂತವಾಗಿ
ಪರಮೋತ್ಕೃಷ್ಟ ಬೆಳವಣಿಗೆ ಪಡೆದು
ಜಗತ್ತಿನ ಅನೇಕಾನೇಕ ಆಯಾಮಗಳನ್ನೂ
ಅರಿಯುವ ಶಕ್ತಿ ಪಡೆಯುತ್ತದೆ ಎಂದಿರ
ಬಹುದೆ?

ಈ ಗ್ರಂಥಿಯ ಮಹತ್ವವನ್ನು ಅಜ್ಮೀರದ
ರಾಧೆಸೋಮಿ ಪಂಥದವರು ಇನ್ನೂ ಸ್ಪಷ್ಟ
ವಾಗಿ ತಿಳಿದುಕೊಂಡಿದ್ದಾರೆ. ಭಾರತದ
ತಾತ್ವಿಕ ಹಾಗೂ ಧಾರ್ಮಿಕ ವಿಷಯ
ಗಳನ್ನು ಅತ್ಯಂತ ಆಸಕ್ತಿಯಿಂದ ಅಭ್ಯಸಿ
ಸಿದ್ದ ಪಾಲ್ ಬ್ರಂಟನ್ ಎಂಬ ಇಂಗ್ಲಿಷ್
ಲೇಖಕ ಹಾಗೂ ಪತ್ರಿಕೋದ್ಯಮಿ ರಾಧೆ
ಸೋಮಿ ಪಂಥದ ಮಠಾಧಿಪತಿಯಾಗಿದ್ದ
ಶ್ರೀ ಸಾಹೆಬ್ ಜೀಮಹರಾಜ್ ಎಂಬುವ
ರನ್ನು ಸಂದರ್ಶಿಸಿ ದೀರ್ಘವಾಗಿ ಪೈನಿಯಲ್

ಗ್ರಂಥಿಯ ಬಗ್ಗೆ ಮಾತುಕತೆಯಾಡಿದ್ದನ್ನು ತನ್ನ "ಎ ಸರ್ಚ್ ಇನ್ ಸೀಕ್ರೆಟ್ ಇಂಡಿಯ" ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾನೆ. ಸಾಹೆಬ್ ಜಿ ಮಹರಾಜರು, "ಪೈನಿಯಲ್ ಗ್ರಂಥಿಯೇ ಮಾನವ ಚೈತನ್ಯದ ಕೇಂದ್ರ ಬಿಂದು, ಅದೇ ದೇಹಕ್ಕೂ ಬುದ್ಧಿಗೂ ಚೈತನ್ಯವನ್ನು ಕೊಡುವ ಸ್ಥಾನ. ಮಾನವ ಇದರ ಯೋಗ್ಯ ರೀತಿಯ ತರಬೇತಿಯಿಂದ ಸೂಕ್ಷ್ಮ ಲೋಕಗಳ ಅರಿವನ್ನು ಪಡೆಯುತ್ತಾನೆ. ಉತ್ತಮೋತ್ತಮ ಪ್ರಜ್ಞೆ ಬರುವುದು ಸಹಿತ ಇದರಿಂದಲೇ" ಎಂದು ತಿಳಿಸಿದ್ದಾರೆ.

ಒಂದು ವಿಚಿತ್ರ ಸಂಗತಿ ಎಂದರೆ ದೇಹವನ್ನು ಬೆಳಕಿಗೆ ಒಡ್ಡಿದೆಷ್ಟೂ ಮೆಲಾಟೋನಿನ್ನಿನ ಉತ್ಪತ್ತಿ ಕಡಿಮೆಯಾಗುತ್ತದೆ! ಕತ್ತಲಲ್ಲಿ ಇದು ವರ್ಧಿಸುತ್ತದೆ! ಈ ಸಂದರ್ಭದಲ್ಲಿಒಂದು ವಿಷಯ ಗಮನೀಯ. ಆಯುರ್ವೇದದ ಕಾಯಕಲ್ಪಗಳ ಕೆಲವೊಂದು ವಿಧಾನಗಳಲ್ಲಿ ವ್ಯಕ್ತಿಯನ್ನು ಮೂರು ವಾರದವರೆಗೆ ಕತ್ತಲೆ ಕೋಣೆಯಲ್ಲಿಟ್ಟಿರುತ್ತಾರಂತೆ.

ಪಾಶ್ಚಾತ್ಯರೂ ಹಿಂದೆ ಪೈನಿಯಲ್ ಗ್ರಂಥಿಯ ಮಹತ್ವವನ್ನು ಅರಿತಿದ್ದರೆಂದು ಕಾಣುತ್ತದೆ. ಹದಿನೇಳನೇ ಶತಮಾನದಲ್ಲಿದ್ದ ಆಧುನಿಕ ತತ್ತ್ವಶಾಸ್ತ್ರದ ಪಿತಾಮಹ ಎನಿಸಿಕೊಂಡ ಹಾಗೂ ಗಣಿತಶಾಸ್ತ್ರಜ್ಞನಾಗಿದ್ದ ರೇನೆ ಡೆಕಾರ್ಟೆ (೧೫೯೬–೧೬೫೦) ಎಂಬ ಉದ್ದಾಮ ಪಂಡಿತನು "ಪೈನಿಯಲ್ ಗ್ರಂಥಿಯೇ ದೇಹ ಮತ್ತು ಮನಸ್ಸು ಸಂಧಿಸುವ ಜಾಗ, ಅದೇ ಆತ್ಮದ ನೆಲೆ" ಎಂದು ಉದ್ಗಾರ ತೆಗೆದಿದ್ದಾನೆ.

ಪೈನಿಯಲ್ ಗ್ರಂಥಿಯು ಪ್ರಾಣಿಗಳಲ್ಲೂ ಇದೆ ಎಂದು ಹಿಂದೆಯೇ ಹೇಳಿದೆ. ಮುಖ್ಯವಾಗಿ ಎಲ್ಲಾ ಬೆನ್ನೆಲುಬು ಇರುವ ಪ್ರಾಣಿಗಳಲ್ಲೆಲ್ಲಾ ಇದೆ. ಸರೀಸೃಪಗಳಲ್ಲಿ ಇದು ನಿಜವಾಗೂ ಮೂರನೆಯ ಕಣ್ಣು ಎನಿಸಿಕೊಂಡಿದೆ. ಲ್ಯಾರಿಪ್ರೆ ಎಂಬ ಜಲಚರ ಪ್ರಾಣಿಯಲ್ಲಿ ಈ ಮೂರನೆ ಕಣ್ಣು ತಾನು ಚಲಿಸುತ್ತಿರುವ ನೀರಿನ ಆಳ ಎಷ್ಟಿದೆ ಎಂಬುದನ್ನು ಅದಕ್ಕೆ ತಿಳಿಸುತ್ತದೆಯಂತೆ. ಮಿಕ್ಕ ಪ್ರಾಣಿಗಳಲ್ಲಿ ಅದು ಕೇವಲ ಅವಶೇಷವಾಗಿ ಉಳಿದಿದೆ.

ಈಗ ವೈದ್ಯಶಾಸ್ತ್ರದ ಮುಂದಿರುವ ಪ್ರಶ್ನೆ: ಮಾನವನಲ್ಲಿರುವ ಪೈನಿಯಲ್ ಗ್ರಂಥಿಯು ಅವನು ಬದುಕಿರುವವರೆಗೂ ಚೆನ್ನಾಗಿ ಕೆಲಸ ಮಾಡಿ ಮೆಲಾಟೋನಿನ್‌ನ್ನು ಅವಶ್ಯಕವಿದ್ದಷ್ಟು ಸುರಿಸುವಂತೆ ಹೇಗೆ ಮಾಡುವುದು? ಇದು ಒಂದಲ್ಲ ಒಂದು ದಿನ ಸಾಧ್ಯವಾಗಬಹುದು ಅಥವಾ ಇನ್ಸುಲಿನ್‌ನಂತೆ ಅದನ್ನೂ ಪ್ರಯೋಗಶಾಲೆಯಲ್ಲಿ ರಾಸಾಯನಿಕ ವಸ್ತುಗಳ ಸಂಯೋಜನೆಯಿಂದ ತಯಾರು ಮಾಡಬಹುದೋ? ಇವೆರಡರಲ್ಲಿ ಯಾವುದು ಸಾಧ್ಯವಾದರೂ ಮಾನವನ ಅನೇಕ ಕಷ್ಟಗಳು ದೂರವಾಗಿ ಅವನ ಜೀವನ ಆರೋಗ್ಯ, ದೀರ್ಘಾಯುಸ್ಸು, ದಿವ್ಯ ಮೇಧಾಶಕ್ತಿಯಿಂದ ಕಳಕಳಿಸುವ ಸಾಧ್ಯತೆ ಇದೆ.

ಪ್ರತಿಯೊಂದು ಸುಖದ ಅನಂತರ ದುಃಖ ಬಂದೇ ಬರುತ್ತದೆ. ಅವು ದೂರವಲ್ಲಿರಬಹುದು ಅಥವಾ ಹತ್ತಿರದಲ್ಲಿರಬಹುದು.

—ಸ್ವಾಮಿ ವಿವೇಕಾನಂದ

ಮಾನವೀಯ ಕಳಕಳಿಯ ನಟ ಸುನೀಲ್‌ದತ್

ಟಿ. ಎಸ್. ಲಲಿತ

೭೦೩, ಮೊದಲ ಮಹಡಿ, ೧೭ ನೇ ಮೇನ್

ಸರಸ್ವತಿಪುರ, ಮೈಸೂರು–೫೭೦೦೦೯

ರಾಜೀವ್‌ಗಾಂಧಿ ರಾಷ್ಟ್ರೀಯ ಮಾನವ ಸೇವಾ ಪ್ರಶಸ್ತಿಗಳಿಸಿರುವ ನಟ ಸುನೀಲ್‌ದತ್‌ರ ಧೀರೋದಾತ್ತ ಜೀವನದ ಪರಿಚಯ.

೧೯೮೭ ರ ಮಾರ್ಚ್ ೨೯ ನೇ ತಾರೀಖು. ಮುಂಬಯಿಯಿಂದ ಅಮೃತಸರದ ಸ್ವರ್ಣ ಮಂದಿರಕ್ಕೆ ಶಾಂತಿಯಾತ್ರೆ ಹೊರಟ ೬೩ನೇ ದಿನ. ಸುಪ್ರಸಿದ್ಧ ನಟ ಸುನೀಲ್‌ದತ್‌ಗೆ ಏಳುವಾಗಲೇ ತೀವ್ರ ಜ್ವರದೊಂದಿಗೆ ಗಿರಕಿ ಹೊಡೆವ ತಲೆ. ಅನಾರೋಗ್ಯದ ಬಗ್ಗೆ ಯೋಚಿಸಲು ಅವಕಾಶವೇ ಇಲ್ಲ. ಏಪ್ರಿಲ್ ಹದಿಮೂರರ ಬೈಸಾಕಿಯ ದಿನ ಸ್ವರ್ಣ ಮಂದಿರ ಸೇರಲೇಬೇಕು. ಇನ್ನೂ ೩೦೦ ಕಿ.ಮೀ. ಹಾದಿ ಕ್ರಮಿಸಬೇಕು.

ಶಾಲು ಹೊದೆದು, ಬಲವಂತವಾಗಿ ಯಾತ್ರೆ ಮುಂದುವರಿಸಿದರೂ, ಕಾರ್ನಾಲ್‌ದ ಕ್ಲಿನಿಕ್ ಒಂದರಲ್ಲಿ ರಕ್ತ ಪರೀಕ್ಷೆ. ಕಾಮಾಲೆ ಎಂದು ವ್ಯಾಧಿ ಗುರುತಿಸಿದ ವೈದ್ಯ ಸತೀಶ್‌ಪುರಿಯಿಂದ ಪ್ರಯಾಣ ನಿಲ್ಲಿಸಬೇಕೆಂಬ ಆಗ್ರಹ. ವಿಶ್ರಾಂತಿ ಅತ್ಯಗತ್ಯವಾಗಿತ್ತು ಸುನೀಲ್‌ಗೆ. ಈ ಸಲಹೆ ನಿರಾಕರಿಸಿದರೂ, ಪಥ್ಯದ ಆಹಾರ, ಅಲ್ಲಲ್ಲಿ ವಿಶ್ರಾಂತಿ ತೆಗೆದುಕೊಳ್ಳಲೊಪ್ಪಿದ ದತ್‌ಗೆ ಮೂರು ದಿನದ ಅನಂತರ ಜ್ವರ ಇಳಿಮುಖ. ಬೈಸಾಕಿಯ ದಿನ ೮೦ ಸಹಯಾತ್ರಿಗಳೊಂದಿಗೆ ಸಿಖ್ಖರ ಅತ್ಯಂತ ಪವಿತ್ರ ಸ್ವರ್ಣ ಮಂದಿರ ತಲುಪಿ, ಪೂಜಿಸಿದಾಗ ವೀಕ್ಷಿಸಿದವರು ೩೫೦೦೦ ಮಂದಿ!

೨೫೦೦ ಕಿ.ಮೀ. ದೂರದ, ೭೮ ದಿನಗಳ ಈ ಕಠಿಣಯಾತ್ರೆ, ಪಂಜಾಬಿನ ವಿಕ್ಷಿಪ್ತತೆಯ ಬಗ್ಗೆ ಭಾರತದ ಪ್ರಜೆಗಳ ಗಮನ ಸೆಳೆಯುವುದೇ ಆಗಿತ್ತು. ವರ್ಷಾನುಗಟ್ಟಲೆ ಈ ರಕ್ತಪಾತ ಮನವನ್ನು ಕ್ಷೋಭೆಗೊಳಿಸಿದ್ದರೂ, ಅಂಗವಿಕಲ ಹೆಣ್ಣು ಮಗುವೊಂದು ಭಯೋತ್ಪಾದಕರ ಕೈಲಿ ಕೊಲೆಗೀಡಾದಾಗ ತಡೆಯದಾದರು ದತ್. ಮನೆಯವರನ್ನು ಮಿತ್ರರನ್ನು ಸೇರಿಸಿ ಶಾಂತಿಯಾತ್ರೆಯಿಂದ ನಾವೆಲ್ಲ ಒಂದೇ ರಾಷ್ಟ್ರಕ್ಕೆ ಸೇರಿದವರೆಂಬ ಜನಜಾಗೃತಿಯನ್ನುಂಟುಮಾಡಬೇಕೆಂಬ ಯೋಜನೆ.

ಭಯೋತ್ಪಾದಕರ ಲಕ್ಷ್ಯ ತಮ್ಮತ್ತಲೇ ಇರುವುದೆಂಬ ಪೊಲೀಸರ ಎಚ್ಚರಿಕೆಗೂ

ಮೂಲ : ೧೯೯೦ರ ಮಾರ್ಚ್ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ವಿ. ಗಂಗಾಧರ್ ಅವರ "ದಿ ಮೆನಿ ರೋಲ್ಸ್ ಆಫ್ ಸುನೀಲ್‌ದತ್" ಲೇಖನ.

ಗುಂಡು ನಿರೋಧಕ ಜಾಕೆಟ್ ಧರಿಸಲು ಸುನೀಲ್‌ದತ್‌ರಿಂದ ನಿರಾಕರಣೆ. ಏಳು ರಾಜ್ಯಗಳ ಮೂಲಕ ಹಾದುಹೋಗುವಾಗ ಎಲ್ಲೆ ಮೀರಿದ ಉತ್ಸಾಹ, ಆತನ ನೋಟವೊಂದಕ್ಕಾಗಿ ದೂರದೂರದಿಂದ ಬಂದು ಸೇರಿದ ಜನತೆ. ರಸ್ತೆಯುದ್ದಕ್ಕೂ ಸುಮಾರು ೫೦೦ ಸಭೆಗಳು ಎಲ್ಲದರಲ್ಲೂ ದತ್ ಒತ್ತಿ ಹೇಳಿದ್ದು "ಹಿಂಸೆಯಿಂದ ನಮ್ಮ ಸಮಸ್ಯೆಗಳು ಬಗೆಹರಿಯಲಾರವು" ಎಂದು. ಭಾರತದ ಸಾಮಾಜಿಕ ಜೀವನದಲ್ಲಿ ಸುನೀಲ್‌ದತ್ ಹೊಂದಿದ ವಿಶೇಷ ಸ್ಥಾನವನ್ನು ತೋರಿಸಿತ್ತು ಈ ಶಾಂತಿಯಾತ್ರೆ. ಪಾರ್ಲಿಮೆಂಟ್ ಸದಸ್ಯ, ಸಮಾಜಸೇವಕ, ಎಪ್ಪತ್ತು ಸಿನೆಮಾಗಳ ನಟ ಒಂದರ ಮೇಲೊಂದರಂತೆ ಬಂದೆರಗಿದ ವೈಯಕ್ತಿಕ ದುರ್ಘಟನೆಗಳನ್ನೆದುರಿಸಿದರೂ, ಇತರರ ಸಹಾಯಕ್ಕಾಗಿ ಧಾವಿಸುತ್ತಿದ್ದ ಧೀರವ್ಯಕ್ತಿ.

ಸುನೀಲ್‌ದತ್ ಹುಟ್ಟಿದ್ದು ೧೯೨೯ರ ಜೂನ್ ೬ ರಂದು. ಪಶ್ಚಿಮ ಪಂಜಾಬಿನ ಬುಡ್ಡ್‌ನಲ್ಲಿ (ಈಗಿನ ಪಾಕಿಸ್ತಾನದ ಭಾಗ) ಸೇನಾಧಿಕಾರಿಯಾಗಿದ್ದ ತಂದೆ ಸಾವನ್ನಪ್ಪಿದಾಗ ಸುನೀಲ್ ಇನ್ನೂ ಐದರ ಬಾಲಕ. ಏಕಾಂಗಿಯಾದ ತಾಯಿ ಕುಲವಂತಿದೇವಿ, ಮೂರು ಮಕ್ಕಳ ಪಾಲನೆ ಪೋಷಣೆಯೊಂದಿಗೆ ಜಮೀನಿನ ಉಸ್ತುವಾರಿಯನ್ನೂ ನೋಡಿಕೊಳ್ಳಬೇಕಿತ್ತು.

೧೯೪೭ರ ದೇಶ ವಿಭಜನೆಯಲ್ಲಿ ದತ್ ಸಂಸಾರ ನಿರ್ಗತಿಕವಾಯ್ತು. "ಆ ನೆನಪೇ ಭಯಂಕರ" ಎನ್ನುತ್ತಾರೆ ಸುನೀಲ್. ಅಂಬಾಲಾದ ನಿರಾಶ್ರಿತರ ಕ್ಯಾಂಪಿನಲ್ಲೇ ಒಂದೆಡೆ ಸತ್ತ ಹೆಣದ ಮುಂದೆ ಗೋಳಾಡುವ ಮಹಿಳೆಯರಾದರೆ, ಕೆಲವ ಮೀಟರ್‌ಗಳಂತರದಲ್ಲಿ ನಡೆವ ಮೋಜಿನ ಸಮಾರಂಭ. ಕಳೆದ ಆಸ್ತಿಗೆ ಬದಲಾಗಿ ಅವರಿಗೆ ಸಿಕ್ಕಿದ್ದು ಅಂಬಾಲಾದ ಬಳಿಯ ಹಳ್ಳಿ ಮಾಂಡೋಲಿಯಲ್ಲೊಂದು ತುಂಡು ನೆಲ.

ಚಿಕ್ಕ ರೈತನಾಗುಳಿಯುವುದು, ೧೮ರ ಸುನೀಲ್‌ಗೆ ತೃಪ್ತಿತಾರದ್ದು. ಕಾಲೇಜು ವಿದ್ಯಾಭ್ಯಾಸಮಾಡಿ, ಭವ್ಯವಾಗಿ ಬಾಳುವ ಹಂಬಲ. ಆದ್ದರಿಂದ ೧೯೪೯ರಲ್ಲಿ ಎರಡು ಕುರ್ತಾ ಪೈಜಾಮು, ಜೇಬಿನಲ್ಲಿಟ್ಟ ೫೫ ರೂ ನೊಂದಿಗೆ ಮುಂಬಯಿಗೆ ಪ್ರಯಾಣ. 'ಜೈಹಿಂದ್' ಕಾಲೇಜಿಗೆ ದಾಖಲಾಗಿ ಹೊಟ್ಟೆಪಾಡಿಗಾಗಿ ತಿಂಗಳಿಗೆ ನೂರು ರೂ. ಪಗಾರದಂತೆ ಕಂಪನಿ ಒಂದರಲ್ಲಿ ಗುಮಾಸ್ತೆಯ ಕೆಲಸ. ಇತರ ಆರು ಜನರೊಂದಿಗೆ ಹಂಚಿಕೊಂಡ ಕೊಠಡಿಯಲ್ಲಿ ಹೆಚ್ಚು ವೇಳೆ ಹೊರಗೇ ಮಲಗಬೇಕಾಗುತ್ತಿತ್ತು.

ಕಾಲೇಜಿನಲ್ಲಿ ಲಾವಣಿಯೊಂದನ್ನು ಹಾಡಿದ ದತ್ತರ ಧ್ವನಿಯಿಂದ ಆಕರ್ಷಿತವಾದ ಜಾಹಿರಾತು ಸಂಸ್ಥೆಯೊಂದು, ರೇಡಿಯೋಗಾಗಿ, ಸಿನೆಮಾತಾರೆಯರ, ೧೫ ನಿಮಿಷಗಳ ಸಂದರ್ಶನ ಕಾರ್ಯಕ್ರಮವೊಂದನ್ನು ನಡೆಸುವಂತೆ ಕೇಳಿತು. ಮತ್ತೊಬ್ಬರಲ್ಲಡಗಿದ್ದ ಕಲೆಯರಳಿಸುವ ಪ್ರತಿಭೆ, ಕರಗತವಾಗಿದ್ದ ಸುನೀಲ್‌ದತ್ ಬಹುಬೇಗ ಸ್ಟುಡಿಯೋ ಸುದ್ದಿಗಳ 'ಫಿಲ್ಮಿ ಖಬರೆ' ಕಾರ್ಯಕ್ರಮಗಳನ್ನು ನಿರ್ದೇಶಿಸತೊಡಗಿದರು.

ದತ್‌ರ ಒರಟು ದೇಹದ ಗಾಂಭೀರ್ಯ, ಗಲ್ಲಾ ಪೆಟ್ಟಿಗೆಯನ್ನು ತುಂಬ ಬಲ್ಲದೆಂದು ಮನಗಂಡ ನಿರ್ಮಾಪಕ ರಮೇಶ್ ಸೈಗಲ್‌ರಿಂದ ದತ್ತರಿಗೆ ತಮ್ಮ ಚಿತ್ರ 'ರೈಲ್ವೇ ಪ್ಲಾಟ್‌ಫಾರ್ಮ್'ನ ನಾಯಕ ಪಟ್ಟ. ಮೊದಮೊದಲು

ಶ್ಯಾಮರಾದೆದುರು ಆದರಲ್ಲೂ ಪ್ರೇಮಭರಿತ ರಸಮಯ ಸನ್ನಿವೇಶಗಳಲ್ಲಿ ನಟಿಸುವುದೆಂದರೆ ಸುನೀಲ್‌ಗೆ ನಡುಕ. ಎಂದೂ ಹುಡುಗಿಯರೊಂದಿಗೆ ನಿಸ್ಸಂಕೋಚವಾಗಿ ಬೆರೆಯದ ಹಳ್ಳಿಯ ಹುಡುಗ. ಶೀರಾ ಕರಣ ಘಳಿಗೆ ಎಂದರೆ, ಬಿಗಿ ರವಿಕೆತೊಟ್ಟು ಮೊಣಕಾಲವರೆಗೆ ಪ್ಯಾಂಟ್ ಧರಿಸಿದ ಶೀಲಾ ರಮಣಿಯೊಂದಿಗೆ ನಟಿಸಿದಾಗ. "ಮಂಡಿಯೂರಿ, ಅವಳ ಕಾಲುಗಳನ್ನಪ್ಪಿ ಪ್ರೀತಿಯ ನೋಟದೊಂದಿಗೆ ಅವಳನ್ನೇ ದಿಟ್ಟಿಸು" ಎಂದು ಸೈಗಲ್‌ರ ಅಪ್ಪಣೆ. ನಡುಗುತ್ತ ಬಗ್ಗಿ, ಅವಳ ಕಾಲುಮುಟ್ಟಿದಾಗ, ಅವರ ಕೈನಡುಕ. "ಮತ್ತೊಮ್ಮೆಮಾಡು" ಕೋಪದಿಂದ ಕಿಡಿ ಕಾರಿದರು ಸೈಗಲ್. ಈ ದೃಶ್ಯ ಸರಿಯಾಗಿ ಮೂಡಿಬರುವಷ್ಟರಲ್ಲಿ ಚಿತ್ರೀಕರಣದ ಎಷ್ಟೋ ಪುನರಾವರ್ತನೆಗಳು. ಇದರಿಂದ ವಿವಶಗೊಂಡ ದತ್‌ರಿಂದ ಮುಂದೆಂದಾದರೂ ತಾವು ಸಿನೆಮಾ ನಿರ್ದೇಶಿಸಿದಲ್ಲಿ, ನಟರ ಭಾವನೆಗಳಿಗೆ ಸೂಕ್ಷ್ಮವಾಗಿ ಸ್ಪಂದಿಸಬೇಕೆಂಬ ನಿರ್ಧಾರ.

೧೯೫೫ ರಲ್ಲಿ ಬಿಡುಗಡೆಗೊಂಡ ಚಿತ್ರ 'ರೈಲ್ವೇ ಪ್ಲಾಟ್‌ಫಾರ್ಮ್' ಸಾಧಾರಣ ಯಶಗಳಿಸಿದರೂ 'ದ ಟೈಮ್ಸ್ ಆಫ್ ಇಂಡಿಯಾ' ಸುನೀಲ್‌ನ ನಟನೆಯನ್ನು ಹೊಗಳಿದಾಗ ಚಿತ್ರನಟನೆಗಾಗಿ ಸಾಲು ಹೆಚ್ಚಿದ ಬೇಡಿಕೆಗಳು. ೧೯೫೬ ರಲ್ಲಿ ಮೆಹಬೂಬ್ ಖಾನ್‌ರಿಂದ 'ಭಾರತೀಯ ಸ್ತ್ರೀತ್ವದ ವೀರಗಾಥೆ' ಎನಿಸಿದ ಚಿತ್ರ' 'ಮದರ್ ಇಂಡಿಯಾ'ದಲ್ಲಿ ಬೇಜವಾಬ್ದಾರಿಯ ಮಗ ಬಿರ್ಜುವಾಗಿ ನಟಿಸಲು ಆಯ್ಕೆ. ಚಿತ್ರದ ನಾಯಕಿ ರಾಧಾಳಾಗಿ ನಟಿಸಿದ್ದು ಅತ್ಯಂತ ಜನಪ್ರಿಯ ನಟಿ ನರ್ಗೀಸ್. ಚಿತ್ರೀಕರಣದ ವೇಳೆಯಲ್ಲಿ ಸಾಂಸಾರಿಕ ಸಮಸ್ಯೆಗಳು. ತಂಗಿಗೆ ಆಪರೇಶನ್, ಆದರೂ ತಲ್ಲೀನತೆಯಿಂದ ನಟನೆ.

೧೯೫೭ ರಲ್ಲಿ ಬಿಡುಗಡೆಯಾದ 'ಮದರ್ ಇಂಡಿಯಾ', ಸ್ವಲ್ಪದರಲ್ಲಿ ಆಸ್ಕರ್ ಪ್ರಶಸ್ತಿ ಗೆರವಾದರೂ, ನರ್ಗೀಸ್‌ಗೆ ಅನೇಕ ಅಂತಾರಾಷ್ಟ್ರೀಯ ಬಹುಮಾನಗಳ ಮನ್ನಣೆ. ಮರುವರ್ಷ ಸುನೀಲ್‌ದತ್‌ರ ಪತ್ನಿಯಾದ ನರ್ಗೀಸ್. ಸಂಜಯ, ನಮ್ರತ, ಪ್ರಿಯಾರ ತಾಯಿಯಾದ ನಂತರ ರಜತ ಪರದೆಗೆ ವಿದಾಯ. ಇವರದು ಮುಂಬಯಿ ಚಿತ್ರ ಜಗತ್ತಿನಲ್ಲೇ ಅಪೂರ್ವಜೋಡಿ, ಆದರ್ಶ ದಾಂಪತ್ಯ.

೧೯೬೨ ರ ಇಂಡೋಚೀನಾ ಯುದ್ಧ ಸಮಯ. ರಾಷ್ಟ್ರೀಯ ರಕ್ಷಣಾನಿಧಿಗಾಗಿ ೧ ಲಕ್ಷ ರೂ. ವಂತಿಗೆ ಅರ್ಪಿಸಿದ ದತ್ "ದೇಶಕ್ಕಾಗಿ ನಾನು ಮತ್ತೇನು ಮಾಡಬಲ್ಲೆ?" ಎಂದು ನೆಹರೂರನ್ನೇ ಕೇಳಿದಾಗ "ಯುದ್ಧದಿಂದ ಕಂಗೆಟ್ಟ ಸೇನಾದಳದ ಮುಂದೇಕೆ ನಿಮ್ಮ ಮನರಂಜನಾ ಕಾರ್ಯಕ್ರಮಗಳನ್ನು ನಡೆಸಬಾರದು? ಅದವರಿಗೆ ನೈತಿಕಬೆಂಬಲವಾಗಿ ಮಾನಸಿಕ ದೃಢತೆಯನ್ನು ಹೆಚ್ಚಿಸಬಲ್ಲದು", ಎಂದರು ನೆಹರು. ಇದಕ್ಕೆ ಒಪ್ಪಿದ ದತ್ ದಂಪತಿಗಳು, ಲತಾ ಮಂಗೇಶ್ಕರ್, ತಲತ್ ಮಹಮೂದ್, ಮುಖೇಶ್, ರಫಿ, ಕಿಶೋರ್‌ಕುಮಾರ್ ಮುಂತಾದ ಚಿತ್ರ ಜಗತ್ತಿನ ಸಂಗೀತ ದಿಗ್ಗಜಗಳೊಂದಿಗೆ 'ಅಜಂತಾ ಆರ್ಟ್ಸ್' ಹೆಸರಿನಲ್ಲಿ ಸೈನಿಕರಿಗೆ ಮನರಂಜನೆಯನ್ನು ಒದಗಿಸಿದರು. ಸಂಪರ್ಕವಿಲ್ಲದ ಜಾಗಗಳಲ್ಲಿ ಡೇರೆಹಾಕಿ, ಕೊರೆವ ಶೀತಲ ಹಿಮದನಡುವೆ

ನಡೆಸಿದ ಈ ಕಾರ್ಯಕ್ರಮಗಳು ಚಿರ ಸ್ಮರಣೀಯ.

ಹಿರಿಯ ನಟನೆಂದು ಹೆಸರಾದ ಸುನೀಲ್ ದತ್ ಈಗ ಸ್ವಂತ ಚಿತ್ರ ತಯಾರಕ. ಮಸಾಲಾ ಚಿತ್ರಗಳು ಜುಗುಪ್ಸೆತರಿಸಿದ್ದುವು. ಈಗ ಸತ್ಯಕ್ಕೆ ಸಮೀಪದ ಕಥಾವಸ್ತು ಹೊಂದಿದ ಚಿತ್ರ ಪ್ರಯೋಗ ಮಧ್ಯಪ್ರದೇಶದ ಡಕಾಯಿತರ ಬಗ್ಗೆ ತೆಗೆದ ಚಿತ್ರ 'ಫಿಲ್ಮ್‌ಫೇರ್'ನ ಉತ್ತಮ ನಟ ಪಾರಿತೋಷಿಕ ತಂದಿತು.

ಜೀವನದ ನೈಜ ಘಟನೆಗಳೇ ಚಿತ್ರದ ಕಥಾವಸ್ತುಗಳಾದುವು. ಒಮ್ಮೆ ನಿಗದಿತ ವೇಳೆಗಿಂತ ಬೇಗ ದೆಹಲಿಯಿಂದ ಮುಂಬೈಗೆ ಹಿಂತಿರುಗಿದ ದತ್‌ಗೆ ಖಾಲಿಮನೆ ಶೂನ್ಯವೆನಿಸಿತು. ಹೆಂಡತಿ, ಮಕ್ಕಳಿಲ್ಲದ ಮನೆಯ ಒಂಟಿತನದನುಭವ 'ಯಾದೇ' ಎನ್ನುವ ಚಿತ್ರದ ಕಥಾವಸ್ತುವಾಯಿತು. ಚಿತ್ರದಲ್ಲಿ ಅಸಹನೀಯ ಒಂಟಿತನ ಆತನನ್ನು ಆತ್ಮಹತ್ಯೆಗೆ ಪ್ರೇರೇಪಿಸುತ್ತದೆ. ಸಮಯಕ್ಕೆ ಸರಿಯಾಗಿ ಮನೆಗೆ ಬಂದ ಹೆಂಡತಿ, ಮತ್ತೆಂದೂ ಅವನನ್ನು ಒಂಟಿಯಾಗಿ ಬಿಟ್ಟು ಹೋಗುವುದಿಲ್ಲವೆಂದು ವಚನಕೊಡುತ್ತಾಳೆ. ಅತ್ಯಂತ ಮನೋಜ್ಞ ಅಭಿನಯದ ಈ ಚಿತ್ರ ೧೯೬೭ ರ ಏಷ್ಯನ್ ಚಲನಚಿತ್ರೋತ್ಸವದಲ್ಲಿ 'ಗ್ರಾಂಡ್‌ಪ್ರೀ' ಪಾರಿತೋಷಿಕ ಗಳಿಸಿತು. ಆದರೆ ನಿಜ ಜೀವನದಲ್ಲಿ ನಡೆದುದು ತದ್ವಿರುದ್ಧ.

ನಿರ್ದೇಶಕನಾಗಿ, ಕಿರಿಯ ನಟರನ್ನು ಗೌರವದಿಂದ ಕಂಡ ಸುನೀಲ್ ದತ್‌ರೊಂದಿಗೆ ಕೆಲಸ ಮಾಡುವುದು ಸುಲಭ ಎನ್ನುತ್ತಾಳೆ ನಟಿ ವಹೀದಾ ರಹಮಾನ್. ವಿನೋದ್ ಖನ್ನಾ, ಲೀನಾ ಚಂದಾವರ್ಕರ್, ಶಕ್ತಿ ಕಪೂರ್ ಮುಂತಾದ ನಟರನ್ನು ಬೆಳಕಿಗೆ ತಂದವರೇ ಸುನೀಲ್ ದತ್. ತಾಂತ್ರಿಕ ವಾಗಿಯೂ ಉತ್ತಮ ಮಟ್ಟವನ್ನು ನಿರೀಕ್ಷಿ ಸುತ್ತಿದ್ದ ಸುನೀಲ್‌ದತ್ ಸ್ಟುಡಿಯೋದ ಕೃತಕ ಸೆಟ್‌ಗಳನ್ನು ಬಿಟ್ಟು ಅತಿ ದುರ್ಗಮ ಪ್ರದೇಶಗಳಿಗೂ ಹೋಗಿ ಸ್ಥಳದಲ್ಲೇ ಚಿತ್ರೀ ಕರಣ ನಡೆಸಿದ್ದಾರೆ. ೧೯೬೯–೭೦ ರಲ್ಲಿ ರಾಜಸ್ಥಾನದ ಮರಳುಗಾಡಿನ ಸಮ್ಮೋಹಕ ಸೌಂದರ್ಯವನ್ನು ಸೂರೆಗೊಂಡ 'ರೇಷ್ಮಾ ಔರ್ ಷೇರಾ' ಹಾಗೂ 'ಯಾದೇ' ಚಿತ್ರಗಳು ಆ ಕಾಲಕ್ಕೂ ಮೀರಿದ ದೂರದರ್ಶಿತ್ವ ಹೊಂದಿದ ಚಿತ್ರಗಳಾಗಿದ್ದವು ಎನ್ನುತ್ತಾರೆ ಪ್ರಸಿದ್ಧ ಪತ್ರಕರ್ತ ಬಿ. ಕೆ. ಕರಂಜಿಯಾ.

ವಿಮರ್ಶಕರೇನೋ ಚಿತ್ರಗಳನ್ನು ಹೊಗ ದರು, ಆದರೆ ಸಾಂಪ್ರದಾಯಿಕತೆ ಅಗ್ಗದ ಹಾಸ್ಯ, ಅಬ್ಬರದ ಸಂಗೀತವಿಲ್ಲದ ಈ ಚಿತ್ರ ಗಳು ಗಲ್ಲಾಪೆಟ್ಟಿಗೆ ತುಂಬಲಿಲ್ಲ. ಆಸ್ಕರ್ ಪ್ರಶಸ್ತಿಗಾಗಿ ಭಾರತದ ಪರವಾಗಿ ಆಯ್ಕೆ ಯಾದ 'ರೇಷ್ಮಾ ಔರ್ ಷೇರಾ' ಚಿತ್ರ ದಿಂದಾಗಿ ೧೯೭೩ರಲ್ಲಿ ದತ್ ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಬೇಕಾಯ್ತೆನ್ನುವುದ ವಿಡಂಬನೆ, ದತ್ ಲಕ್ಷಾಂತರ ರೂ.ಗಳ ಸಾಲಗಾರ. ಆರ್ಥಿಕಸೋಲು ಚಿತ್ರಜಗತ್ತಿನ ಅನಾದರಣೆಗವರನ್ನು ಗುರಿಪಡಿಸಿತು ೧೯೭೪ ರಲ್ಲಿ ಆತ್ಮೀಯ ಗೆಳೆಯ ರಾಜ ಖೋಸ್ಲಾ, ದತ್‌ರ ಚಿತ್ರವೊಂದನ್ನು ನಿರ್ದೇಶಿಸಲೊಪ್ಪಿದರು. ಸಂಗೀತ, ನೃತ್ಯ ಸಾಹಸದೊಂದಿಗೆ,ದತ್ ನಾಯಕನಾಗಿನಟಿ ಮನರಂಜನೆ ಒದಗಿಸಿದ 'ನೆಹಲೆ ಪೆ ದೆಹಲಾ' ಚಿತ್ರ ಯಶಸ್ವಿಯಾಯ್ತು, ನಿರ್ದೇಶಕರ ಮತ್ತೆ ತಮ್ಮ ಚಿತ್ರಗಳಿಗಾಗಿ ಸಹಿ ಹಾಕಿ

ಕೊಳ್ಳಲು ದತ್ ಬಳಿ ಬರತೊಡಗಿದ ಐದು ವರ್ಷಗಳಲ್ಲಿ ಸಾಲವೆಲ್ಲ ತೀರಿತು.

ಬುದ್ಧಿಮಾಂದ್ಯ ಮಕ್ಕಳಿಗಾಗಿ ಶ್ರಮಿಸುತ್ತಿದ್ದ ನರ್ಗೀಸ್ ೧೯೮೦ರ ಏಪ್ರಿಲ್‌ನಲ್ಲಿ ರಾಜ್ಯಸಭೆಗೆ ನಾಮಕರಣ ಮಾಡಲ್ಪಟ್ಟರೆ, ಆಗಸ್ಟ್‌ನಲ್ಲೇ ಆರೋಗ್ಯ ಕೆಟ್ಟಿತು. ಕ್ಯಾನ್ಸರ್ ಚಿಕಿತ್ಸೆಗಾಗಿ ಅಮೇರಿಕಾದಲ್ಲಿ ಆಪರೇಶನ್ ಆದರೂ ರೋಗ ಉಲ್ಬಣವಾಗಿ ೧೯೮೧ರ ಮೇ ೩೧ರಂದು ನರ್ಗೀಸರ ಇಹಲೋಕ ವ್ಯಾಪಾರ ಮುಗಿದಿತ್ತು.

ಮಡದಿಯ ಮರಣ ಮಾನಸಿಕವಾಗಿ ದತ್‌ರನ್ನು ಛಿದ್ರಗೊಳಿಸಿತು. ಈ ದುಃಖ ಸಾಲದೆಂಬಂತೆ, ಮಗ ಸಂಜಯ್ ಮಾದಕ ದ್ರವ್ಯದ ವ್ಯಸನಿಯಾದ. ದುಃಖ ಭರಿಸಲಾಗದೆ ಸೆರೆ ಹಾಗೂ ಸಿಗರೇಟಿನ ಮೊರೆ ಹೊಕ್ಕ ದತ್‌ಗೆ ತಾಯಿಯ ಆದರ್ಶ ದಾರಿದೀಪವಾಯ್ತು. ತನ್ನ ಮಕ್ಕಳಿಗಾಗಿ ಆಕೆ ಪಟ್ಟ ಪಾಡು ಕಣ್ಮುಂದೆ ಚಿತ್ರಿತವಾದಾಗ ನನ್ನ ಮಕ್ಕಳ ಬಗ್ಗೆ ನಾನಷ್ಟೇ ದೃಢತೆ ತೋರಬೇಕೆಂಬ ಸಂಕಲ್ಪ.

ನರ್ಗೀಸಳ ನೆನಪಿಗೊಂದು ಭವ್ಯ ಸ್ಮಾರಕ ರಚಿಸುವ ನಿರ್ಧಾರ, ನರ್ಗೀಸ್ ಆಸ್ಪತ್ರೆಯಲ್ಲಿದ್ದಾಗ "ನಮ್ಮ ದೇಶದ ಆಸ್ಪತ್ರೆಗಳಲ್ಲೂ ಅಮೆರಿಕದ ಆಸ್ಪತ್ರೆಯಂತಹ ಸೌಲಭ್ಯಗಳು ಸಿಗುವಂತಿದ್ದರೆ ಎನ್ನುತ್ತಿದ್ದಳು. ಅವಳು ಸತ್ತಾಗ ಅವಳ ಕನಸನ್ನು ನನಸಾಗಿಸಲು ನಿರ್ಧರಿಸಿದೆ" ಎನ್ನುತ್ತಾರೆ ದತ್.

೧೯೮೨ರಲ್ಲಿ 'ನರ್ಗೀಸ್ ದತ್ ಮೆಮೋರಿಯಲ್ 'ಫೌಂಡೇಶನ್' ಸ್ಥಾಪಿತವಾಯ್ತು. ಅನಿವಾಸಿ ಭಾರತೀಯ ಕ್ಯಾನ್ಸರ್ ಆಸ್ಪತ್ರೆಯ ಆಧುನಿಕ ಉಪಕರಣಗಳಿಗಾಗಿ ಅರ್ಧ ಮಿಲಿಯನ್ ಡಾಲರ್‌ಗಳಿಗೂ ಹೆಚ್ಚು ಹಣ ಖರ್ಚು ಮಾಡಿದ್ದಾರೆ. ಸ್ಥಳೀಯ ವೈದ್ಯರಿಗೆ ವಿದೇಶಗಳಲ್ಲಿ ತರಬೇತು ಕೊಡಿಸುವ, ಕ್ಯಾನ್ಸರ್ ಪರಿಣತರನ್ನು ಭಾರತಕ್ಕೆ ಕರೆಸಿ, ಸಲಹೆ ಚಿಕಿತ್ಸೆ ನೀಡುವಂತೆ ಅನುಕೂಲಗಳನ್ನೊದಗಿಸುತ್ತದೆ ಈ ಫೌಂಡೇಶನ್. ಮುಂಬಯಿಯ ಟಾಟಾ ಮೆಮೋರಿಯಲ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ 'ನರ್ಗೀಸ್ ದತ್ ಇಂಟೆನ್ಸಿವ್ ಕೇರ್ ಯೂನಿಟ್' ವಿಭಾಗ ಸ್ಥಾಪಿಸಿದೆ. ಆಗಾಗ್ಗೆ ವಾರ್ಡ್‌ಗಳಿಗೆ ಭೇಟಿ ನೀಡುವುದರೊಂದಿಗೆ, ರೋಗಿಗಳ ಬಗ್ಗೆ ವೈಯಕ್ತಿಕ ಆಸಕ್ತಿ ವಹಿಸಿ, ಆಸ್ಪತ್ರೆಯಲ್ಲೇ ರೋಗಿಗಳ ಮನರಂಜನೆಯ ಏರ್ಪಾಡು ಮಾಡುತ್ತಾರೆ.

೧೯೮೧ರ ಡಿಸೆಂಬರ್ ತಿಂಗಳಿನಲ್ಲಿ ಮುಂಬಯಿಯ ಷರೀಫ್ ಆಗಿ ಆಯ್ಕೆಯಾದ ದತ್, ಮೂರು ವರ್ಷಗಳ ನಂತರ, ಪಾರ್ಲಿಮೆಂಟ್ ಸದಸ್ಯರಾಗಿ ಆಯ್ಕೆ. ಈ ಅವಧಿಯಲ್ಲಿ ಹೆಚ್ಚು ಜನರಿಗೆ ಸಹಾಯ ಮಾಡಲು ಸಾಧ್ಯ ಎನಿಸಿತು. ಮಾದಕ ದ್ರವ್ಯದ ಸೇವನೆಯನ್ನು ವಿರೋಧಿಸುವ ದತ್, ತಂದೆ ತಾಯಿಗಳು ಮಾದಕ ವ್ಯಸನಿ ಮಕ್ಕಳ ಕಲ್ಯಾಣದ ಬಗ್ಗೆ ಯೋಚಿಸುವಂತೆ ಹೇಳುತ್ತಾರೆ.

ಇತ್ತೀಚಿನ ಅವರ ಚಿತ್ರಗಳು ಸಾಮಾಜಿಕ ಸಮಸ್ಯೆಗಳ ಬಗ್ಗೆ ಹೆಚ್ಚು ಹೆಚ್ಚು ವಿಚಾರ ಮಾಡುವಂಥವು. ೧೯೮೩ರಲ್ಲಿ ತಯಾರಿಸಿದ 'ದರ್ದ್-ಕ-ರಿಶ್ತ' ಕ್ಯಾನ್ಸರ್‌ಗೆ ಸಂಬಂಧಿಸಿದ ಚಿತ್ರವಾದರೂ, ರಾಷ್ಟ್ರೀಯ ಐಕ್ಯಕ್ಕೆ ಹೆಚ್ಚು ಒತ್ತು ನೀಡುವಂಥದು, ಚಿತ್ರಗಳು ಮನಸದ ಮೇಲೆ ಪರಿಣಾಮ ಬೀರಬಲ್ಲವು. ಉತ್ತಮ ಗುಣಮೌಲ್ಯಗಳ ಪ್ರಚಾರಕ್ಕೆ

ಅವುಗಳ ಮಾಧ್ಯಮವನ್ನೇಕೆ ಉಪಯೋಗಿಸಬಾರದೆನ್ನುತ್ತಾರವರು.

ಸುನೀಲ್‌ದತ್, ಈಗ ನಾಯಕನಾಗಿ ನಟಿಸದಿದ್ದರೂ, ಅವರು ಹೋದಲ್ಲೆಲ್ಲಾ ಜನ ಅವರನ್ನು ಸುತ್ತುವರಿಯುತ್ತಾರೆ. ಅವರಿಂದ ಕೆಲವೊಂದು ಸೌಲಭ್ಯಗಳನ್ನು ಪಡೆದುಕೊಳ್ಳಲು, ಆಸ್ಪತ್ರೆಯ ದಾಖಲಾತಿ, ಕೆಲಸ ಪಡೆಯಲು ಅವರ ಸಹಾಯ ಬಯಸಿ ಮುಂಬಯಿಯ ಅವರ ಕಛೇರಿಯನ್ನು ಮುತ್ತುತ್ತಾರೆ. ಯಾರಿಗೂ ನಕಾರಾತ್ಮಕ ಉತ್ತರವಿಲ್ಲ ಸುನೀಲ್‌ದತ್‌ರಿಂದ.

ಅನುಭವಿಸಿದ ಕಷ್ಟನಷ್ಟಗಳು ಸಾಲದೆಂಬಂತೆ, ಬಾಂಬ್‌ಧಾಳಿ ಪ್ರಕರಣ
ಸೆರೆಮನೆ ಸೇರಿದ ಮಗ ಸಂಜಯ
ಅನಾರೋಗ್ಯದಿಂದ ಸಾವನ್ನಪ್ಪಿದ ಸ
ರಿಚಾ, ಈ ಎಲ್ಲ ನೋವುಗಳನ್ನನುಭವಿ
ತ್ತಲೇ ಮುನ್ನಡೆಯುತ್ತಾರೆ ಸುನೀಲ
ಇಷ್ಟು ಕಷ್ಟಗಳನ್ನು ಸಹಿಸುವ ಶಕ್ತಿ ನಿವ
ಹೇಗೆ ಬಂತೆಂದಾಗ "ಪರಿಸ್ಥಿತಿ ಬಂದ
ಅವುಗಳನ್ನೆದುರಿಸುತ್ತೇನೆ. ಇತರರಿ
ನನ್ನಿಂದಾದಷ್ಟು ಸಹಾಯಮಾಡುತ್ತೇ
ಅದರಲ್ಲೇ ನಾನು ಜೀವನದ ಅರ್ಥ ಕಂ
ಕೊಳ್ಳುತ್ತೇನೆ" ಎನ್ನುವ ಸುನೀಲ್‌ದತ
ಮಾನವೀಯ ಕಳಕಳಿ ಹಾಗೂ ದೇಶಭ
ಕೇವಲ ನಟನೆಯಲ್ಲ!



ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯ ಬೇಡ. ಅನ್ಯರಿಗೆ ಅಸಹ್ಯ ಪಡಬೇಡ. ತನ್ನ
ಬಣ್ಣಿಸಬೇಡ. ಇದಿರು ಹಳಿಯಲು ಬೇಡ ಇದೇ
ಅಂತರಂಗ ಶುದ್ಧಿ ; ಇದೇ ಬಹಿರಂಗ ಶುದ್ಧಿ

—ಬಸವಣ್ಣ

ಪ್ರಾಣಿಗಳು ಪ್ರೀತಿಸುತ್ತವೆಯೆ?

ಡಿ. ವಿ. ಶಾಮಣ್ಣ
ನಂ. ೧೮೯೧, 'ಅರಥಿ' ೧ನೇ ಮೇನ್
೪ನೇ ಕ್ರಾಸ್, ಶ್ರೀರಾಂಪುರ ೨ನೇ ಹಂತ
ವಿವೇಕಾನಂದನಗರ, ಮೈಸೂರು ೫೭೦ ೦೨೪

ಒಂದು ಸಂಜೆ, ಬರ್ಮಾದೇಶದ ನದಿಯೊಂದರ ಏರುತ್ತಿದ್ದ ಪ್ರವಾಹದ ನೀರಿನಲ್ಲಿ ಮಾಶ್ವೆ ಎಂಬ ಪಳಗಿಸಿದ ಹೆಣ್ಣಾನೆ ಮತ್ತು ಮೂರು ತಿಂಗಳು ವಯಸ್ಸಿನ ಅದರ ಮರಿ ಸಿಕ್ಕಿಕೊಂಡವು. ಮರಿಯ ಚೀತ್ಕಾರ ಕೇಳಿ ಆನೆಶಿಬಿರದ ನಿರ್ವಾಹಕರು ಸ್ಥಳಕ್ಕೆ ಧಾವಿಸಿದರೂ, ನೀರಿನ ಆಳ ೧೫ ರಿಂದ ೩೦ ಅಡಿ ಇದ್ದುದ್ದರಿಂದ, ಮರಿಯ ರಕ್ಷಣೆಗೆ ಏನನ್ನೂ ಮಾಡಲಾಗಲಿಲ್ಲ. ತಾಯಿ ಆನೆಯ ಕಾಲುಗಳು ನದಿಯ ತಳದಲ್ಲಿದ್ದರೂ, ಅದರ ಮರಿಯು ಮಾತ್ರ ನೀರಿನಲ್ಲಿ ತೇಲುತ್ತಿತ್ತು. ಮಾಶ್ವೆ ಮರಿಯನ್ನು ಸೊಂಡಲಿನಿಂದ ತನ್ನ ದೇಹಕ್ಕೆ ಅಪ್ಪಿ ಹಿಡಿಯಲು ಪ್ರಯತ್ನಿಸಿತು, ಆದರೆ ವೇಗವಾಗಿ ಹರಿಯುತ್ತಿದ್ದ ನೀರು ಮರಿಯನ್ನು ಕೊಚ್ಚಿಕೊಂಡು ಹೋಯಿತು.

ತನ್ನ ಮರಿಯನ್ನು ರಕ್ಷಿಸಲು, ಮಾಶ್ವೆ, ಭೋರ್ಗರೆಯುತ್ತಿದ್ದ ನದಿಯಲ್ಲಿ ಸುಮಾರು ೩೦೦ ಅಡಿ ದೂರ ಧುಮುಕಿ, ಮರಿಯನ್ನ ತನ್ನ ತಲೆಯಿಂದ ನದಿಯ ದಡಕ್ಕೆ ಒತ್ತಿ ಹಿಡಿದು, ಸೊಂಡಲಿನಿಂದ ಎತ್ತಿ, ತನ್ನ ಹಿಂಗಾಲುಗಳ ಮೇಲೆ ಸರಿಸಿ, ನೀರಿನಿಂದ ಎತ್ತರದಲ್ಲಿದ್ದ ಕಿರಿದಾದ ಬಂಡೆಯೊಂದರ ಮೇಲೆ ಇಟ್ಟಿತು. ಅನಂತರ ಹರಿಯುತ್ತಿದ್ದ ನದಿಯಲ್ಲಿ ಹಾರಿ ಮಾಶ್ವೆ ಮಾಯವಾಯಿತು.

ನಿಲ್ಲುವಷ್ಟು ಮಾತ್ರ ಎಡೆಯಿದ್ದ ಕಿರಿಯ ಬಂಡೆಯ ಮೇಲೆ ನಡುಗುತ್ತಾ ನಿಂತಿದ್ದ ಮರಿ ಆನೆಯ ಕಡೆಗೆ ಆನೆ ಪಾಲಕರು ತಮ್ಮ ಗಮನವನ್ನು ಹರಿಸಿದರು. ಅರ್ಧ ತಾಸಿನ ಅನಂತರ, ಆನೆ ಶಿಬಿರದ ಬ್ರಿಟಿಷ್ ವ್ಯವಸ್ಥಾಪಕ ಜೆ. ಎಚ್. ವಿಲಿಯಮ್ಸ್ ಮರಿಯನ್ನು ನೋಡುತ್ತಾ, ಅದನ್ನು ರಕ್ಷಿಸುವುದು ಹೇಗೆಂದು ಯೋಚಿಸುತ್ತಿದ್ದಾಗ. ಅವರು ಕೇಳಿದ್ದು (ಅವರದೇ ಮಾತುಗಳಲ್ಲಿ) "ನನ್ನ ನೆನಪಿನಲ್ಲಿರುವ, ತಾಯಿಯ ಪ್ರೇಮದ ಅತ್ಯಂತ ಚಿತ್ತಾಕರ್ಷಕ ದನಿ. ಮಾಶ್ವೆ ನದಿಯನ್ನು ದಾಟಿ, ದಡದ ಮೇಲೇರಿ, ತನ್ನ ಮರಿಯೆಡೆಗೆ ಉದ್ಧಟತನದಿಂದ ಘೀಳಿಡುತ್ತಾ ಹೋಗುತ್ತಿತ್ತು. ಆದರೆ ಗರ್ಜನೆಯಂತಿದ್ದ ಮಾಶ್ವೆಯ

ಇಂಗ್ಲಿಷ್ ಮೂಲ : ಜೆಫ್ರಿ ಮುಸಾಯಿಫ್ ಮ್ಯಾಸನ್ ಮತ್ತು ಸ್ಯೂಸನ್ ಮ್ಯಾಕ್‌ಕಾರ್ತಿ

ಘೀಳಿನ ಆರ್ಭಟ ಮರಿಯ ಕಿವಿಗೆ ಇಂಪಾದ ಸಂಗೀತದಂತಿತ್ತು. ಭಾರತದ ಭೂಪಟ ದಂತಿದ್ದ ಮರಿಯ ಆ ಎರಡು ಚಿಕ್ಕ ಕಿವಿಗಳು ಪ್ರಮುಖವಾದ ಏಕಮಾತ್ರ ಶಬ್ದ–'ತಾಯಿಯ ಕೂಗನ್ನು'–ಚಾಚಿ ಆಲಿಸುತ್ತಿದ್ದುವು.

ತನ್ನ ಮರಿಯು ನದಿಯ ಆಚೆ ದಡದಲ್ಲಿ ಸುರಕ್ಷಿತವಾಗಿರುವುದನ್ನು ಕಾಣುತ್ತಿದ್ದಂತೆಯೆ, ಮಾಶ್ವಿಯ ಕೂಗು ಆನೆಗಳು ಖುಷಿಯಾದಾಗ ಸಾಮಾನ್ಯವಾಗಿ ಮಾಡುವ ಮರ ಮರ ಶಬ್ದವಾಗಿ ಮಾರ್ಪಾಡಾಯಿತು. ಶಿಬಿರದ ನಿರ್ವಾಹಕರು ತಾಯಿ ಮತ್ತು ಮರಿ ಆನೆಗಳನ್ನು ಅವು ಇದ್ದಲ್ಲೇ ಬಿಟ್ಟು ಹಿಂದಿರುಗಿದರು. ಬೆಳಗಾಗುವ ಸಮಯಕ್ಕೆ ಮಾಶ್ವಿ ನೆರೆಯಿಳಿದಿದ್ದ ನದಿಯನ್ನು ದಾಟಿತ್ತು, ಮರಿಯು ಬಂಡೆಯಿಂದ ಕೆಳಗಿಳಿದಿತ್ತು.

ಸ್ವತಃ ವಿಕಾಸಹೊಂದಿದ ಪ್ರಾಣಿಗಳಾದ ಮಾನವರು ಪ್ರೀತಿಯೆಂದರೇನೆಂದು ತಮಗೆ ತಿಳಿದಿದೆ ಎಂದು ನಂಬಿದ್ದಾರೆ ಮತ್ತು ಪ್ರೀತಿಗೆ ಹೆಚ್ಚಿನ ಮಾನ್ಯತೆ ನೀಡುತ್ತಾರೆ. ಆದರೆ ಪ್ರಾಣಿಗಳ ವರ್ತನೆಯ ಅಧ್ಯಯನ ಮಾಡುವ ತಜ್ಞರು, ಪ್ರಾಣಿಗಳು ಪ್ರೀತಿಯನ್ನು ಅನುಭವಿಸಬಲ್ಲವು–ಎಂದು ಹೇಳುವಾಗ ಬಹಳ ಮುಂಜಾಗರೂಕತೆ ವಹಿಸುತ್ತಾರೆ, ಅಥವಾ ಆ ಪದ ಬಳಸಲು ಹಿಂಜರಿಯುತ್ತಾರೆ.

ಆನೆ ಶಿಬಿರದ ನಿರ್ವಾಹಕ ವಿಲಿಯಮ್ಸ್ ಏನಾದರೂ ಪ್ರಾಣಿ ವರ್ತನಾ ಅಧ್ಯಯನ ತಜ್ಞನಾಗಿದ್ದರೆ, ಮಾಶ್ವಿ ಮತ್ತು ಅದರ ಮರಿಯ ವಿಷಯವನ್ನು ಚರ್ಚಿಸುವಾಗ
ಮಾಶ್ವಿ ಮತ್ತು ಅದರ ಮರಿಯ ನಡು
ಇರುವ ಬಾಂಧವ್ಯವನ್ನು ಪ್ರಾಯಶಃ 'ಪ್ರೀತಿ
ಅನ್ನುವ ಬದಲು 'ಸಂಕೋಲೆ' ಎಂದ
ವಿವರಿಸುತ್ತಿದ್ದನೊ ಏನೋ. ಪ್ರಾ
ಪ್ರಪಂಚವನ್ನು ಅಧ್ಯಯನ ಮಾಡುತ್ತಿರು
ಮತ್ತೊಬ್ಬ ವೀಕ್ಷಕ ಹೇಳುವಂತೆ "ಪ್ರಾ
ಗಳು ನಿಜವಾದ ಪ್ರೀತಿಯನ್ನು ತೋರಿಸ
ವುದಿಲ್ಲ ಎನ್ನುವುದನ್ನು ನೆನಪಿನಲ್ಲಿಡುವುದ
ಮುಖ್ಯ. ಅವು ಕೇವಲ ತಮ್ಮ 'ವಂ
ವಾಹಿಗಳ ಆದೇಶ' ವನ್ನು ಪಾಲಿಸುತ್ತವೆ.

ಇದು ನಿಜವಾಗಿಯೂ ಅಷ್ಟು ಸರಳವೆ
ಜೋಡಿಯಲ್ಲಿ ಕೂಡಿ ಸಾಯುವವರೆಗು
ಜೊತೆಯಲ್ಲಿಯೇ ವಾಸಿಸುವ ಪ್ರಾಣಿಗ
ವಿಷಯವೇನು? ಪ್ರಾಣಿಗಳು ಜೋ
ಯಾಗಿರುವುದು ಮರಿಗಳಿಗೆ ಸಾಕಷ
ಗಮನ ಸಿಕ್ಕಲೆಂದು ಮಾತ್ರ ಎಂದು ಪ್ರಾ
ವಿಕಾಸವನ್ನು ಅಧ್ಯಯನ ಮಾಡುವ ಜೀ
ವಿಜ್ಞಾನಿಗಳು ಅಭಿಪ್ರಾಯ ಪಟ್ಟರೂ, ಇದ
ವಾಸ್ತವವೇ ಎಂಬುದು ಸ್ಪಷ್ಟವಾಗಿಲ್ಲ
ಹಲವು ಪ್ರಾಣಿಗಳು ಮರಿಗಳನ್ನು ಬೆಳೆ
ದಿದ್ದಾಗಲೂ ಕೂಡ ಜೊತೆಯಾಗಿಯೆ ಇರ
ತ್ತವೆ. ಸಂಗಾತಿಗಳು (ಜೋಡಿಗಳು
ಸಾಮಾನ್ಯವಾಗಿ ಒಟ್ಟಿಗೆ ಮಲಗುತ್ತವ
ಆಹಾರ ಹುಡುಕುತ್ತವೆ ಮತ್ತು ಒಂ
ಕ್ಕೊಂದು ತಿನ್ನಿಸುತ್ತವೆ, ಸಂಗಾತಿಗಳ
ಒಂದೇನಾದರೂ ಸತ್ತರೆ ಉಳಿದುದು ದುಃ
ವ್ಯಕ್ತಪಡಿಸುತ್ತದೆ ಅಥವಾ ಸೋತ ಮನೋ
ಭಾವನೆಯನ್ನು ತೋರುವಂತೆ ಕಾಣುತ್ತ

ಇದರ ನಿದರ್ಶನವಾಗಿ ಪ್ರಾಣಿ ವರ್ತನ
ಅಧ್ಯಯನ ತಜ್ಞರಾದ ಕಾನ್‌ರಾ
ಲೊರೆನ್ಸ್, ಆ್ಯಡೊ ಎಂಬ ಗಂಡು ಬಾ

ತನ್ನ ಸಂಗಾತಿ ಸೂಸನ್ ಎಲಿಜೆಬೆತನ್ನು ನರಿಯೊಂದು ಕೊಂದಾಗ ತೋರಿದ ವರ್ತನೆಯನ್ನು ವಿವರಿಸುತ್ತಾರೆ. ಆ್ಯಡೊ ಅರ್ಧ ತಿನ್ನಲ್ಪಟ್ಟಿದ್ದ ತನ್ನ ಸಂಗಾತಿಯ ದೇಹದ ಪಕ್ಕ ಮೌನವಾಗಿ ನಿಂತಿತು. ದಿನಗಳು ಕಳೆದಂತೆ ತನ್ನ ದೇಹವನ್ನು ಬಗ್ಗಿಸಿ, ತನ್ನ ತಲೆಯನ್ನು ತಗ್ಗಿಸಿತು. ಅದರ ಕಣ್ಣುಗಳು ಕುಸಿದುವು. ಬೇರೆ ಬಾತುಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಮನಸ್ಸಿಲ್ಲದಿದ್ದರಿಂದ, ತಂಡದಲ್ಲಿ ಅದರ ಸ್ಥಾನ ಮಾನಗಳು ಕಡಿಮೆಯಾದವು. ಒಂದು ವರ್ಷ ಕಳೆಯಿತು. ಕೊನೆಗೂ ಆ್ಯಡೊ ಚೇತರಿಸಿಕೊಂಡು ಮತ್ತೊಂದು ಸಂಗಾತಿಯನ್ನು ಕಂಡುಕೊಂಡಿತು.

ಪ್ರಾಣಿಗಳು ಒಂದರಲ್ಲೊಂದು ನಾಟಕೀಯ ರೀತಿಯಲ್ಲಿ ಅನುರಕ್ತರಾಗಬಹುದು. ಪ್ರಾಣಿತಜ್ಞ ಲೊರೆನ್ಜ್ ಪ್ರಕಾರ ಎರಡು ಗ್ರೇ ಲ್ಯಾಗ್ ಬಾತುಗಳು, ಚಿಕ್ಕವಿದ್ದಾಗ ಪರಿಚಯವಿದ್ದು, ಅನಂತರ ಬೇರೆಯಾಗಿ, ಮತ್ತೆ ಭೇಟಿ ಮಾಡಿದಾಗ, ಒಂದರಲ್ಲೊಂದು ಅನುರಕ್ತಿ ಹೊಂದಲು ಯುಕ್ತವಾಗಿರುತ್ತವೆ. ಇದನ್ನು, ಪುರುಷನೊಬ್ಬ ಮಹಿಳೆಯೊಬ್ಬಳನ್ನು ಭೇಟಿಯಾಗಿ ಅವಳು ತಾನು ಚಿಕ್ಕ ವಯಸ್ಸಿನಲ್ಲಿ ನೋಡಿದ ಲಂಗ ಜಡೆಯಲ್ಲಿ ಆಡುತ್ತಿದ್ದ ಹುಡುಗಿಯೇ ಎಂಬುದನ್ನು ತಿಳಿದು, ಬೆರಗುಗೊಂಡು,ಒಬ್ಬರನ್ನೊಬ್ಬರು ಪ್ರೀತಿಸಿ ಮದುವೆಯಾಗುವುದಕ್ಕೆ, ಲೊರೆನ್ಜ್ ಹೋಲಿಸುತ್ತಾರೆ. ಗಿಳಿಗಳ ವರ್ತನಾ ಸಲಹೆಗಾರ್ತಿ ಮೇಟ್ಟಿ ಸ್ಯೂ ಆ್ಯಥನ್ ಪ್ರಕಾರ ದೊಡ್ಡ ಜಾತಿಯ ಗಿಣಿಗಳಲ್ಲಿ ಮೊದಲ ನೋಟಕ್ಕೆ ಪ್ರೀತಿಯುಂಟಾಗುವುದು ಬಹಳ ಸಾಮಾನ್ಯ. ಆ್ಯಥನ್ ಈ ಘಟನೆಯನ್ನು 'ಸಿಡಿಲು' ಎಂದು ವಿವರಿಸುತ್ತಾಳೆ.

ಹುಟ್ಟರಿವು ಪ್ರಾಣಿಗಳನ್ನು ಪ್ರೇಮಿಸುದಕ್ಕೆ ಪ್ರೇರೇಪಿಸಬಹುದು, ಆದರೆ ಅವು ಯಾರನ್ನು ಪ್ರೇಮಿಸುತ್ತವೆ ಎಂದು ಹೇಳುವುದಿಲ್ಲವಾದರೂ, ಪ್ರೇಮಿಯ ಸುಳಿವನ್ನು ನೀಡಬಹುದು. ಚಿಕ್ಕ ಅಂಬ್ರೆಲ್ಲಾ ಗಿಳಿಯೊಂದಕ್ಕೆ ಸಂಗಾತಿಯನ್ನು ಹುಡುಕುತ್ತಾ ಆ್ಯಥನ್ ಸುಂದರವಾದ ರೆಕ್ಕೆ ಪುಕ್ಕಗಳಿರುವ ಗಂಡು ಗಿಳಿಯೊಂದನ್ನು ಖರೀದಿಸಿ, ಎರಡನ್ನೂ ಪರಿಚಯಿಸಿಕೊಟ್ಟರು. ಖೇದದ ಸಂಗತಿಯೆಂದರೆ:

"ಆ ಗಂಡು ಗಿಳಿ, ಪಂಜರದಲ್ಲಿ ಹೆಣ್ಣು ಗಿಣಿಯು ಇರುವುದೇ ಅರಿವಿಲ್ಲದಂತೆ ನಡೆದುಕೊಂಡಿತು."

ಹಲವು ತಿಂಗಳುಗಳ ಬಳಿಕ ಆ್ಯಥನ್‌ಗೆ ಚಕಿತಗೊಳಿಸುವಷ್ಟು ಕೆಟ್ಟ ಸ್ಥಿತಿಯಲ್ಲಿದ್ದ ವಯಸ್ಸಾದ ಹೆಣ್ಣು ಗಿಳಿಯೊಂದು ಸಿಕ್ಕಿತು. "ಅದಕ್ಕೆ ಕುತ್ತಿಗೆಯಿಂದ ಕೆಳಗೆ ಒಂದೇ ಒಂದು ಪುಕ್ಕವೂ ಇರಲಿಲ್ಲ" ಎನ್ನುತ್ತಾ ಆ್ಯಥನ್ ಮುಂದುವರೆದು: "ಅದರ ಕಾಲಿನ ಚರ್ಮ ಗಂಟುಗಂಟಾಗಿತ್ತು. ಅದರ ಕೊಕ್ಕು ಮತ್ತು ಕಣ್ಣುಗಳ ಸುತ್ತ ಸುಕ್ಕುಗಳಿದ್ದುವು. ಇಷ್ಟಾದರೂ ಗಂಡು ಗಿಳಿ ಮಾತ್ರ ಆ ಹೆಣ್ಣನ್ನು ತನ್ನ ಪ್ರಾಣ ಸಂಗಾತಿಯೆಂದೇ ಭಾವಿಸಿತು" ಎಂದು ಹೇಳಿದರು. ಶೀಘ್ರದಲ್ಲಿಯೇ ಆ ಎರಡು ಹಕ್ಕಿಗಳೂ ಜೊತೆಯಾಗಿ ಮರಿಗಳನ್ನು ಮಾಡಿದುವು.

ಹಲವು ಜಾತಿಯ ಪ್ರಾಣಿಗಳು, ಅದೇ ಜಾತಿಯ ಯಾವುದೇ ಮತ್ತೊಂದು ವಿಭಿನ್ನ

ಲಿಂಗಿ ಪ್ರಾಣಿಯ ಜೊತೆಯಾಗಿ, ಮರಿಯನ್ನು ಮಾಡುವುದಿಲ್ಲವೆಂಬುದು ಮೃಗಾಲಯ ವ್ಯವಸ್ಥಾಪಕರ ನಿರಾಶೆಗೆ ಕಾರಣವಾಗಿದೆ. ಕ್ಲೀವ್‌ಲ್ಯಾಂಡ್ ಮೆಟ್ರೋ ಪಾರ್ಕ್ ಮೃಗಾಲಯದ ಟಿಮ್ಮಿ ಎಂಬ ಗೊರಿಲ್ಲ ತನಗೆ ಪರಿಚಯಿಸಿದ ಎರಡು ಹೆಣ್ಣು ಗೊರಿಲ್ಲಾಗಳ ಜೊತೆಯೂ ಕೂಡಲು ನಿರಾಕರಿಸಿತು. ಆದರೆ ಟಿಮ್ಮಿ, ಕೇಟ್ ಎಂಬ ಹೆಣ್ಣು ಗೊರಿಲ್ಲಾವನ್ನು ಭೆಟಿ ಮಾಡಿದಾಗ ಎರಡೂ ಗೊರಿಲ್ಲಾಗಳೂ ಒಡನೆಯೇ ಒಂದರಲ್ಲೊಂದು ಅನುರಕ್ತಗೊಂಡವು. ಕೇಟ್‌ಗೆ ಮರಿಗಳಾಗುವ ವಯಸ್ಸು ಮೀರಿದ್ದರಿಂದ, ಮೃಗಾಲಯದ ವ್ಯವಸ್ಥಾಪಕರು ಟಿಮ್ಮಿಯನ್ನು ಬೇರೊಂದು ಮೃಗಾಲಯಕ್ಕೆ ವರ್ಗಾಯಿಸಿ, ಸಂತಾನಾಭಿವೃದ್ಧಿಗೊಂದು ಅವಕಾಶ ನೀಡಿ, ವಿಪತ್ತಿನ ಅಂಚಿನಲ್ಲಿರುವ ಗೊರಿಲ್ಲ ಸಂತತಿಯನ್ನು ಮುಂದುವರಿಯುವುದಕ್ಕೆ ಸಹಾಯ ಮಾಡಲು ತೀರ್ಮಾನಿಸಿದರು.

ಟಿಮ್ಮಿ ಮತ್ತು ಕೇಟ್ ಅನ್ನು ಬೇರ್ಪಡಿಸುವ ನಿರ್ಧಾರವನ್ನು ಪ್ರತಿಪಾದಿಸುತ್ತಾ ಮೃಗಾಲಯದ ನಿರ್ದೇಶಕರು ಹೀಗೆ ಹೇಳಿದರು: "ಜನರು, ಪ್ರಾಣಿಗಳಲ್ಲಿ ಮನುಷ್ಯರಿಗಿರುವ ಮನೋಭಾವ ಉದ್ವೇಗಗಳು ಇರುತ್ತವೆ ಎನ್ನಲು ಆರಂಭಿಸಿದಾಗ ನನಗೆ ಜುಗುಪ್ಸೆಯುಂಟಾಗುತ್ತದೆ, ಪ್ರಾಣಿಗಳನ್ನು ಕೀಳಾಗಿ ಕಂಡಂತಾಗುತ್ತದೆ. ಅವನ್ನು ನಾವು ಒಂದು ಬಗೆಯ ಘನವಾದ ಮನುಷ್ಯರೆಂದು ಯೋಚಿಸಲಾಗದು; ಅವು ಪ್ರಾಣಿಗಳು. ಜನರು ಪ್ರಾಣಿಗಳಿಗೆ ಭಾವನೆ ಉದ್ವೇಗಗಳಿವೆ ಎಂದು ಹೇಳುವುದಕ್ಕೆ ಆರಂಭಿಸಿದಾಗ, ಅವರು ವಾಸ್ತವಿಕತೆಯ ಅಂಚನ್ನು ದಾಟುತ್ತಾರೆ." ಇವರ ಈ ಉತ್ಕಟ ಹೇಳಿಕೆ, ಪ್ರಾ
ಗಳ ಜೊತೆಯಲ್ಲಿಯೇ ಕೆಲಸ ಮಾಡುತ್ತಾ
ಅವು ಪರಸ್ಪರ ಸಂತೋಷ ಹಂಚಿಕೊಳ್ಳುವ
ದನ್ನು ವೀಕ್ಷಿಸಬೇಕಾದವರು ಕೂಡ ಹೇ
ಪಕ್ಷಪಾತಿಗಳಾಗಿರುತ್ತಾರೆ ಎನ್ನುವುದನ್ನು
ತೋರಿಸುತ್ತದೆ. ಮಾನವ ಜಾತಿಗೆ ಸೇರ
ವಸ್ತುಗಳಿಗೆ ಮನುಷ್ಯನ ಸ್ವಭಾವಗಳನ್ನು
ಆರೋಪಿಸುವುದಕ್ಕಿರುವ ಅಂಜಿಕೆಯು
ಇದಕ್ಕೆ ಕಾರಣವಿರಬಹುದು.

ತಮ್ಮ ಅಧ್ಯಯನದಿಂದ ಚಿಂಪಾಂಜಿಗ
ಬದುಕಿನಲ್ಲಿಯ ಉದ್ವೇಗಗಳ ಮೇಲೆ ಬೆಳಕ
ಚೆಲ್ಲಿರುವ ಜೇನ್ ಗುಡಾಲ್, ಪ್ರಾಣಿಗಳಿ
ಭಾವಶೀಲ ಅಥವಾ ರಂಜಕ ಪ್ರೇಮ
ಗೊತ್ತಿಲ್ಲ ಎಂದು ವಾದಿಸುತ್ತಾರೆ. ಆಕೆ ಹೀ
ಬರೆಯುತ್ತಾರೆ: "ಮಾನವರ ಪ್ರೇಮ
ರಾಜಮುದ್ರೆಯಾದ ಕೋಮಲತೆ, ರಕ್ಷಣೆ
ಸಹನೆ ಹಾಗೂ ಆಧ್ಯಾತ್ಮಿಕ ಉಲ್ಲಾಸ—
ಇವನ್ನು ಒಳಗೊಂಡ ಉದ್ವೇಗಭರಿ
ಸಂಬಂಧವನ್ನು ಎರಡು ಚಿಂಪಾಂಜಿಗಳ
ಪರಸ್ಪರ ಬೆಳಸುವುದನ್ನು ನಾನು ಊಹಿ
ಲಾರೆ."

ಆದರೂ ಪ್ರಾಣಿ ಜೋಡಿಗಳು ಪರಸ್ಪ
ತೋರುವ ಶ್ರದ್ಧೆಯಲ್ಲಿ ಪ್ರೇಮದ ಕುರುಹ
ಇದೆ. ಹೆಬ್ಬಾತುಗಳು, ಹಂಸಗಳು, ಚೀನಿ
ಬಾತುಗಳು ವೈವಾಹಿಕ ನಿಷ್ಠೆಯ ಪ್ರತೀ
ಗಳಾಗಿವೆ— ಪ್ರಾಣಿಕ್ಷೇತ್ರದಲ್ಲಿ ಕೆಲ
ಮಾಡುತ್ತಿರುವ ತಜ್ಞರು ಈ ನಿರೂಪಣೆ ಸ
ಯೆಂದು ಹೇಳುತ್ತಾರೆ. ತಂತ್ರ ಮತ್ತು
ಮೋಸಗಳಿಗೇ ಪ್ರಸಿದ್ಧಿಯಾಗಿರುವ
ಅಮೆರಿಕದ ಹುಲ್ಲುಗಾವಲಿನ ತೋಳಗಳು
ಪರಸ್ಪರ ಶ್ರದ್ಧೆಯನ್ನು ತೋರಿಸುವುದಲ್ಲದೆ

ಸ್ಥಿರ ಜೋಡಿಗಳಾಗಿಯೂ ಉಳಿಯುತ್ತವೆ. ಸೆರೆಯಲ್ಲಿರುವ ಈ ತೋಳಗಳ ಬಗ್ಗೆ ಮಾಡಿದ ಅಧ್ಯಯನ ಈ ತೋಳಗಳು ಇನ್ನೂ ಲೈಂಗಿಕವಾಗಿ ಚುರುಕಾಗುವುದಕ್ಕೆ ಮುನ್ನವೇ ಜೋಡಿಗಳಾಗುವುದಕ್ಕೆ ಪ್ರಾರಂಭಿಸುತ್ತವೆ ಎಂದು ತೋರಿಸುತ್ತದೆ.

ಅಮೆರಿಕನ್ ಹುಲ್ಲುಗಾವಲಿನ ತೋಳದ ಜೋಡಿಗಳು ಜೊತೆಯಾಗಿ ಇಲಿಗಳನ್ನು ಬೇಟೆಯಾಡುವುದು; ಒಂದನ್ನೊಂದಪ್ಪಿಕೊಂಡಿರುವುದು; ಬಾಲವನ್ನಲ್ಲಾಡಿಸುತ್ತಾ, ನೆಕ್ಕುತ್ತಾ ಒಂದನ್ನೊಂದು ಬರಮಾಡಿಕೊಳ್ಳುವುದು ಮತ್ತು ಜೊತೆಯಾಗಿ ಊಳಿಡುವುದನ್ನು ಪ್ರಕೃತಿ ಶಾಸ್ತ್ರಜ್ಞ ಹೋಪ್ ಪೆಡೆನ್ ಗಮನಿಸಿದ್ದಾರೆ. ಎರಡು ತೋಳಗಳು ಜೊತೆಯಾಗಿ ಊಳಿಟ್ಟ ಬಳಿಕ ಹೆಣ್ಣು ತೋಳ ಗಂಡನ್ನು ತನ್ನ ಪಂಜದಿಂದ ಮೃದುವಾಗಿ ತಟ್ಟಿ, ಅದರ ಮುಖವನ್ನು ನೆಕ್ಕಿ, ಅನಂತರ ಒಟ್ಟಿಗೆ ನಿದ್ರಿಸಿದುವು. ಇದು ಭಾವಶೀಲ ಅಥವಾ ರಂಜಕ ಪ್ರೀತಿಯಂತೆಯೇ ಕಾಣುತ್ತದೆ. ಮನುಷ್ಯರ ನಡುವಿನ ಮತ್ತು ಪ್ರಾಣಿಗಳ ನಡುವಿನ ಪ್ರೀತಿಗಳಲ್ಲಿ ಭೇದವೇನೇ ಇದ್ದರೂ ಪ್ರೀತಿಯ ತಿರುಳು ಒಂದೇ ಎನಿಸುತ್ತದೆ.

ಬೇರೆ ಪಂಗಡದ ಪ್ರಾಣಿಯೊಂದರಿಂದ ಸಾಕಲ್ಪಟ್ಟ ಪ್ರಾಣಿ ಬೆಳೆದು ದೊಡ್ಡದಾದ ಮೇಲೆ ತನ್ನನ್ನು ಸಾಕಿದ ಆ ಪಂಗಡದ ಸದಸ್ಯರಲ್ಲಿ ಹೆಚ್ಚು ಮಮತೆಯನ್ನು ತೋರಿಸುವುದುಂಟು. ಗೆವಿನ್ ಮ್ಯಾಕ್ಸ್‌ವೆಲ್ಲನ "ರೇವೆನ್ ಸೀಕ್ ದೈ ಬ್ರದರ್" ಎಂಬ ಪುಸ್ತಕದಲ್ಲಿ ವಿವರಿಸಿರುವ ಟಬ್ಬಿ ಅನ್ನುವ ನೀರುನಾಯಿಯನ್ನು, ಸ್ಕಾಟ್‌ಲ್ಯಾಂಡ್‌ನ ಸಮುದ್ರದ ದ್ವೀಪವೊಂದರಲ್ಲಿದ್ದ, ಊರುಗೋಲಿನ ಸಹಾಯದಿಂದ ನಡೆದಾಡುತ್ತಿದ್ದ ಮನುಷ್ಯನೊಬ್ಬನು ಸಾಕುತ್ತಿದ್ದ. ಟಬ್ಬಿಯ ಆರೋಗ್ಯ ಗಂಭೀರವಾಗಿ ತಪ್ಪಿದಾಗ, ಆ ಮನುಷ್ಯ ಅದನ್ನು ಮ್ಯಾಕ್ಸ್‌ವೆಲ್ ಎಂಬವನಿಗೆ ಕೊಟ್ಟು ನೀರುನಾಯಿಯನ್ನು ಚೆನ್ನಾಗಿ ನೋಡಿಕೊಳ್ಳಲು ಹೇಳಿ, ಸ್ವಲ್ಪ ಕಾಲದ ಅನಂತರ ತೀರಿಕೊಂಡನು.

ಮ್ಯಾಕ್‌ವೆಲ್ ನಿರ್ಮಿಸಿದ್ದ ಬೇಲಿಯ ಆವರಣದಲ್ಲಿ ಇರಲು ಇಷ್ಟಪಡದ ಟಬ್ಬಿ ಬೇಲಿಯನ್ನು ಹಾರಿ ಆಗಿಂದಾಗ್ಗೆ ತಪ್ಪಿಸಿಕೊಂಡು ಹತ್ತಿರದ ಹಳ್ಳಿಯೊಂದಕ್ಕೆ ಹೋಗುತ್ತಿತ್ತು. ಅಲ್ಲಿ ಊರುಗೋಲನ್ನು ಉಪಯೋಗಿಸುತ್ತಿದ್ದ ಮನುಷ್ಯನೊಬ್ಬನನ್ನು ಕಂಡಿತು. ಅವನ ಮನೆಯ ಒಳಗೆ ಗೂಡನ್ನು ಮಾಡಲು ಪ್ರಯತ್ನಿಸಿತು, ಆದರೆ ಟಬ್ಬಿಯನ್ನು ಅವನು ಓಡಿಸಿದ.

ಸ್ವಲ್ಪ ಸಮಯದ ತರುವಾಯ ಟಬ್ಬಿ ಮತ್ತೆ ಮಾಯವಾಯಿತು. ವಿಚಿತ್ರವಾಗಿ ವರ್ತಿಸಿ, ತನ್ನನ್ನು ಮನೆಯೊಳಕ್ಕೂ ಹಿಂಬಾಲಿಸಲು ಪ್ರಯತ್ನಪಡುತ್ತಿದ್ದ ನೀರುನಾಯಿಯೊಂದರಿಂದ ಭಯಗೊಂಡವನೊಬ್ಬನಿಂದ ಮ್ಯಾಕ್ಸ್‌ವೆಲ್‌ಗೆ ಒಂದು ದಿನ ದೂರವಾಣಿ ಕರೆಯೊಂದು ಬಂದಿತು. ಮ್ಯಾಕ್ಸ್‌ವೆಲ್ ಹೀಗೆ ಬರೆಯುತ್ತಾರೆ: "ತಟ್ಟನೆ ಏನೋ

ಹೊಳೆದು : 'ನೀವೇನಾದರೂ ಊರುಗೋಲನ್ನು ಉಪಯೋಗಿಸುತ್ತೀರಾ?' ಎಂದು, ಅವರನ್ನು ಕೇಳಿದೆ. ಆಶ್ಚರ್ಯಚಕಿತರಾದ ಅವರು: 'ಹೌದು, ಆದರೆ ಅದು ನಿಮಗೆ ಹೇಗೆ ಗೊತ್ತಾಯಿತು?' ಎಂದರು." ತನ್ನನ್ನು ಮೊದಲು ಸಾಕಿದವನು ಊರುಗೋಲನ್ನು ಉಪಯೋಗಿಸುತ್ತಿದ್ದರಿಂದ, ಅದು ಟಿಬ್ಬಿಯ ಮನಸ್ಸಿನ ಮೇಲೆ ಅಚ್ಚೊತ್ತಿದಂತಾಗಿತ್ತು. ಅಥವಾ ಊರುಗೋಲನ್ನು ಉಪಯೋಗಿಸುವವರನ್ನು ನೋಡಿದರೆ ತನ್ನನ್ನು ಮಮತೆಯಿಂದ ಬೆಳೆಸಿ, ತನ್ನ ಜೀವನದಿಂದ ಮಾಯವಾದ ಆ ಮನುಷ್ಯನ ಜ್ಞಾಪಕಬರುತ್ತಿದ್ದಿರಬಹುದು.

ಪ್ರಾಣಿಗಳ ನಡುವೆ ಪ್ರೀತಿಯು ಕಲ್ಪನೆ ವಿಜ್ಞಾನದಿಂದ ತಿರಸ್ಕರಿಸಲ್ಪಟ್ಟಿದ್ದರೂ ವನ್ಯಪ್ರಪಂಚದ ದಿವ್ಯ ಮೃಗಗಳು ಹರ್ಷ ಪ್ರೀತಿ ಮತ್ತು ದುಃಖಗಳನ್ನು ಅನುಭವಿಸುತ್ತವೆ ಎನ್ನುವುದಕ್ಕೆ ಸಾಕಷ್ಟು ವೃತ್ತಾಂತಿಕ ಪುರಾವೆಗಳಿವೆ.



ಲೋಕದ ಡೊಂಕ ನೀವೇಕೆ ತಿದ್ದುವಿರಿ ? ನಿಮ್ಮ ತನುವ
ಸಂತೈಸಿಕೊಳ್ಳಿ ; ನಿಮ್ಮ ಮನವ ಸಂತೈಸಿಕೊಳ್ಳಿ.

ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ
ಹಾಲನೆರೆದು, ಜೇನುತುಪ್ಪವ ಹೊಯ್ದರೆ, ಸಿಹಿಯಾಗಬಲ್ಲದೆ ?
ಕಹಿಯಹುದಲ್ಲದೆ ?

—ಬಸವಣ್ಣ

ಯೋಗ್ಯ ಉಸಿರಾಟ-ಆರೋಗ್ಯ ಭಾಗ್ಯ

ಸರಸ್ವತಿ ಬಡೆಕ್ಕಿಲ
ನಂ. ೧೫೪೭, "ಅಮರ್ ಕುಂಜ್"
ಶಿವರಾಮ ಮಾರ್ಗ, ಸಿ ಮತ್ತು ಡಿ ಬ್ಲಾಕ್
ಕುವೆಂಪುನಗರ, ಮೈಸೂರು-೨೩

ನಾನು ಚಿಕ್ಕವನಿದ್ದ ಕಾಲದಲ್ಲಿ ಜನರೆಲ್ಲ ಬಹಳ ಚೆನ್ನಾಗಿ ಉಸಿರಾಡುತ್ತಿದ್ದರು ಏಕೆಂದರೆ ಆಗ ನಾವೆಲ್ಲ ಮೈಮುರಿದು ದುಡಿಯುತ್ತಿದ್ದೆವು. ಗಂಡಸರು ಮರವನ್ನು ಕೊಡಲಿಯಿಂದ ಕಡಿಯುತ್ತಿದ್ದರು. ಗರಗಸದಿಂದ ಕೊಯ್ದು ಸಿಗಿಯುತ್ತಿದ್ದರು. ಕೈಗತ್ತಿಯಿಂದಲೇ ಬೆಳೆ ಕಟಾವು ಮಾಡುತ್ತಿದ್ದರು. ಹುಲ್ಲು ಬಡಿದು ಧಾನ್ಯ ಪ್ರತ್ಯೇಕಿಸುತ್ತಿದ್ದರು. ಹೆಂಗಸರೂ ಅಷ್ಟೆ. ಬಟ್ಟೆ ಒಗೆಯುತ್ತಿದ್ದರು. ಇಂದು ನಾವು ನೀವೆಲ್ಲ ವ್ಯಾಯಾಮವನ್ನು ಬೇಕೆಂದೇ, ಪ್ರಯತ್ನಪೂರ್ವಕ ಮಾಡಬೇಕಷ್ಟೆ. ಅಂದು ಹಾಗಲ್ಲ. ಅದು ತಾನಾಗಿಯೇ ಸಿಗುತ್ತಿತ್ತು. ಇಂದು ನಾವೆಲ್ಲ ಮಾಡುವುದೇನೆಂದರೆ 'ಕುಳಿತಿರುವುದು'. ಆದ್ದರಿಂದಲೇ, ನಾವೀಗ ಉಸಿರಾಟದ ಕಲೆಯನ್ನು ಕಲಿಯಬೇಕಾಗಿದೆ, ಮಾತ್ರವಲ್ಲ ಅದರಲ್ಲಿ ಪರಿಣತರಾಗಬೇಕಿದೆ, ಮತ್ತು ನಮ್ಮ ನಿತ್ಯ ಜೀವನದ ಅಭ್ಯಾಸಗಳಲ್ಲಿ ಅಳವಡಿಸಿಕೊಳ್ಳಬೇಕಾಗಿದೆ..." ಹೀಗೆಂದವರು, ಎಪ್ಪತ್ತನಾಲ್ಕರ ವಯೋವೃದ್ಧ 'ವಿಲಿಯಂನೋಲ್ಸ್'

'ಬಕ್ಕಿಂಗ್ ಹ್ಯಾವರ್ ಶಾಯರ್'ನ 'ಚಾಲ್ಫಂಟ್ ಸೆಯಿಂಟ್ ಗಿಲ್ಸ್' ಎಂಬಲ್ಲಿ 'ಬ್ರೀದರ್ ನೋಲ್ಸ್' ಅರ್ಥಾತ್ 'ಉಸಿರಾಟದ ನೋಲ್ಸ್' ಎಂದೇ ಪ್ರಸಿದ್ಧರಾಗಿರುವ ಇವರು ಜನರಿಗೆ ತಮ್ಮ ಶ್ವಾಸಕೋಶಗಳನ್ನು ಸರಿಯಾಗಿ ಬಳಸಿಕೊಳ್ಳುವುದು ಹೇಗೆ? ಎಂದು ಕಲಿಸುತ್ತಾರೆ. ಅವರಿಂದ ಉಪಕೃತರಾದ ಹಲವು ಜನರ ಆಶ್ಚರ್ಯಕರವಾದ ಅನುಭವಗಳ ವರದಿಗಳಿಂದ ಪ್ರಭಾವಿತನಾಗಿ, ನೋಲ್ಸರನ್ನು ನೋಡಬೇಕೆಂದು ನಾನು ಕೂಡ ಹೋದೆ. ಅಲ್ಲಿ ಅವರ ಬಗ್ಗೆ ಒಬ್ಬ ಡಾಕ್ಟರರು ಬರೆದಿದ್ದ ಪ್ರಶಂಸಾಪತ್ರವನ್ನು ಓದಿದೆ– ನೋಲ್ಸರಿಗೆ ಅವರು ಹೀಗೆ ಬರೆದಿದ್ದರು– "ಧನ್ಯವಾದ! ನಿಮ್ಮಿಂದ ಕಲಿತ ಉಸಿರಾಟದ ಅಭ್ಯಾಸಕ್ಕೆ ಧನ್ಯವಾದ. ಏಳು ವರ್ಷಗಳಲ್ಲಿ ಮೊದಲ ಬಾರಿಗೆ ಬ್ರಾಂಕಾಯಿಟಿಸ್ (ಶ್ವಾಸ ನಾಳಗಳಲ್ಲಿ ಕಫ ತುಂಬಿ ಜ್ವರ, ಕೆಮ್ಮು ಬರುವುದು, ಮುಂದೆ ಹದ್ದು ಮೀರಿದರೆ ಬ್ರಾಂಕಾಯಿಲ್ ಆಸ್ತಮಾದವರೆಗೂ ತಲುಪಬಹುದು) ಇಲ್ಲದ ಸುಖಕರವಾದ ಚಳಿಗಾಲ ಕಳೆದಿದ್ದೇನೆ!" ಇದೇ ರೀತಿಯಲ್ಲಿ ಹಲವಾರು ಜನ ಪತ್ರ ಬರೆದು ನೋಲ್ಸರಿಗೆ ಕೃತಜ್ಞತೆ ಸಲ್ಲಿಸಿದ್ದರು. ಅವರ ಕೋಣೆಯ ತುಂಬ ಇಂಥ ಪತ್ರಗಳು ರಾಶಿರಾಶಿಯಾಗಿ ತುಂಬಿದ್ದುವು. ಇವೆಲ್ಲ ಅವರ ಶಿಕ್ಷಣ ಕ್ರಮದ

ಮೂಲ: ರೀಡರ್ಸ್ ಡೈಜೆಸ್ಟ್ ಸಂಚಿಕೆಯಲ್ಲಿನ 'ಜಾನ್ ಫ್ರೇಯರ್' 'ಬ್ರಿತ್ ಲೈಟ್ ಅಂಡ್ ಸ್ಲೀವೆಲ್' ಲೇಖನ.

ಉಪಯುಕ್ತತೆಗೆ ಒರೆಗಲ್ಲೆಂದು ಬೇರೆ ಹೇಳಬೇಕೆ?

"ಉಸಿರಾಟದ ತೊಂದರೆ ಇರುವವರಿಗೆ, ಶ್ವಾಸಾಂಗ ದುರ್ಬಲಗೊಂಡವರಿಗೆ, ನಿಮ್ಮಿಂದ ಮಹದುಪಕಾರವಾಗಿದೆ. ನೀವು ಪ್ರಶಂಸೆಗೆ ಪಾತ್ರರು. ಆದರೆ ಅಂಥ ಯಾವ ತೊಂದರೆಯೂ ಇಲ್ಲದ ನನ್ನಂಥವರಿಗೆ ನಿಮ್ಮ ಸಲಹೆ ಏನು? ನಾನು ಸರಿಯಾಗಿಯೇ ಸ್ವಾಭಾವಿಕವಾಗಿಯೇ ಉಸಿರಾಡುತ್ತಿದ್ದೇನೆ; ಅಥವಾ ಹಾಗೆಂದು ತಿಳಿದುಕೊಂಡಿದ್ದೇನೆ?"

ನನ್ನ ಪ್ರಶ್ನೆಗೆ ಮೆಚ್ಚುಗೆಯ ನೋಟ ಹರಿಸುತ್ತ ಅವರೆಂದರು—"ನೀವು ಹೆಚ್ಚೆಂದರೆ ನಿಮ್ಮ ಶ್ವಾಸಾಂಗದ ಆರನೇ ಒಂದು ಭಾಗವನ್ನು ಮಾತ್ರ ಉಪಯೋಗಿಸಿಕೊಳ್ಳುತ್ತೀರಿ. ಈ ರೀತಿ ಉಸಿರಾಡುವವರು ನೀವೊಬ್ಬರೇ ಅಲ್ಲ! ನಮ್ಮಲ್ಲಿ ಹೆಚ್ಚು ಜನ ನಿಮಿಷಕ್ಕೆ ಹದಿನಾಲ್ಕರಿಂದ ಹದಿನೆಂಟು ಸಲ, ಆಳವಲ್ಲದ, ಹಗುರ ಶ್ವಾಸೋಛ್ವಾಸ ನಡೆಸುತ್ತಿರುತ್ತಾರೆ."

ನೋಲ್ಸರು ಉಸಿರಾಟದ ಬಗ್ಗೆ ಸೂಕ್ಷ್ಮ ಅವಲೋಕನೆ, ಮತ್ತು ಸತತ ಶೋಧನೆ ಮಾಡಿರುವುದರಿಂದಲೇ, ಇಷ್ಟು ನಿಖರವಾಗಿ ಹೇಳಬಲ್ಲರು. ನೋಲ್ಸರು ಮಾತ್ರ ಒಂದು ನಿಮಿಷ ಕಾಲಾವಧಿಯಲ್ಲಿ ಉಸಿರಾಡುವುದು ಕೇವಲ ನಾಲ್ಕು ಬಾರಿ! ಅವರ ಸಲಹೆಯನ್ನನುಸರಿಸಿದರೆ ಬಲು ಬೇಗನೆ ನಾವು ನೀವೆಲ್ಲ, ನಿಮಿಷವೊಂದಕ್ಕೆ ಎಂಟು ಬಾರಿ ಮಾತ್ರ ಉಸಿರಾಡುವಂತೆ ಆಗಬಹುದು.

ಆ ದಿನ ನೋಲ್ಸರು ನನ್ನೊಡನೆ ಹೇಳಿದರು—"ಬಾಯಿಯನ್ನು ತೆರೆದು ಗಾಳಿಯನ್ನೆಲ್ಲಾ ಹೊರದೂಡಿರಿ. ಹಾಗೇ ಮಾಡಿದೆ. ನನ್ನ ಶ್ವಾಸಕೋಶಿಕೆಗಳೆಲ್ಲ ಖಾಲಿಯಾದಂತೆನಿಸುತ್ತಿದ್ದಾಗಲೇ, ನೋಲ್ಸ್—ನಿಮ್ಮ ತುಟಿಗಳನ್ನು ಕೊಳವೆಯಾಕಾರ ಮಾಡಿ, ಬಲಪೂರ್ವಕ ಊದಿ ನೋಡೋಣ!" ಎಂದರು. ಹಾಗೇ ಊದಿದೆ. ಆಶ್ಚರ್ಯ! ನನ್ನ ಎದೆಯೊಳಗೆ ಇನ್ನೂ ತುಂಬಾ ಗಾಳಿಯಿತ್ತು! ನೋಲ್ಸರ ಅಭಿಪ್ರಾಯಗಳು ಅಕ್ಷರಶಃ ನಿಜವೆಂದು ಪ್ರಮಾಣಪಡಿಸಿ ತೋರಿಸಿದಂತಾಗಿತ್ತು! ವಿಲಿಯಂ ನೋಲ್ಸ್ ಹೇಳಿದರು. "ಅದೇ ನಿಮ್ಮೊಳಗೆ ಪ್ರತಿ ಉಸಿರಾಟದಲ್ಲೂ ಉಳಿದುಕೊಳ್ಳುವ ಕಳ್ಳ! ಅಶುದ್ಧ ವಾಯು! ಇದು ಶ್ವಾಸಕೋಶದ ಗಾಳಿ ಚೀಲಗಳೊಳಗೆ ಸಂಗ್ರಹವಾಗುತ್ತಾ ಹೋಗಿ, ಶ್ವಾಸಕೋಶದ ಗಾಳಿ ಚೀಲಗಳ ಭಿತ್ತಿಯಲ್ಲಿರುವ—ಆಮ್ಲ ಜನಕವನ್ನು ಹೀರಿ ರಕ್ತವನ್ನು ಶುದ್ಧಗೊಳಿಸಿ ಅಂಗಾರಾಮ್ಲವನ್ನು ಹೊರಚೆಲ್ಲುವಂಥ ಈ ವಿನಿಮಯ ಕೇಂದ್ರಗಳಿಗೆ ಸಾಕಷ್ಟು ಆಮ್ಲಜನಕ ಪೂರೈಕೆ ಆಗದಂತೆ ವಂಚಿಸುತ್ತದೆ. ಪರಿಣಾಮವಾಗಿ ರಕ್ತ ಶುದ್ಧಿಗೊಳ್ಳುವ ಪ್ರಕ್ರಿಯೆ ಕ್ಷೀಣಗೊಳ್ಳುತ್ತದೆ.

"ಒಬ್ಬ ಸಾಮಾನ್ಯ ವ್ಯಕ್ತಿಯ ಶ್ವಾಸಾಂಗ ಒಂದು ಉಛ್ವಾಸದಲ್ಲಿ ೬ ಪಿಂಟ್ (ಎಂದರೆ ೧.೨ ಘನ ಅಡಿ ಅಥವಾ ೩.೪೦೫೬ ಲೀಟರ್ ಅಳತೆಯಷ್ಟು) ಗಾಳಿಯನ್ನು ಒಳಕ್ಕೆ ಎಳೆದುಕೊಳ್ಳುವ ಸಾಮರ್ಥ್ಯ ಹೊಂದಿರುತ್ತದೆ. ಆದರೆ ಕಛೇರಿಯಲ್ಲಿ ಕುಳಿತು ಕೆಲಸ ಮಾಡುವ ವ್ಯಕ್ತಿಯ ಉಛ್ವಾಸದ ಪ್ರಮಾಣ ಕೇವಲ ಒಂದು ಪಿಂಟ್ ಮಾತ್ರ! (ಎಂದರೆ ೨ ಘನ ಅಡಿ) ಇದರ ಅರ್ಥ ಏನಾಯಿತು? ನಿಮ್ಮ ಶ್ವಾಸಕೋಶಗಳ ಆರನೇ ಐದಂಶ ಕೆಲಸ

ಮಾಡದೆ ಸೋಮಾರಿಯಂತೆ ಇದ್ದು ಬಿಡುತ್ತದೆ–ಎಂದಲ್ಲವೇ?"

ವಿಲಿಯಂ ನೋಲ್ಸರು ಸಂಪೂರ್ಣ ಶ್ವಾಸಾಂಗ ಉಪಯೋಗಕ್ಕೆ ಬರುವಂತೆ ಮಾಡುವುದರಿಂದ ಶರೀರದ ಮೇಲಾಗುವ ಉತ್ತಮ ಪರಿಣಾಮಗಳ ದೊಡ್ಡ ಪಟ್ಟಿಯನ್ನೇ ನನ್ನ ಮುಂದಿಟ್ಟರು–ನಿಮ್ಮ ದುಡಿಯುವ ಶಕ್ತಿ, ಸಾಮರ್ಥ್ಯ ಹೆಚ್ಚುವುದು; ಕೆಲಸದಿಂದ ಉಂಟಾಗುವ ದಣಿವು ಇಲ್ಲವೆ ನಿಶ್ಶಕ್ತಿಯ ಪ್ರಮಾಣ ಇಳಿಮುಖವಾಗುವುದು, ನಿದ್ದೆ ಚೆನ್ನಾಗಿ ಬರುವುದು; ಬೆಳಗ್ಗೆ ಉಲ್ಲಾಸದಿಂದ ಎದ್ದೇಳುವಿರಿ. ಮತ್ತೆ ಉತ್ಸಾಹದಿಂದ ದುಡಿಯತೊಡಗುವಿರಿ, ಮತ್ತು ಒಮ್ಮೆ ನೀವು ಸಮರ್ಪಕವಾಗಿ ಉಸಿರಾಡುವ ಅಭ್ಯಾಸ ಮಾಡಿಕೊಂಡರೆ, ನೀವು ಧೂಮಪಾನಿಗಳಾಗಿದ್ದರೂ ಒಂದೋ ಅದನ್ನು ಸಂಪೂರ್ಣ ತ್ಯಜಿಸುವಿರಿ, ಅಥವಾ ಧೂಮಪಾನದ ಪ್ರಮಾಣವನ್ನು ಕಡಿಮೆ ಮಾಡುವುದಂತೂ ಶತಃ ಸಿದ್ಧ.

ನೋಲ್ಸರ ಶಿಕ್ಷಣ ಕ್ರಮದಲ್ಲಿ ಮೊದಲ ಪಾಠವೆಂದರೆ, ನಿಮ್ಮ ಹೆಗಲಿನ ಮೂಳೆಗಳನ್ನು, ಒಂದು ಇನ್ನೊಂದರ ಸಮೀಪಕ್ಕೆ ಬರುವಂತೆ ಸೆಳೆದುಕೊಳ್ಳಿ, ಎಷ್ಟರಮಟ್ಟಿಗೆ ಸಾಧ್ಯವೆಂದು ನೋಡಿಕೊಳ್ಳುವುದು, ವಿನಃ ನಿಮ್ಮ ಭುಜಗಳನ್ನು ಎಷ್ಟು ದೂರಕ್ಕೆ ಹೊರ ಚಾಚಬಲ್ಲಿರಿ, ಅಥವಾ ನಿಮ್ಮ ಎದೆಯನ್ನು ಎಷ್ಟು ಅಗಲಕ್ಕೆ ವಿಸ್ತರಿಸಬಲ್ಲಿರಿ–ಎಂದು ನೋಡಬೇಕಾದ್ದಲ್ಲ.

ನಮ್ಮ ಶರೀರ ರಚನೆಯ ಕ್ರಮದಿಂದಾಗಿ ಶ್ವಾಸಕೋಶಗಳ ಭಾರವು ಡಯಫ್ರಮ್ ಅರ್ಥಾತ್ 'ವಫೆ'ಯ ಮೇಲೆ ಒತ್ತುತ್ತಿರುವುದು ಸ್ವಾಭಾವಿಕ. ಆದರೆ ಈ ಒತ್ತುವಿಕೆ ಹೆಚ್ಚಾದಷ್ಟೂ ಶ್ವಾಸೋಚ್ಛ್ವಾಸದ ಗತಿಗೆ ಸಮನಾಗಿ, ವಫೆಯು ಮೇಲೇಳುವ ಕೆಳಸರಿಯುವ, ಕಾರ್ಯವು ಉತ್ಸಾಹ ಹೀನವಾದ ಶ್ರಮದಾಯಕವಾದ ಕ್ರಿಯೆಯಾಗಿ ಪರಿಣಮಿಸುವುದು. ಹೆಗಲಿನ ಮೂಳೆಗಳನ್ನು ಪರಸ್ಪರ ಹತ್ತಿರಕ್ಕೆ ಎಳೆದುಕೊಂಡೊಡನೆ, ಶ್ವಾಸಾಂಗದೊಳಗಿನ ಮುದುರಿ ಹೋಗಿರುವಂಥ ಟೊಳ್ಳು ಗೂಡುಗಳು ತಕ್ಷಣ ತೆರೆದುಕೊಳ್ಳುತ್ತವೆ. ಮತ್ತು ಹೊರಗಿನ ಹೊಸ ಗಾಳಿ ತನ್ನಿಂತಾನೇ ಒಳನುಗ್ಗುತ್ತದೆ.

ಇನ್ನು ನಿಮ್ಮ ನಿಶ್ವಾಸ ಎಷ್ಟು ದೀರ್ಘವಿದೆ ಎಂದು ಪತ್ತೆಹಚ್ಚಲು ನೋಲ್ಸರು ಹೇಳುವ ಒಂದು ಉಪಾಯ ಇದು– ನೀವು ಸಾಧ್ಯವಾದಷ್ಟು ಹೆಚ್ಚು ಗಾಳಿಯನ್ನು ಒಳಕ್ಕೆ ಸೇದಿಕೊಳ್ಳಿರಿ. ಮತ್ತು ಈ ಲೇಖನದ ಒಂದು ಅಂಕಣವನ್ನು ಗಟ್ಟಿಯಾಗಿ ಓದುತ್ತಾ ಹೋಗಿರಿ. ಈಪೊತ್ತು ಒಂದು ಉಸಿರಿನಲ್ಲಿ ನೀವು ಎಷ್ಟು ಓದಿದಿರಿ ಎಂಬುದನ್ನು ಗುರುತು ಮಾಡಿಟ್ಟುಕೊಳ್ಳಿ, ನಾಳೆ ಮತ್ತೊಮ್ಮೆ ಅದೇ ರೀತಿ ಒಂದೇ ಉಸಿರಿನಲ್ಲಿ ಎಷ್ಟು ಓದಲು ಸಮರ್ಥರಾದಿರಿ ಎಂದು ನೋಡಿ. ಮತ್ತೆ ಪ್ರತಿದಿನ ಹಾಗೆಯೇ ಮುಂದುವರಿಸುತ್ತಾ ಒಂದು ಉಸಿರಲ್ಲಿ ನೀವು ಓದುವ ಸಾಲುಗಳ ಸಂಖ್ಯೆಯನ್ನು ದಿನೇ ದಿನೇ ನಿಧಾನವಾಗಿ ಹೆಚ್ಚಿಸಲು ಪ್ರಯತ್ನಿಸಿ.

ನಿಮ್ಮ ನಿಶ್ವಾಸ ಬಲಪರೀಕ್ಷೆಯನ್ನು ಹೀಗೆ ಮಾಡಬಹುದು. ಮೊದಲು ಚೆನ್ನಾಗಿ ಎದೆ ತುಂಬ ಶ್ವಾಸ ತೆಗೆದುಕೊಳ್ಳಿ. ಮತ್ತೆ ಬಾಯನ್ನು ಅಗಲವಾಗಿ ತೆರೆದು (ಈ ಬಾರಿ ಸಿಳ್ಳು ಹಾಕುವ ಭಂಗಿಯಲ್ಲಿ ಬೇಡ)

ಉರಿಯುತ್ತಿರುವ ಬೆಂಕಿಕಡ್ಡಿಯನ್ನು ಊದಿ ನಂದಿಸಿರಿ (ಬೆಂಕಿ ಕಡ್ಡಿ ಮೇಣ ಹಚ್ಚಿದ ಕಾಗದದದ್ದಾಗಿರಬೇಕು. ಉರಿಸಿದ ಕಡ್ಡಿಯನ್ನು ಬಾಯಿಂದ ಮೂರು ಇಂಚು ದೂರದಲ್ಲಿ ಹಿಡಿದುಕೊಂಡು ಗಾಳಿ ಊದುವುದು) ಬೆಂಕಿಕಡ್ಡಿಯನ್ನು ಊದಿ ನಂದಿಸಲು ನೀವು ಅಸಮರ್ಥರಾದರೆ, ಆಗ ಖಂಡಿತವಾಗಿಯೂ ನಿಮಗೆ ವೈದ್ಯರ ಸಹಾಯ ಅಗತ್ಯವೆಂದು ನಿರ್ಣಯವಾದ ಹಾಗಾಯಿತು!

ನೋಲ್ಸರು ಮತ್ತೆ ಮತ್ತೆ ಒತ್ತಿ ಹೇಳುವುದೇನೆಂದರೆ—"ದೀರ್ಘ ನಿಶ್ವಾಸದಿಂದ ಶ್ವಾಸಕೋಶದ ಚೀಲಗಳಲ್ಲಿ ಅಡಗಿರುವ ಅಶುದ್ಧ ಗಾಳಿ ಹೊರಬೀಳುವುದಷ್ಟೇ ಪ್ರಯೋಜನವಲ್ಲ. ಆಳವಾಗಿ ಎದೆ ತುಂಬಾ ಗಾಳಿ ಎಳೆದುಕೊಳ್ಳುವ ಕ್ರಿಯೆಯು ತನ್ನಿಂತಾನೇ ನಡೆಯದೇ ಹೋದರೂ, ಪ್ರಯತ್ನಪಟ್ಟಾಗ ಗಾಳಿ ಒಳ ಸೇರಲು ಸ್ಥಳಾವಕಾಶ ಸೃಷ್ಟಿಯಾಗುತ್ತದೆ. ನೋಲ್ಸರ ಶ್ವಾಸೋಛ್ವಾಸ ಕ್ರಮದಲ್ಲಿ ೧ ರಿಂದ ೪ ಎಣಿಸುವಷ್ಟು ಕಾಲಾವಧಿಯಲ್ಲಿ ಉಛ್ವಾಸವನ್ನು ಮುಗಿಸಿ, ನಿಶ್ವಾಸವನ್ನು ೧ ರಿಂದ ಪ್ರಾರಂಭಿಸಿ ೧೨ ರವರೆಗೆ ಎಣಿಕೆ ಮಾಡುವಷ್ಟು ಕಾಲದಲ್ಲಿ ಮುಗಿಸಬೇಕು. ಕ್ರಮೇಣ ಕಾಲಾವಧಿಯನ್ನು ನಿಧಾನವಾಗಿ ದಿನದಿಂದ ದಿನಕ್ಕೆ ಹೆಚ್ಚಿಸುತ್ತಾ ಬಂದು, ಉಛ್ವಾಸವನ್ನು ಏಳು ಎಣಿಸುವಷ್ಟು ದೀರ್ಘಗೊಳಿಸಿ, ನಿಶ್ವಾಸವನ್ನು ಅತಿ ದೀರ್ಘವೆಂದರೆ ಇಪ್ಪತ್ತೊಂದು ಎಣಿಸುವಷ್ಟು ಪ್ರಯತ್ನಿಸಬಹುದು. ಈ ರೀತಿ ಒಂದು ಅಭ್ಯಾಸದಲ್ಲಿ ಮೂರು ಬಾರಿ ಉಛ್ವಾಸ, ನಿಶ್ವಾಸ ಕ್ರಿಯೆ ನಡೆಸಿದರೆ ಸಾಕು.

* * *

ಮುಂದಿನ ದಿನಗಳಲ್ಲಿ ನಾನು ನೋಲ್ಸ್‌ರ ತಂತ್ರವನ್ನನುಸರಿಸುತ್ತಾ ಲಂಡನ್ನಿನ ಬೀದಿಗಳಲ್ಲಿ ಸುತ್ತಾಡತೊಡಗಿದ್ದೆ. ಅವರಿಂದ ಬಹಳ ಪ್ರಯೋಜನವಾಯಿತು. ಭಾರವಾದ ವಸ್ತುವನ್ನು ಎತ್ತಬೇಕಾದರೆ, ಮೊದಲು ದೀರ್ಘಶ್ವಾಸ ಎಳೆದು ಎದೆ ತುಂಬಿ ಹಾಗೇ ಹಿಡಿದಿಟ್ಟಿರಬೇಕು. ಈಗ ನೋಡಿ, ಆ ವಸ್ತು ಎಷ್ಟು ಹಗುರವೆನಿಸುವುದು! ನೀವು ಮಾಳಿಗೆಯ ಮೆಟ್ಟಿಲು ಹತ್ತುತ್ತಿದ್ದೀರೆಂದಿಟ್ಟುಕೊಳ್ಳಿ. ಎರಡು ಮೆಟ್ಟಿಲು ಏರಿದೊಡನೆ ಒಮ್ಮೆ ಉಸಿರೆಳೆದುಕೊಳ್ಳಿ. ಆ ಮೇಲೆ ಮುಂದಿನ ಎರಡು ಮೆಟ್ಟಿಲೇರುತ್ತಿರುವಾಗ ಶ್ವಾಸ ಹೊರಗೆ ಬಿಡಿ. ಹೀಗೆ ಮಾಡುತ್ತಾ ಹೋದರೆ, ಮೆಟ್ಟಿಲುಗಳ ಕೊನೆ ತಲುಪಿದಾಗ ನೀವು ಏದುಸಿರಿಗೆ ಒಳಗಾಗುವ ಸಂಭವ ಕಡಿಮೆಯಾಗಿಬಿಡುವುದು. ಇಷ್ಟು ಮಾಡಿಯೂ ನಿಮಗೆ ಏದುಸಿರಿನ ಅನುಭವವಾದರೆ—ನಾಯಿ ನಾಲಿಗೆ ಹೊರಚಾಚಿ 'ಸೇಂಕು' (ತೇಕು)ವುದನ್ನು ನೋಡಿಲ್ಲವೇ? —ಹಾಗೆ ನೀವೂ ನಾಲಿಗೆ ಹೊರಚಾಚಿ ಶ್ವಾಸ ತೆಗೆದುಕೊಳ್ಳಿ ಮತ್ತು ಹೊರಬಿಡಿ —ಕೆಲನಿಮಿಷ. ಆಗ ತನ್ನಂತಾನೇ 'ಗಾಳಿ ಸಾಲದು' ಎನಿಸುವ ಕಷ್ಟ ಮರೆಯಾಗುವುದು. ನಿಮಗೆ ಚಳಿಯಾಗುತ್ತಿದೆಯೆನ್ನಿ ಆಗಲೂ ಈ ರೀತಿ ಸೇಂಕಿರಿ. ಮತ್ತೆ ನೋಡಿ, —ಹೇಗೆ ಕ್ಷಣಮಾತ್ರದಲ್ಲಿ ನಿಮ್ಮ ಮೈ ಬೆಚ್ಚಗಾಗುವುದೆಂದು.

ಇಂಥ ಸ್ವಾನುಭವದ ನಿದರ್ಶನಗಳು ಯೋಗ್ಯವಾದ ಉಸಿರಾಟದಲ್ಲಿ ಅಡಗಿರುವ ಶಕ್ತಿಮೂಲದ ಕೆಲವಂಶವನ್ನು ತೋರ್ಪಡಿಸುತ್ತವೆ. ಗರಡಿ ಸಾಧನೆ ಮಾಡುವವರಿಗೆ, ಜಟ್ಟಿ, ಪೈಲ್ವಾನ್‌ಗಳಿಗೆ ಶ್ವಾಸಾಂಗದಲ್ಲಿ ಅಡಗಿ ಉಳಿಯುವ ಗಾಳಿಯ ಬಗ್ಗೆ ಚೆನ್ನಾಗಿ ಗೊತ್ತಿರುತ್ತದೆ. ಕಠಿಣ ಅಂಗಸಾಧನೆ ಮಾಡುತ್ತಿರುವಾಗ ಈ ಗಾಳಿಯು ಹೊರ ಬರುವುದನ್ನು ಅವರು ಅನುಭವಿಸಿ ತಿಳಿದಿರುವರು. ಮೇಲು ಮೇಲಿನ ಉಸಿರಾಟದಿಂದ ಆಳವಾದ ಉಸಿರಾಟಕ್ಕೆ ಬದಲಾಗುವುದು, ಅರ್ಥಾತ್ ಅರ್ಧಂಬರ್ಧ ಉಸಿರಾಟದಿಂದ ಪೂರ್ಣ ಉಸಿರಾಟಕ್ಕೆ ಬಡತಿ ಹೊಂದುವುದು, ಇದೇ ಅಂಗಸಾಧನೆಯ ಉದ್ದೇಶ ಮತ್ತು ಶಕ್ತಿ ಸಂಚಯನವೂ ಇದರ ಪರಿಣಾಮ. ಅಥವಾ ಅದನ್ನು ಈ ರೀತಿಯೂ ವಿವರಿಸಬಹುದು-ಶಾರೀರಕ ವ್ಯಾಯಾಮದ ಪ್ರಯೋಜನವಿರುವುದೇ ಇಲ್ಲಿ. ಅಲ್ಪ ಉಸಿರಾಟದಿಂದ ತುಂಬು ಉಸಿರಾಟಕ್ಕೆ ಬದಲಾಯಿಸಿಕೊಳ್ಳುವುದು. ಕ್ರಮಬದ್ಧ, ಲಯಬದ್ಧ ಮತ್ತು ಆಳವಾದ ಉಸಿರಾಟದ ಉದ್ದೇಶವಿಷ್ಟೆ. ಸದಾಕಾಲ ಈ ಶಕ್ತಿ ಸಿಗುವಂತೆ ಮಾಡಿಕೊಳ್ಳುವುದು ಇದರ ಒಟ್ಟು ತಾತ್ಪರ್ಯ ವ್ಯಾಯಾಮದಿಂದ ಪರಿಪೂರ್ಣ ಉಸಿರಾಟ. ಉಸಿರಾಟದಿಂದ ಶಕ್ತಿಸಂಪನ್ನತೆ, ದೇಹದಾರ್ಢ್ಯ.

ನೋಲ್ಸರ ಈ ಉಸಿರಾಟದ ಸಿದ್ಧಾಂತ ಮತ್ತು ಶಿಕ್ಷಣ-ಪದ್ಧತಿಗೆ ಮೂಲಾಧಾರ ಅವರ ಸ್ವಂತ ಅನುಭವವೇ. ಅವರು ತಮ್ಮ ತಾರುಣ್ಯದಲ್ಲಿ, ಹಡಗಿನಲ್ಲಿ ನೌಕರಿ ಮಾಡುತ್ತ ಹಡಗು ಕಟ್ಟೆಗಳಲ್ಲಿ ವಾಸವಾಗಿದ್ದರು. ತೇವಾಂಶ ಅಧಿಕವಾಗಿರುವ ಸಮುದ್ರ ತೀರದ ಹವೆಯಿಂದ ಅವರ ಆರೋಗ್ಯ ಕೆಟ್ಟಿತು. ಯಾವುದಕ್ಕೂ ಜಗ್ಗದಂಥ ಕೆಮ್ಮು ಅಂಟಿಕೊಂಡಿತು. ಅವರ ಹುಟ್ಟೂರು ಮೆಂಚೆಸ್ಟರ್. ಅಲ್ಲಿನ ವೈದ್ಯರು ಅವರನ್ನು ಪರೀಕ್ಷಿಸಿ ಇದಕ್ಕೆ ಒಣಹವೆಯಲ್ಲಿರಬೇಕಾದರೆ ಮೆಂಚೆಸ್ಟರಿಂದ ದಕ್ಷಿಣ ಪ್ರದೇಶಕ್ಕೆ ವಲಸೆ ಹೋಗಬೇಕಿತ್ತು. ಅದು ಮಾತ್ರ ನೋಲ್ಸರಿಂದ ಸಾಧ್ಯವಾಗುವ ಸಂಗತಿಯಾಗಿರಲಿಲ್ಲ. ಹೀಗಾಗಿ ಮೆಂಚೆಸ್ಟರಿಗಿಂತ ತುಸು ಉತ್ತಮ ಹವೆಯಿರುವ 'ಮೊಂಟ್ರೀಲ್'ಗೆ, ತಮ್ಮ ಸೋದರ ಅತ್ತೆಯ ಮನೆಗೆ ಹೋಗಿ ಅಲ್ಲಿರತೊಡಗಿದರು. ಕಾಯಿಲೆಯ ವಿಷಯ ತಿಳಿದ ಅತ್ತೆ ವಿಚಿತ್ರ ಹೆಸರಿನ ಡಾಕ್ಟರರೊಬ್ಬರ ಪರಿಚಯ ಮಾಡಿಸಿದಳು. ಡಾಕ್ಟರರ ಹೆಸರು ಟಿ.ಜೆಡ್. ಹಾ-ನಿಸ್ ಎಂದು. ರೋಗದ ಪೂರ್ಣ ವಿವರ ತಿಳಿದ ಮೇಲೆ ಹಾ-ನಿಸ್. ಹೇಳಿದರು-ಹುಡುಗನ ಉಸಿರಾಟದ ಕ್ರಮ ಸರಿಯಿರಲಾರದು" ನೋಲ್ಸ್ ಇದನ್ನು ಒಪ್ಪಿಕೊಳ್ಳದೆ, ವೈದ್ಯರನ್ನು ವಿರೋಧಿಸುತ್ತ-'ನನ್ನ ಎದೆ ಬಡಿತ ಎಷ್ಟು ಸ್ವಾಭಾವಿಕವಾಗಿದೆಯೋ ಅಷ್ಟೇ ಸಹಜವಾಗಿ ಮತ್ತು ಸರಿಯಾಗಿ ಇದೆ ನನ್ನ ಉಸಿರಾಟ !' ಎಂದು ಹೇಳಿದರು. ಅದಕ್ಕೆ ಹಾ-ನಿಸ್-"ಊಂಹೂ.... ! ಎರಡೂ ಒಂದೇ ಅಲ್ಲ ! ಎದೆಬಡಿತವೇ ಬೇರೆ ಉಸಿರಾಟವೇ ಬೇರೆ. ಎರಡಕ್ಕೂ ಮುಖ್ಯವಾದ ಒಂದು ವ್ಯತ್ಯಾಸವಿದೆ. ಎದೆಬಡಿತ ಅನೈಚ್ಛಿಕವಾದದ್ದು. ಅದರ ಮೇಲೆ ನಮ್ಮ ಹತೋಟಿ ಸ್ವಲ್ಪವೂ ಇಲ್ಲ, ಆದರೆ ಶ್ವಾಸಾಂಗದ ಮೇಲೆ ನಿಶ್ಚಯವಾಗಿಯೂ ನಮ್ಮ ಹತೋಟಿ ಇದೆ. ನೀವು ಅದರ ದುರುಪಯೋಗವೂ ಮಾಡಬಲ್ಲಿರಿ.

ಅಥವಾ ಸದುಪಯೋಗ ಮಾಡುವುದಕ್ಕೂ ನೀವು ಸಮರ್ಥರು." ಎಂದು ಹೇಳುತ್ತಾ ಶ್ವಾಸೋಛ್ವಾಸದ ಮಹತ್ವವನ್ನು ವಿವರವಾಗಿ ತಿಳಿಸಿಕೊಟ್ಟರು.

ನೋಲ್ಸ್ ಡಾಕ್ಟರರು ಕಲಿಸಿಕೊಟ್ಟ ರೀತಿಯಲ್ಲಿ ಶ್ವಾಸೋಛ್ವಾಸದ ಅಭ್ಯಾಸ ಮಾಡಿದರು. ಕೆಮ್ಮು ಪೂರ್ಣವಾಗಿ ತೊಲಗಿ ಹೋಯಿತು. ಹೀಗೆ ಸ್ವಾನುಭವದಿಂದಾಗಿ ಸರಿಯಾದ ಉಸಿರಾಟದಿಂದ ಶ್ವಾಸಾಂಗಗಳ ಎಲ್ಲ ಕಾಯಿಲೆಗಳನ್ನು ನಿವಾರಿಸಲು, ಅಥವಾ ಕಡೇ ಪಕ್ಷ ಕಡಿಮೆ ಮಾಡಲು ಸಾಧ್ಯ ಎಂಬ ವಿಷಯ ಅವರಿಗೆ ಖಾತ್ರಿಯಾಯಿತು. ಅವರ ಈ ತೀರ್ಮಾನಕ್ಕೆ ಪೂರಕವಾಗಿ ಹಲವು ವೈದ್ಯಕೀಯ ಪುರಾವೆಗಳೂ ದೊರಕಿದುವು. ಆದರೆ ಶ್ವಾಸಾಂಗದಲ್ಲೇ-ದೋಷ, ಅಥವಾ ತಡೆ-ಉಂಟಾಗಿ, ಉಸಿರಾಟಕ್ಕೆ ಅಡಚಣೆ ಏರ್ಪಟ್ಟ ಸಂದರ್ಭದಲ್ಲಿ ಮಾತ್ರ ತಜ್ಞ ವೈದ್ಯರ ಸಲಹೆ ಹಾಗೂ ನಿರೀಕ್ಷಣೆ ಇಲ್ಲದೆ ಇಂಥ ದೀರ್ಘ ಶ್ವಾಸೋಛ್ವಾಸದ ವ್ಯಾಯಾಮವನ್ನು ಸರ್ವಥಾ ಮಾಡಬಾರದು.

ನೋಲ್ಸರ ವಿದ್ಯಾರ್ಥಿಗಳಲ್ಲಿ ಬಹಳ ಮಂದಿ, ಹಲವು ವರ್ಷಗಳಿಂದ ಬ್ರಾಂಕಾಯಿಟಿಸ್ ಹಾಗೂ ಬ್ರಾಂಕಾ-ಯಿಲ್ ಆಸ್ತಮಾ (ತಮಕಶ್ವಾಸ) ದಿಂದ ಬಳಲುತ್ತಿದ್ದವರು, ಇಂಥ ಶ್ವಾಸೋಛ್ವಾಸದ ಶಿಕ್ಷಣ ಪಡೆದು ಸಂಪೂರ್ಣ ಗುಣ ಹೊಂದಿರುವುದು ಅವರ ಅನುಭವಕ್ಕೆ ಬಂದಿದೆ.

ಎಂಫಿಸೀಮಾ ಎಂಬ ಕಠಿಣ ವ್ಯಾಧಿಯ ಬಗ್ಗೆ ವಿವರಿಸುತ್ತಾ ನೋಲ್ಸರು ಹೀಗೆನ್ನುತ್ತಾರೆ-"ಈ ಎಂಫಿಸೀಮಾ ರೋಗ (-ಎಂದರೆ, ಶ್ವಾಸಕೋಶಿಕೆಗಳು ಸ್ವಸ್ಥಾನದಿಂದ ಕದಲಿ ಜೋತು ಬೀಳುವುದು, ಗಂಭೀರ ಸ್ವರೂಪದ್ದಾದರೆ ಗಾಳಿ ಚೀಲಗಳು ಬಾತುಹೋಗಿರುವುದು. ಇದೆ) ಕ[...]ತುತ್ತಾದ ನನ್ನ ವಿದ್ಯಾರ್ಥಿಗಳಲ್ಲಿ ಡಜನು ಗಟ್ಟಲೆ ಡಾಕ್ಟರುಗಳೂ ಇದ್ದರೆ. ಅವರೆಲ್ಲ ರಿಗೂ ಅದ್ಭುತ ಲಾಭವಾಗಿದೆ. ಅವರಲ್ಲಿ ಕೆಲವರಂತೂ ನಿಶ್ಶಕ್ತರಾಗಿ ಸೋತುಹೋಗಿದ್ದರು! ಆದರೆ ಅವರೆಲ್ಲರೂ ಗುಣಮುಖ ರಾಗಿ ಸಾಮಾನ್ಯ ಸ್ಥಿತಿಗೆ, ನಿತ್ಯಜೀವನ ಕ್ರಮಕ್ಕೆ ಹಿಂದಿರುಗಿದರು! ನ್ಯೂಯಾರ್ಕ್ ನ ವಿಶ್ವವಿದ್ಯಾಲಯದ ವೈದ್ಯಕೀಯ ವಿಭಾಗದ ಕೇಂದ್ರದಲ್ಲಿ ನಡೆಸಿದ ಒಂದು ಚಿಕಿತ್ಸಾ ಪ್ರಯೋಗದ ಬಗ್ಗೆ ಅಲ್ಲಿನ ಡಾಕ್ಟರ್ 'ಆಲ್ಬರ್ಟ್ ಹಾಸ್ ಎಂಬವರು ಹೀಗೆ ತಿಳಿಸುತ್ತಾರೆ-ಎಂಫಿಸೀಮಾ ಕಾಯಿಲೆ ಯಿಂದಾಗಿ ಗಂಭೀರ ಸ್ಥಿತಿಗೆ ಮುಟ್ಟಿ ಹಾಸಿಗೆ ಹಿಡಿದಂಥ ಒಂದು ಗುಂಪಿನ ಮೂರನೇ ಎರಡು ಭಾಗ ರೋಗಿಗಳಿಗೆ ಕ್ರಮಬದ್ಧವಾಗಿ ಉಸಿರಾಟದ ವ್ಯಾಯಾಮ ವನ್ನು ಕಲಿಸಿಕೊಡಲಾಯಿತು. ಅವರೆಲ್ಲರೂ ವ್ಯಾಯಾಮ ಮಾಡದೆ ಇದ್ದ ಮೂರನೇ ಒಂದು ಭಾಗ ರೋಗಿಗಳಿಗಿಂತ ಮೊದಲೇ, ಎಂದರೆ, ಅತಿ ಶೀಘ್ರ ಗತಿಯಲ್ಲಿ ಗುಣ ಹೊಂದಿದರು. ಇದರಿಂದ ಸ್ಫೂರ್ತಿ ಹೊಂದಿ, ಅಂದಿನಿಂದ ಉಸಿರಾಟದ ವ್ಯಾಯಾಮ ವನ್ನು ನನ್ನ ಚಿಕಿತ್ಸೆಯ ತಂತ್ರದೊಂದಿಗೆ ಮುಖ್ಯ ಪೂರಕ ಅಂಶವಾಗಿ ಸೇರ್ಪಡಿ ಗೊಳಿಸಿದೆ.

ನೋಲ್ಸರು ಮುಂದುವರಿಸುತ್ತಾ ಒತ್ತಿ ಹೇಳುವ ವಿಷಯ ಇದು-ಪ್ರಸಕ್ತ ವಿದ್ಯ ಮಾನಗಳಿಂದಾಗಿ, ಭೂಮಂಡಲದ ವಾತಾ ವರಣದಲ್ಲಿ ಆಮ್ಲಜನಕದ ಕೊರತೆ ದಿನೇ

ನೇ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ನಮಗೆ ಲಭ್ಯವಿರುವ ಆಮ್ಲಜನಕವನ್ನು ಚೆನ್ನಾದ ರೀತಿಯಲ್ಲಿ ಉಪಯೋಗಿಸಿ ಕೊಳ್ಳುವ ಆವಶ್ಯಕತೆ ಹಿಂದೆಂದೂ ಇಲ್ಲದಷ್ಟು ಅಧಿಕವಾಗಿದೆ.

ಶರೀರವೆಂಬ ಯಂತ್ರದ ಬಗ್ಗೆ ನಾವೇಕೆ ಇಂಥ ಅಲಕ್ಷ್ಯ ತೋರುತ್ತಿದ್ದೇವೆ? ಅದೇ ಸಮಯದಲ್ಲಿ ನಮ್ಮ ವಾಹನ ಇತ್ಯಾದಿ ಯಂತ್ರೋಪಕರಣಗಳ ಬಗ್ಗೆ ನಮ್ಮ ಮುನ್ನೆಚ್ಚರಿಕೆ ಎಷ್ಟು ತೀವ್ರವಾಗಿದೆ? ಈ ವಿಪರ್ಯಾಸವನ್ನು ನೋಲ್ಸರು ವಿವರಿಸುವ ರೀತಿ ಇದು—ನಿಮ್ಮ ಕಾರಿನ ಇಂಜಿನ್ನಿಗೆ ಪೆಟ್ರೋಲ್ ಸರಿಯಾಗಿ ಹರಿಯದಿದ್ದರೆ, ಅಥವಾ ಇಂಜಿನ್ ಚಾಲನೆಯಾಗುತ್ತಿರುವಾಗ ಅದರ ಕಾರ್ಬೋರೇಟರ್—ಇದು ಯಂತ್ರ ಚಾಲನೆಯಾಗುವಾಗ ಉಂಟಾಗುವ ಬಾಷ್ಪವನ್ನು ವಾಯುವಿನೊಂದಿಗೆ ಮಿಶ್ರಗೊಳಿಸುವ ಒಂದು ಸಣ್ಣ ಉಪಕರಣ —ಇದರ ಕೆಲಸ ಸಮರ್ಪಕವಾಗಿಲ್ಲವಾದರೆ ಅಥವಾ ಅಂಥದೇ ಇನ್ನೊಂದೋ ಮತ್ತೊಂದೋ ತೊಂದರೆಗಳಿಂದ ಇಂಜಿನ್ನಿನ ಸಾಮರ್ಥ್ಯ ಕುಗ್ಗಿಹೋದರೆ, ನಿಮಗೆ ಸಹಿಸಲಾಗುವುದಿಲ್ಲ; ಮತ್ತು ತಕ್ಷಣವೇ ಅದನ್ನು ಸರಿಪಡಿಸತೊಡಗುತ್ತೀರಿ. ಆದರೆ ಶರೀರದ ಮಿಲಿಯಗಟ್ಟಲೆ ಕೋಶಿಕೆಗಳು ಆಮ್ಲಜನಕದ ಕೊರತೆಯಿಂದ ಅನುಭವಿಸುವ ಕಷ್ಟನಷ್ಟಗಳನ್ನು ಮತ್ತು ಫಲಿತಾಂಶವಾಗಿ ಶರೀರ ಸಾಮರ್ಥ್ಯದಲ್ಲಿ, ಹೆಚ್ಚೇಕೆ ಜೀವನದಲ್ಲೇ ಉಂಟಾಗುವ ಲೋಪದೋಷಗಳನ್ನು ಒಪ್ಪಿಕೊಳ್ಳಲು, ಸ್ವೀಕರಿಸಲು, ಸಿದ್ಧರಿದ್ದೀರಿ! ಆರೋಗ್ಯಪೂರ್ಣ, ಉಲ್ಲಾಸಭರಿತ ಜೀವನಕ್ಕೆ ಸುಲಭಸಾಧನವಾದ ಮತ್ತು ಮುಖ್ಯ ಆಧಾರವಾದ ಪ್ರಾಣವಾಯುವಿನ ಬೆಲೆಕಟ್ಟಲಾಗದ ಪ್ರಯೋಜನಗಳನ್ನು ಪಡೆದುಕೊಳ್ಳಲು ಸಾಧ್ಯವಿದ್ದೂ ಸುಮ್ಮನಿದ್ದೀರಿ!" ಜನರ ನಿರ್ಲಕ್ಷ್ಯವನ್ನು ಕಂಡು ನೊಂದು ವಿಲಿಯಂ ನೋಲ್ಸ್ ಹೀಗೆ ಉದ್ಗರಿಸುತ್ತಾರೆ!

ವಾಚಕ ಮಹಾಶಯ! ಇಷ್ಟೆಲ್ಲ ವಿಷಯಗಳನ್ನು ಓದಿ, ತಿಳಿದ ಮೇಲೆ ಸ್ವಸ್ಥ ಜೀವನಕ್ಕೆ ಸುಲಭ ಸೋಪಾನ ಯಾವುದೆಂದು ನಿಮಗೆ ಮನದಟ್ಟಾಗಿರಬಹುದಲ್ಲ? ಇದು ಎಲ್ಲರೂ ತಿಳಿದಿರಬೇಕಾದ ಆವಶ್ಯಕ ಪಾಠ, ಅತ್ಯುತ್ತಮ ಪಾಠ. ಯೋಗ್ಯ ಉಸಿರಾಟ—ಆರೋಗ್ಯಭಾಗ್ಯ—ಪರಿಣಾಮ —ಸುಖಜೀವನ.

ಮದ್ಯಪಾನ ಕಳ್ಳತನಕ್ಕಿಂತಲೂ ಹೇಯವಾದದ್ದು
ದೇವರಿಗೆ ಭಯ ಪಡಬೇಕು, ಮನುಷ್ಯರಿಗೆ ಭಯಪಡಬಾರದು

ದುಃಖ ಎನ್ನುವುದು ತ್ಯಾಗವಲ್ಲ, ಯಾವ ತ್ಯಾಗದಿಂದ ಮನುಷ್ಯನಿಗೆ ಆನಂದ ಲಭಿಸುತ್ತದೋ ಅದೇ ನಿಜವಾದ ತ್ಯಾಗ.

—ಮಹಾತ್ಮ ಗಾಂಧಿ

ಜೇನ್ ಗುಡಾಲ್-ಕಾಡಿನಲ್ಲಿ ಬದುಕು

ಲಕ್ಷ್ಮೀನಾರಾಯಣ
ರಾಘವೇಂದ್ರ ದೇವಸ್ಥಾನದ ಹತ್ತಿರ
ರೈಲ್ವೆಸ್ಟೇಷನ್ ರಸ್ತೆ
ಟಿ. ಆರ್. ಸಾಗರ-೫೭೧ ೬೧೬

ಜೇನ್ ಗುಡಾಲ್ ಒಬ್ಬ ವನ್ಯ ಪ್ರಾಣಿಗಳ ಸಂಶೋದಕಿ,ಅದರಲ್ಲಿಯೂ ಆಫ್ರಿಕಾದ ಚಿಂಪಾಂಜಿಗಳು–ಅವುಗಳ ಜೀವನ ವಿಧಾನ ಸಂವಹನ ಮನುಷ್ಯ ಮತ್ತು ಚಿಂಪಾಂಜಿಗಳ ನಡುವೆ ಇರುವ ಸಾಮ್ಯತೆ ಇತ್ಯಾದಿಗಳನ್ನು ಲೇಖಕಿ ತಮ್ಮ 'ಎ ಲೈಫ್ ಇನ್ ದಿ ವೈಲ್ಡ್' ಎಂಬ ಸಂಶೋಧನಾ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಪ್ರಸ್ತುತ ಲೇಖನ ಅದರ ಸಂಕ್ಷಿಪ್ತ ರೂಪವಾಗಿದ್ದು ಇದರಲ್ಲಿ ಸ್ವತಃ ಲೇಖಕಿ ಹಾಗೂ ಒಬ್ಬ ಮಧ್ಯವರ್ತಿ ಪಾಲ್ಗೊಂಡಿದ್ದಾರೆ.

ಗುಡಾಲ್

ಕಿಗೋಮಾ ಪಟ್ಟಣಕ್ಕೆ ಸಮೀಪವಿರುವ ಟಾಂಗನೀಕ ಸರೋವರ ತೀರದ ಮೂಲಕ ಗಾಂಬ್ ರಾಷ್ಟ್ರೀಯ ಉದ್ಯಾನವನದೆಡೆಗೆ ಒಂದು ಸಣ್ಣ ದೋಣಿಯಲ್ಲಿ ಪ್ರಯಾಣಿಸಬೇಕೆಂದು ನಾನು ಸದಾ ಬಯಸುತ್ತಿದ್ದೆ. ಗಾಂಬ್ ರಾಷ್ಟ್ರೀಯ ಉದ್ಯಾನವನ ಒಂದು ಅಭಯಾರಣ್ಯ. ಅಲ್ಲಿಗೆ ನಾನು ಪ್ರಯಾಣ ಪ್ರಾರಂಭಿಸಿದಾಗ ನನ್ನ ಜತೆಯಲ್ಲಿ ತಾಯಿ ಇದ್ದರು. ಕಾರಣವಿಷ್ಟೇ ; ಇಂಗ್ಲಿಷ್ ವ್ಯವಸ್ಥಾಪಕ ಅಧಿಕಾರಿಗಳು ಯಾವ ಇಂಗ್ಲಿಷ್ ಯುವತಿಯನ್ನು ಕಾಡಿನಲ್ಲಿ ಒಂಟಿಯಾಗಿ ಹೋಗಲು ಅನುಮತಿ ನೀಡುವುದಿಲ್ಲವೆಂದು ನನಗೆ ತಿಳಿಸಿದ್ದರು. ಈ ಕಾರಣದಿಂದ ನನ್ನ ತಾಯಿಯನ್ನು ಸಂಗಾತಿಯಾಗಿ ಆಯ್ಕೆ ಮಾಡಿಕೊಂಡಿದ್ದೆ. ಕಾಡು ತುಂಬಿದ ಪರ್ವತಗಳ ಇಳಿಜಾರಿನತ್ತ ದೃಷ್ಟಿನೆಟ್ಟು ಯೋಚಿಸತೊಡಗಿದೆ. 'ಆ ದಟ್ಟವಾದ ಕಾಡಿನಲ್ಲಿ ಚಿಂಪಾಜಿಗಳನ್ನು ಹೇಗೆ ಪತ್ತೆ ಹಚ್ಚಲಿ?' ಎಂಬ ಕಲ್ಪನಾಲೋಕದಲ್ಲಿ ವಿಹರಿಸುತ್ತಾ ತೀರದಲ್ಲಿಳಿದು ಮರಳಿನಲ್ಲಿ ಹೆಜ್ಜೆ ಇಡತೊಡಗಿದೆ, ಅಲ್ಲಿ ವಾಸಿಸುತ್ತಿದ್ದ ಆಫ್ರಿಕನ್ನರನ್ನು ಕಲ್ಪನೆಯಲ್ಲಿಯೇ ಕಂಡೆ. ನನ್ನನ್ನು ಮೊದಲು ಯಾರು ಸ್ವಾಗತಿಸುತ್ತಾರೆ, ನನಗಾಗಿ ಟೆಂಟನ್ನು ಯಾರು ಸಿದ್ಧಪಡಿಸಿಕೊಡುತ್ತಾರೆ. ದಟ್ಟ ಕಾಡಿನ ಪರ್ವತದ ಇಳಿಜಾರಿನಲ್ಲಿ ಯಾರು ಮೊದಲ ಸಲ ದಾರಿ ತೋರಿಸುತ್ತಾರೆ. ಹೀಗೆ ಯೋಚಿಸುತ್ತಿದ್ದಂತೆಯೇ ಇದು ದುಃಸಾಧ್ಯ ಎನಿಸುತ್ತದೆ. ಆದರೆ ಕ್ಷಣಾರ್ಧದಲ್ಲಿಯೇ ಇದೇ ನನ್ನ ಜೀವನದ ಸಾರಸ್ವತ ಗುರಿ ಎಂದುಕೊಳ್ಳುತ್ತೇನೆ. ನನ್ನ ಕನಸು ಇದೇ ಆಗಿರುವುದರಿಂದ ನಾನು ಗುರಿಮುಟ್ಟುತ್ತೇನೆಂದು ಭಾವಿಸುತ್ತೇನೆ.

ವಿವರಣೆಕಾರ

ಅವಳು ತನ್ನ ಕಾರ್ಯದಲ್ಲಿ ಜಯಶೀಲಳಾದಳು ಡಾ|| ಜೇನ್‌ಗುಡಾಲ್ ಈಗ ಇದೇ

ಪ್ರಪಂಚದಲ್ಲಿ ಚಿಂಪಾಂಜಿಗಳ ಬಗ್ಗೆ ಹೆಚ್ಚು ಅಧಿಕಾರಯುತವಾಗಿ ತಿಳಿದವಳೆಂದು ಗುರ್ತಿಸಲ್ಪಟ್ಟಿದ್ದಾಳೆ. ಯಾರು ತಮ್ಮ ಇಡೀ ಜೀವನವನ್ನೇ ಒಂದು ಧ್ಯೇಯಕ್ಕಾಗಿ ಮುಡಿಪಾಗಿಟ್ಟಿರುತ್ತಾರೋ ಅಂಥವರಿಗೆ ಜಯವೆನ್ನುವುದು ಅತಿ ಮಧುರವಾಗಿರುತ್ತದೆ. ೧೯೬೦, ಜುಲೈ ೧೪ ರಂದು ಇಪ್ಪತ್ತಾರು ವರ್ಷದ ಜೇನ್‌ಗುಡಾಲ್ ಆಫ್ರಿಕಾದ ಟಾಂಜಾನಿಯದಲ್ಲಿರುವ ಟಾಂಗಾನೀಕ ಸರೋವರದ ಪೂರ್ವತೀರದ ಮೂಲಕ ಚಿಂಪಾಂಜಿಗಳು ವಾಸಿಸುವ 'ಗೋಂಬ್'ಅಭಯಾರಣ್ಯಕ್ಕೆ ತಲುಪಿದಳು. ಅವಳು ದೈಹಿಕವಾಗಿ ಹಾಗೂ ಭಾವನಾತ್ಮಕವಾಗಿ ಈ ಸಾಹಸದ ಕೆಲಸಕ್ಕೆ ಸಿದ್ಧಳಾಗಿದ್ದಳು.ಆ ಸಮಯದಲ್ಲಿ ಅನೇಕರು ಮಾನವ ಶರೀರ ಶಾಸ್ತ್ರಜ್ಞ ಲೂಯಿಸ' ಲೀಕೆ ಎಂಬಾತ ತರಬೇತಿ ಹೊಂದದ ಒಬ್ಬ ಯುವತಿಯನ್ನು ದುರ್ಗಮ ಕಾಡಿನಲ್ಲಿ ಚಿಂಪಾಂಜಿಗಳ ಬಗ್ಗೆ ಅಧ್ಯಯನಕ್ಕೆ ಆಯ್ಕೆ ಮಾಡಿದುದಕ್ಕೆ ಅಪಹಾಸ್ಯ ಮಾಡಿದ್ದರು. ಮತ್ತೆ ಕೆಲವರು ಮಿಸ್ ಗುಡಾಲ್ ಒಂದೆರಡು ತಿಂಗಳೂ ಸಹ ಕಾಡಿನಲ್ಲಿ ಇರಲಾರಳೆಂದು ಕುಚೋದ್ಯ ಮಾಡಿದ್ದರು.

ಗುಡಾಲ್

ನಾನು ೨೩ ವರ್ಷದವಳಾಗಿದ್ದಾಗ ಕೀನ್ಯಾಕ್ಕೆ ಹೋದೆ. ಅಲ್ಲಿಗೆ ಹೋಗುವುದಕ್ಕಾಗಿ ನಾನು ಹಣ ಉಳಿತಾಯ ಮಾಡಿದ್ದೆ. ನನ್ನ ಕುಟುಂಬ ಸ್ಥಿತಿವಂತರಾಗಿರಲಿಲ್ಲ. ನಾನು ನನ್ನ ಶಾಲಾ ಗೆಳತಿಯ ಜತೆ ವಾಸಿಸುತ್ತಿದ್ದಾಗ ಲೂಯಿಸ್ ಲೀಕೆಯ ಬಗ್ಗೆ ಸಾಕಷ್ಟು ತಿಳಿಯಿತು. 'ಜೇನ್, ನಿನಗೆ ಪ್ರಾಣಿಗಳ ಬಗ್ಗೆ ಹೆಚ್ಚು ತಿಳಿಯುವ ಕಾತುರವಿದ್ದರೆ ನೀನು ಲೂಯಿಸ್ ಲೀಕೆಯನ್ನು ಭೇಟಿ ಮಾಡಬೇಕು". ಎಂದು ಕೆಲವರು ಹೇಳಿದರು. ಆ ಸಮಯದಲ್ಲಿ ಲೀಕೆ ಅವರು ನೈರೋಬಿಯ 'ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ'ನಲ್ಲಿ ಕ್ಯುರೇಟರಾಗಿದ್ದರು. ನಾನು ಫೋನ್ ಮಾಡಿ 'ನಾನು ಡಾ|| ಲೀಕೆಯವರ ಜತೆ ಮಾತನಾಡಬೇಕು' ಎಂದು ಹೇಳಿದೆ.'ನಾನೇ,ಲೀಕೇ ಏನಾಗಬೇಕಿತ್ತು?' ಎಂದು ಒರಟಾದ ಧ್ವನಿ ಉತ್ತರಿಸಿತು. ನನಗೆ ಗಾಬರಿಯಾಯಿತು. ಆದರೆ ತಕ್ಷಣ ಸಾವರಿಸಿಕೊಂಡು ನಾನು ಅವರನ್ನು ಭೇಟಿಯಾಗಬೇಕೆಂದೂ ಪ್ರಾಣಿಗಳ ಬಗ್ಗೆ ಹೆಚ್ಚು ಅಧ್ಯಯನ ಮಾಡಬೇಕೆಂದೂ ತಿಳಿಸಿದೆ. ಅವರು ನಮ್ಮ ಭೇಟಿಯ ಸಮಯವನ್ನು ನಿಗದಿಪಡಿಸಿಅನೇಕಪ್ರಶ್ನೆಗಳನ್ನು ಕೇಳಿದರು. ನಾನು ಪಾಸಾದೆ. ಅವರು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ತೃಪ್ತಿಕರವಾಗಿ ಉತ್ತರಿಸಲು ನನ್ನ ಸ್ವಅಧ್ಯಯನ ಸಾಕಷ್ಟು ಸಹಾಯ ಮಾಡಿತು. ಅವರು ನನಗೆ ಸಹಾಯಕ ಕಾರ್ಯದರ್ಶಿ ಹುದ್ದೆ ನೀಡಿದರು. ನಾನು ಬೆರಳಚ್ಚು ಹಾಗು ಶೀಘ್ರಲಿಪಿಯನ್ನು ಕಲಿತಿದ್ದುದು ಹೆಚ್ಚು ಸಹಾಯ ಮಾಡಿತು. ಒಂದು ದಿನ ನಾನು ಅವರಿಗೆ ತಿಳಿಸಿದೆ. "ಡಾ|| ಲೀಕೆ ಇಲ್ಲಿ ನನಗೆ ಉತ್ತಮವಾದ ಅವಕಾಶ ಸಿಕ್ಕಿದೆ, ಈ ಕಛೇರಿ, ಮ್ಯೂಸಿಯಂನಲ್ಲಿರುವ ನಿಮ್ಮ ರೂಮಿನಷ್ಟೇ ಅದ್ಭುತವಾಗಿದೆ. ಆದರೆ ಇಲ್ಲಿಗಿಂತಲೂ ಹೆಚ್ಚಾಗಿ ನಾನು ಹೊರಗೆ ಹೋಗಬೇಕು. ಆಫ್ರಿಕಾದ ಹಳ್ಳಿಗಾಡಿನಲ್ಲಿರುವ ವನ್ಯಪ್ರಾಣಿಗಳನ್ನು ಕಣ್ಣಾರೆ ಕಾಣಬೇಕೆಂದು ಇಷ್ಟಪಡುತ್ತೇನೆ".

ವಿವರಣೆಕಾರ

ಡಾ|| ಲೀಕೆ ತಮ್ಮ ಪತ್ನಿಯ ಜತೆ ಆಲ್ಡುವಾಯ್ ಗಾರ್ಜ್‌ನಲ್ಲಿ ಪ್ರಾಣಿಗಳ ಪಳೆಯುಳಿಕೆಗಳನ್ನು ಸಂಶೋಧಿಸಲು ಜೇನ್‌ಳನ್ನು ಆಹ್ವಾನಿಸಿದರು. ಆದರೆ ಅಲ್ಲಿ ಜೇನ್ ಕಾಡಿನಲ್ಲಿ ಪ್ರಾಣಿಗಳ ಜೀವನ ತಿಳಿಯಲು ಧೃಡ ನಿರ್ಧಾರ ಮಾಡಿದ್ದಾಳೆಂದು ಲೀಕೆಗೆ ಮನವರಿಕೆಯಾಯಿತು.

ಗುಡಾಲ್

ಒಂದು ತಿಂಗಳೊಳಗಾಗಿ ಲೀಕೆಯವರು ನಾಗರಿಕತೆಯ ರಮ್ಯತೆಯ ಬಗ್ಗೆ ನನಗೆ ಹೆಚ್ಚು ಆಸಕ್ತಿಯಿಲ್ಲವೆಂದು ಗುರುತಿಸಿದರು. ನಾನು ಪಾರ್ಟಿಗಳನ್ನು ಹೆಚ್ಚು ಇಷ್ಟಪಡುತ್ತಿರಲಿಲ್ಲ. ಒಮ್ಮೆ ಅವರು ದೂರದ ಟಾಂಗನೀಕ ಸರೋವರ ತೀರದಲ್ಲಿ ವಾಸವಾಗಿದ್ದ ಚಿಂಪಾಂಜಿಗಳ ಬಗ್ಗೆ ವಿವರಣೆ ನೀಡಲಾರಂಭಿಸಿದರು. ಅವುಗಳ ಬಗ್ಗೆ ಇದ್ದಕ್ಕಿದ್ದ ಹಾಗೆ ಅವರು ಏಕೆ ಹಾಗೆ ಮಾತನಾಡುತ್ತಿದ್ದಾರೆ ಎಂದು ನನಗೆ ನಿಜವಾಗಿಯೂ ತಿಳಿಯಲಿಲ್ಲ. ಕೊನೆಯಲ್ಲಿ ನಾನು ಹೇಳಿದೆ. 'ಓ, ಲೂಯಿಸ್, ನೀವು ಹಾಗೆ ಮಾತನಾಡಬಾರದು. ಏಕೆಂದರೆ ನಾನು ಅವುಗಳ ಬಗ್ಗೆ ಸ್ವ ಅಧ್ಯಯನ ಮಾಡಲು ತುಂಬಾ ಇಷ್ಟಪಡುತ್ತೇನೆ' 'ನಾನು ಅವುಗಳ ಬಗ್ಗೆ ಹಾಗೇ ಮಾತನಾಡುತ್ತಿದ್ದೇನೆ ಎಂದು ಏಕೆ ಭಾವಿಸಿರುವೆ" ? ಅವರು ಕೇಳಿದರು.ಅನಂತರ ನನಗೆ ತಿಳಿದು ಅಚ್ಚರಿಯಾಯಿತು. ಏಕೆಂದರೆ ನನಗೆ ಆ ಬಗ್ಗೆ ಹೆಚ್ಚಿನ ವಿದ್ಯಾರ್ಹತೆ ಇರಲಿ, ಕನಿಷ್ಠ ಅರ್ಹತೆಯೂ ಇರಲಿಲ್ಲ. ಅವುಗಳ ಬಗ್ಗೆ ಸರಿಯಾದ ತಿಳಿವಳಿಕೆ ಪಡೆಯುವುದು ಅವಶ್ಯಕವೆಂದು ಅವರು ಹೇಳಿದರು. ನಾನು ಯಾವ ವೈಜ್ಞಾನಿಕ ಪದ್ಧತಿಗೂ ಬದ್ಧಳಾಗಲಿಲ್ಲ. ಅದು ಎಷ್ಟೇ ದುರ್ಗಮವಾದ ಕಾರ್ಯವಾಗಿದ್ದರೂ ಸರಿ ಚಿಂಪ್‌ಗಳ ಬಗ್ಗೆ ತಿಳಿಯಲೇಬೇಕೆಂದು ಆಶಿಸಿದ....

ವಿವರಣೆಕಾರ

ಪ್ರಾರಂಭದ ಭಯ, ಆತಂಕ, ಆತುರ ಹಾಗೂ ಚಿಂಪ್‌ಗಳ ವಿರೋಧ ಈ ಇವೆಲ್ಲವೂ ಮೊದಲ ಐದು ತಿಂಗಳಲ್ಲಿ "ಅನುಭವವಾಯಿತು. ಕ್ರಮೇಣ ಮಿಸ್‌ಗುಡಾಲ್ ಪ್ರತಿಯೊಂದು ಚಿಂಪಾಂಜಿಯನ್ನು ಗುರುತಿಸುವುದಲ್ಲದೆ ಒಂದೊಂದಕ್ಕೂ ಒಂದೊಂದು ಹೆಸರಿಟ್ಟಳು.

ಗುಡಾಲ್

ಮೊದಲ ಸಂಬಂಧ, ಪ್ರಾಯಶಃ ನಿಕಟ ಸಂಬಂಧವೆನ್ನಬಹುದು. ನನ್ನ ಹಾಗೂ ಡೇವಿಡ್ ಗ್ರೇ ಬಿಯಾರ್ಡ್‌ನ ನಡುವೆ ೧೯೬೧ರಲ್ಲಿ ಉಂಟಾಯಿತು. ಯಾಕೋ ಏನೋ ನನ್ನ ಸನಿಹವನ್ನು ಅದು ಬೇರೆಲ್ಲವುಗಳಿಗಿಂತ ಹೆಚ್ಚಾಗಿ, ತುಂಬಾ ಹಿತವಾಗಿ ಹಬ್ಬಿಕೊಂಡಿತು. ಅವರೊಂದಿಗಿನ ಮೊಟ್ಟ ಮೊದಲ ದಿನದ ಅನುಭವವನ್ನು ನಾನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಿರುತ್ತೇನೆ. ಒಂದು ತಾಳೆಯ ಹಣ್ಣನ್ನು ಅದಕ್ಕೆ ನೀಡಿದೆ. ಆದರೆ ಅದು ಹಣ್ಣನ್ನು ಇಷ್ಟ ಪಡಲಿಲ್ಲ, ಹಣ್ಣನ್ನು ತೆಗೆದುಕೊಂಡು ನೆಲಕ್ಕೆ ಎಸೆಯಿತು. ಅನಂತರ ನನ್ನ ಕೈಯನ್ನು ಮೃದುವಾಗಿ ಹಿಡಿದುಕೊಂಡಿತು; ಬಹುಶಃ ನನ್ನ ಕೈಯನ್ನು ಮೆತ್ತಗೆ ಅಮುಕಿತು. ಅದು ನನ್ನೊಡನೆ ಸ್ನೇಹದ ಭರವಸೆಯನ್ನು ಮೂಡಿಸುವ ಸಂಜ್ಞೆಯಿರಬೇಕೆಂದು

ಕೊಂಡೆ. ಅದಕ್ಕೆ ಹಣ್ಣು ಬೇಕಿರಲಿಲ್ಲ ಹಾಗೆಯೇ ನನ್ನನ್ನು ದಿಗಿಲುಗೊಳಿಸುವುದೂ ಸಹಾ ಬೇಕಿರಲಿಲ್ಲ. ಅದೊಂದು ಸ್ನೇಹ ಸಂಜ್ಞೆಯ ಮೂಲಕ ನಡೆದ ಸಂಭಾಷಣೆ, ಅದ್ಭುತವಾದ ಕ್ಷಣವೆಂದು ನನ್ನ ಅಂತಃಪ್ರಜ್ಞೆಗೆ ಗೋಚರಿಸಿತು.

ವಿವರಣೆಕಾರ

ವಾಸ್ತವಾಂಶವೆಂದರೆ ಚಿಂಪಾಂಜಿಗಳೂ ಸಹಾ ಆಲೋಚಿಸುತ್ತವೆ, ಸೃಜನಾತ್ಮಕವಾಗಿ ಕೆಲಸ ಮಾಡುತ್ತದೆ ಎಂದು ಗುಡಾಲ್ ಗುರುತಿಸಿದರು.

ಗುಡಾಲ್

ಚಿಂಪಾಂಜಿಗಳು ನಿರ್ದಿಷ್ಟವಾದ ಸಂದರ್ಭಗಳಲ್ಲಿ ಶಬ್ದ ಮಾಡುತ್ತವೆಯಲ್ಲದೆ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಪ್ರತಿಕ್ರಿಯಿಸುತ್ತವೆ. ಆ ಶಬ್ಧಗಳನ್ನು ಬೇರೆ ಬೇರೆ ಚಿಂಪಾಂಜಿಗಳು ದೂರದಲ್ಲಿದ್ದರೂ ಸಹಾ ಆಲಿಸಿ ಅರ್ಥಮಾಡಿಕೊಳ್ಳುತ್ತವೆ ಆ ಸಮಯದಲ್ಲಿ ನಾವು ಸಾಮಾಜಿಕ ಭಾಷಾ ತಜ್ಞರಾದ ಪ್ರೊಫೆಸರ್ ಡಾ|| ಕ್ರಿಸ್ಟೋಫರ್ ಬೋಯಮ್‌ರವರ ಜತೆಗೆ ಚರ್ಚಿಸಿ ವಿಶೇಷವಾಗಿ ಅಧ್ಯಯನ ಮಾಡುತ್ತಿದ್ದೆವು. ಕೆಲವು ಶಬ್ದಗಳು 'ಪ್ಯಾಂಟ್-ಹೂಟ್' ಎಂದು ಕೇಳಿಬರುತ್ತಿದ್ದವು. ದೂರದಿಂದ ಕೇಳಿಬರುವ ಶಬ್ದಕ್ಕೆ ಕಾಡಿನೊಳಗೆ ಚದುರಿಹೋದ ಚಿಂಪಾಂಜಿಗಳ ನಡುವೆ ಸಂಪರ್ಕ ಕಲ್ಪಿಸಲು ಆ ಕೂಗುಗಳು ಸಹಾಯ ಮಾಡುತ್ತವೆ. ಆ ಕೂಗುಗಳು ಪರಸ್ಪರ ಸಂಪರ್ಕ ಕಲ್ಪಿಸುವುದಷ್ಟೇ ಅಲ್ಲ, ಪ್ರತಿಯೊಂದು ಹೆಣ್ಣು-ಗಂಡು ಚಿಂಪ್‌ಗಳು ತಮ್ಮದೇ ಆದ ರೀತಿಯ ವ್ಯಕ್ತಿಗತ ಶಬ್ದಗಳನ್ನು ಹೊಂದಿವೆಯೆಂದು ಸೂಚಿಸುತ್ತಿದ್ದವು. ಅಷ್ಟೇ ಅಲ್ಲ ಆ ಶಬ್ದಗಳಿಂದ ಶತ್ರು ಹಾಗೂ ಮಿತ್ರರ ಜಾಡೂ ಸಹಾ ತಿಳಿಯುತ್ತಿತ್ತು.

ವಿವರಣೆಕಾರ

ಡಾ|| ಗುಡಾಲಳ ಮತ್ತೊಂದು ಮಹತ್ವದ ಸಂಶೋಧನೆ ಎಂದರೆ ಚಿಂಪ್‌ಗಳ ವರ್ತನೆ. ನಾವು ಇದುವರೆವಿಗೂ ಅವುಗಳ ಬಗ್ಗೆ ಅರ್ಥಮಾಡಿಕೊಂಡಿದ್ದ ಭಾವನೆಗಳನ್ನು ಈಗ ಬದಲಿಸಿಕೊಳ್ಳಬೇಕಿದೆ. ಉಪಕರಣಗಳನ್ನು ತಯಾರಿಸುವ ಹಾಗೂ ಉಪಯೋಗಿಸುವ ತಂತ್ರವನ್ನು ಮನುಷ್ಯ ಮಾತ್ರ ತಿಳಿದಿದ್ದನು ಎಂದು ಭಾವಿಸಿದ್ದೆವು.

ಗುಡಾಲ್

ಗೋಂಬ್‌ನಲ್ಲಿಯ ಚಿಂಪ್‌ಗಳು ಹೆಚ್ಚಾಗಿ ಕಡ್ಡಿ ಹಾಗೂ ಮರದ ಗಲ್ಲುಗಳಿಗೆ ಗೆದ್ದಲು ಹುಳುಗಳನ್ನು ಉಪಯೋಗಿಸಿ ಮೀನು ಹಿಡಿಯುತ್ತಿದ್ದವು. ಕೆಲವು ವೇಳೆ ಎಲೆಗಳಿರುವ ಗೆಲ್ಲುಗಳನ್ನು ಕಿತ್ತು ಎಲೆಗಳನ್ನು ಬೇರ್ಪಡಿಸಿ ಅಥವಾ ಒರಟಾದ ಹುಲ್ಲಿನ ಕಡ್ಡಿಗಳನ್ನು ಕಿತ್ತು ಅವುಗಳನ್ನು ಒಂದಕ್ಕೊಂದು ನುಲಿದು ಮೀನು ಹಿಡಿಯಲು ಉಪಯೋಗಿಸುತ್ತಿದ್ದುವು. ನಾನು ಇದನ್ನೆಲ್ಲಾ ಅಧ್ಯಯನ ಮಾಡಿ ಲೂಯಿಸ್ ಲೀಕೆಯವರಿಗೆ ವರದಿ ಮಾಡಿದೆ. ಅವರು ನನ್ನ ತಾಯಿಗೆ ತಿಳಿಸಿದರು. "ನೋಡಿ, ಜೀನ್ ಈಗ ಇದನ್ನು ಕಂಡಿದ್ದಾಳೆ. ನಾವು ಈಗ 'ಉಪಕರಣ' ಮತ್ತು 'ಮನುಷ್ಯ' ಇವುಗಳನ್ನು ಮರು ವ್ಯಾಖ್ಯಾನಿಸಬೇಕು, ಅಥವಾ ಚಿಂಪಾಂಜಿಗಳನ್ನು ಮಾನವರೆಂದು

ಸ್ವೀಕರಿಸಬೇಕು". ವರ್ಷಗಳು ಉರುಳಿದಂತೆ ಅವುಗಳು ಬೇರೆ ಉಪಕರಣಗಳನ್ನು ಉಪಯೋಗಿಸುವುದನ್ನು ಸಹಾ ಬಹುಷಃ ನಾವು ಕಾಣುತ್ತೇವೆ....

ಚಿಂಪಾಂಜಿಗಳು ನಮಗೆ ಅತ್ಯಂತ ಹತ್ತಿರದ ಸಂಬಂಧಿಗಳು. ಜೀವ ವಾಹಿನಿಯ ಪ್ರಕಾರ ಮನುಷ್ಯ ಮತ್ತು ಚಿಂಪಾಂಜಿಗಳಲ್ಲಿರುವ ಡಿ.ಎನ್.ಎ.ಗಳ ವ್ಯತ್ಯಾಸ ಕೇವಲ ಶೇಕಡಾ ಒಂದರಷ್ಟು ಮಾತ್ರ, ಅವುಗಳ ದೇಹ ರಚನೆ, ಮೆದುಳು ಬೇರೆ ಯಾವ ಜೀವಿಗಳಿಗಿಂತ ಹೆಚ್ಚಾಗಿ ಮನುಷ್ಯನಿಗೆ ಬಹಳ ಸಾಮಿಪ್ಯ ಹೊಂದಿವೆ. ನನ್ನನ್ನು ಹೆಚ್ಚು ಆಕರ್ಷಿಸಿದ ಸಂಗತಿಯೆಂದರೆ ಅವುಗಳ ಸಾಮಾಜಿಕ ವರ್ತನೆ; ತಮ್ಮ ಕುಟುಂಬದ ಸದಸ್ಯರ ನಡುವಿನ ಧೀರ್ಘಕಾಲದ ಸಂಬಂಧ, ಪರಸ್ಪರ ಸಹಾಯ ಹಾಗು ಬದುಕಿನ ಅಂತ್ಯದವರೆಗೂ ಇರುವ ಮಮತೆ. ಚಿಂಪಾಂಜಿಗಳು ಬೇಟೆಯಾಡುವಾಗ ಪರಸ್ಪರ ಸಹಕಾರ ನೀಡುತ್ತವೆ, ಅಹಾರವನ್ನು ಹಂಚಿಕೊಳ್ಳುತ್ತವೆ. ಮನುಷ್ಯನನ್ನು ಬಿಟ್ಟರೆ ಉಳಿದ ಪ್ರಾಣಿಗಳಿಗಿಂತ ಹೆಚ್ಚಾಗಿ ಅನೇಕ ವಸ್ತುಗಳನ್ನು ಉಪಕರಣಗಳಾಗಿ ಉಪಯೋಗಿಸುತ್ತವೆ. ಬಹುಷಃ ತುಂಬಾ ಆಕರ್ಷಿಸಿದ ಸಾಮ್ಯತೆಯೆಂದರೆ ಅವುಗಳ ಶಬ್ದರಾಹಿತ್ಯ ಸಂವಹನ ಕ್ರಿಯೆಯ ಸಂಜ್ಞೆಗಳು-ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಲು ಮುತ್ತಿಡುವುದು, ಕೈ ಅದುಮುವುದು, ಬೆನ್ನು ಸವರುವುದು ಇತ್ಯಾದಿ....

ವಿವರಣಾಕಾರ

ಚಿಂಪಾಂಜಿಗಳು ಮನುಷ್ಯನನ್ನು ತುಂಬ ನಿಕಟವಾಗಿ ಹೋಲುತ್ತವೆಯೆಂದು ಅನೇ ಸಂಶೋಧನೆಗಳು ಧೃಢಪಡಿಸಿವೆ. ಅದರ ಚಿಂಪ್‌ಗಳನ್ನು ಒಂಟಿಯಾಗಿ, ಪಂಜರಗಳ ಬಂಧಿಸಿಡಲಾಗುತ್ತಿದೆ. ಈ ಸಮಸ್ಯೆಯ ನಿವಾರಣೆಗೆ ಡಾ|| ಗುಡಾಲ್ ತಮ ಅನುಭವ ಹಾಗೂ ಸಾಧನೆಗಳನ್ನು ಮು ಪಾಗಿಟ್ಟಿದ್ದಾರೆ.

ಗುಡಾಲ್

ನನಗೆ ಆಘಾತ ತಂದ ವಿಷಯವೆಂದ ಚಿಂಪಾಂಜಿಗಳು ನಮ್ಮಂತೆಯೇ ಇವೆ ಎಂ ವಿಷಯ ತಿಳಿದಿದ್ದರೂ ಸಹ ಅವುಗಳನ ಅಮಾನವೀಯವಾಗಿ ನಡೆಸಿಕೊಳ್ಳುವುದು. ಆವು ಕೇವಲ ದೈಹಿಕವಾಗಿಯಷ್ಟೇ ಅಲ್ಲ ಬೌದ್ಧಿಕವಾಗಿ ಹಾಗೂ ಭಾವನಾತ್ಮಕವಾ ಮನುಷ್ಯರ ಸಾಮ್ಯತೆ ಹೊಂದಿವೆ.


ವಿವರಣೆಕಾರ

ಅವರ ಧೃಢ ಸಂಕಲ್ಪ, ಅವಿರತ ಯ ಹಾಗೂ ಧೈರ್ಯದ ಫಲವಾಗಿ ಡಾ|| ಜೇನ ಗುಡಾಲ್ ನಮ್ಮ ಸುತ್ತ ಮುತ್ತಲಿನ ಪ್ರಾ ಗಳ ಬಗ್ಗೆ ನಮ್ಮೊಳಗಿನ ಕರ್ತವ್ಯ ಹಾಗ ಜಾಗೃತಿಯನ್ನು ಹೆಚ್ಚಿಸಿದ್ದಾರೆ. ಅವರ ಅನೇಕ ಗ್ರಂಥಗಳನ್ನೂ ಲೇಖನಗಳನ್ ರಚಿಸಿವರು. ಅವುಗಳಲ್ಲಿ ಶ್ರೇಷ್ಠವಾದ ಗಳೆಂದರೆ 'ಮನುಷ್ಯನ ನೆರಳಿನಲ್ಲಿ' ಎಂ ಕೃತಿ. ಅವರಿಗೆ ಗೌರವ ಅನೇಕ ಪದವಿಗಳ ಪ್ರಶಸ್ತಿಗಳೂ ದೊರೆತಿವೆ. ಡಾ|| ಗುಡಾಲರ ಜಗತ್ತಿಗೆ ನೀಡಿದ ಕರೆಯಿಂದ "ವಿಜ್ಞಾ ಸಾರ್ವಜನಿಕರೊಡನೆ ಬೆರೆಯಬೇಕು

ಮನುಷ್ಯ ಹಾಗೂ ಇತರ ಜೀವಿಗಳೊಂದಿಗೆ ಸಾಮರಸ್ಯದಿಂದ ಬದುಕಬೇಕು".

ಗುಡಾಲ್

ಗೋಂಬ್‌ನಲ್ಲಿ ಚಿಂಪಾಂಜಿಗಳ ಬಗ್ಗೆ ನಡೆಸಿದೆ ಸಂಶೋಧನೆಯಲ್ಲಿ ದೃಢಪಟ್ಟ ಅಂಶವೆಂದರೆ ಮನುಷ್ಯ ಇತರ ಪ್ರಾಣಿ ಪ್ರಪಂಚಕ್ಕಿಂತ ಭಿನ್ನನಾದವನು ಎಂದು ತಿಳಿದ ವಿಚಾರ. ನಿಜ ನಾವು ಪೂರ್ಣವಾಗಿ ಭಿನ್ನರು, ನಾವು ಅದ್ವಿತೀಯರು, ಮಾತ ನಾಡುವ ಭಾಷೆಯನ್ನು ಸಮೃದ್ಧಗೊಳಿಸಿ ದವರು, ಭಾವನೆಗಳನ್ನು ಪರಸ್ಪರ ಹಂಚಿ ಕೊಳ್ಳ ಬಲ್ಲವರು. ಆದರೆ ಚಿಂಪ್‌ಗಳು ಈ ಯಾವುದನ್ನು ಮಾಡಿಕೊಳ್ಳಲಾರವು ನಮಗೆ ಉನ್ನತ ಬೌದ್ಧಿಕ ಮಟ್ಟವಿರುವುದರಿಂದ; ಇತರ ಪ್ರಾಣಿಗಳಿಗಿಂತ ಹೆಚ್ಚು ಸಮರ್ಥ ರಾಗಿರುವ ಚಿಂಪಾಂಜಿಗಳು ನಮ್ಮ ಮುಂದೆ ಕುಬ್ಜರಾಗಿಬಿಡುತ್ತವೆ. ಆದರೂ ನಮ್ಮ ಹಾಗೂ ಚಿಂಪಾಂಜಿಗಳ ನಡುವಿನ ವ್ಯತ್ಯಾಸ, ಅಂತರ ಬಹಳವಾಗಿಲ್ಲ. ಕೇವಲ ಅಲ್ಪ ಪ್ರಮಾಣದಲ್ಲಿದೆ. ಚಿಂಪಾಂಜಿಗಳನ್ನು ನಾವು ಇನ್ನೂ ಹೆಚ್ಚು ಅರ್ಥಮಾಡಿಕೊಳ್ಳಲು ನಮ್ಮ ಹಾಗೂ ಪ್ರಾಣಿಗಳ ನಡುವೆ ಇರುವ ವ್ಯತ್ಯಾಸದ ಬೇಲಿಯನ್ನು ನಾವು ಗೌಣ ವಾಗಿಸಿಕೊಳ್ಳಬೇಕು.



ಧರ್ಮ ಎಂದರೆ ಲೋಕ ಜೀವನವನ್ನು ಸಮಾಧಾನ ಸ್ಥಿತಿಯಲ್ಲಿರಿಸಿ ಕಾಪಾಡುವ ಒಂದು ನ್ಯಾಯ ವಿಧಾನ.

—ಭಗವದ್ಗೀತೆ

ಆಚಾರವೇ ಶ್ರೇಷ್ಠ ಎಂದು ಎಲ್ಲ ಶಾಸ್ತ್ರಗಳೂ ಹೇಳಿವೆ. ಆಚಾರದಿಂದ ಧರ್ಮ ಲಭಿಸುತ್ತದೆ; ಧರ್ಮದಿಂದ ಆಯುಸ್ಸು ಹೆಚ್ಚುತ್ತದೆ.

—ಮಹಾಭಾರತ

ಪ್ರತಿಭೆಯ ಹೊಳಹುಗಳು

ಸಿ. ಪೃಥ್ವೀರಾಜ ರವಿಶಂಕರ್
ದೊಡ್ಡಬೇಲಾಳು
ರಾವಂದೂರು ೫೭೧ ೧೦೮
ಪಿರಿಯಾಪಟ್ಟಣ ತಾಲೂಕು

ಬೆಳೆಯುವ ಸಿರಿಯನ್ನು ಮೊಳಕೆಯಲ್ಲಿ ನೋಡು !

ಕಾರ್ಲ್ ಫ್ರೆಡರಿಕ್ ಗಾಸ್ (1777–1855), ಜರ್ಮನಿಯ ಪ್ರಖ್ಯಾತ ಗಣಿತಜ್ಞ ಅವನಿನ್ನೂ ಶಾಲಾ ಬಾಲಕನಾಗಿದ್ದಾಗ ನಡೆದ ಒಂದು ಘಟನೆ. ಅಂದು ಗಣಿತದ ತರಗತಿಯಲ್ಲಿ ವಿದ್ಯಾರ್ಥಿಗಳೇಕೋ ಬಹಳ ಗದ್ದಲ ಮಾಡುತ್ತಿದ್ದರು. ಅವರನ್ನು ಒಂದಷ್ಟು ಕಾಲ ಸುಮ್ಮನಾಗಿಸಲು ಉಪಾಧ್ಯಾಯರು ಒಂದು ಉಪಾಯ ಹುಡುಕಿದರು. ಬೋರ್ಡ್ ಮೇಲೆ ದೀರ್ಘ ಸಂಕಲನದ ಲೆಕ್ಕ ಬರೆದು ಅವನ್ನು ಮಾಡುವಂತೆ ಎಲ್ಲ ವಿದ್ಯಾರ್ಥಿಗಳಿಗೂ ತಾಕೀತು ಮಾಡಿದರು. ಆ ಲೆಕ್ಕ ಈ ರೀತಿಯಿತ್ತು. $1+2+3+....98+99+100=?$ ಪಾಪ ಎಲ್ಲ ವಿದ್ಯಾರ್ಥಿಗಳೂ ತಲೆ ತಗ್ಗಿಸಿ ತಮ್ಮ ತಮ್ಮ ಸ್ಲೇಟ್‌ಗಳ ಮೇಲೆ ಮೊದಲಿನಿಂದ ಎರಡೆರಡು ಸಂಖ್ಯೆಗಳನ್ನು ಕೂಡುತ್ತಾ ಹೋದರು. ತರಗತಿಯಲ್ಲಿ ಒಂದಿನಿತೂ ಗದ್ದಲವಿಲ್ಲ, ಬಳಪಗಳ ಕರಕರ ಬಿಟ್ಟರೆ! ಶಾಂತರಾದ ಉಪಾಧ್ಯಾಯರು ತರಗತಿಯನ್ನು ಅವಲೋಕಿಸಿದರು. ಒಂದರೆಗಳಿಗೆ ತನ್ನ ಸ್ಲೇಟಿನ ಮೇಲೆ ಏನೋ ಲೆಕ್ಕಾಚಾರ ಮಾಡಿದ ಗಾಸ್, ಅನಂತರ ಸುಮ್ಮನಾಗಿ ಬಿಟ್ಟು, ತಲೆ ಎತ್ತಿ ಕುಳಿತ. ಉಪಾಧ್ಯಾಯರು ಅವನನ್ನು ಗಮನಿಸಿ. "ಏನಪ್ಪಾ ಗಾಸ್ ಸಂಕಲನ ಮಾಡಿಯಾಯಿತೆ ಅಥವಾ ಸಾಕಾಯಿತೆ?" ಎಂದು ಪ್ರಶ್ನಿಸಿದರು. "ಸಂಕಲನ ಮುಗಿಸಿ ಆಯಿತು ಸರ್!" ಎಂದು ಗಾಸ್ ಉತ್ತರಿಸಿದ. ಬೆರಗಾದ ಉಪಾಧ್ಯಾಯರು, ಅವನ ಬಳಿ ಸಾರಿ, ಅವನ ಸ್ಲೇಟಿನ ಮೇಲೆ ಸಂಕಲನದ ಲೆಕ್ಕವನ್ನು ವೀಕ್ಷಿಸಿದರು. ಅವನು 1 ರಿಂದ 100ರವರೆಗೆ ಕೂಡಿದ ಪರಿ ಈ ರೀತಿಯಿತ್ತು.

$$1+100=101$$
$$2+99=101$$
$$3+98=101$$

,, ,, ,,

,, ,, ,,

$50+51=101$ ಅಂದರೆ 101ರ ಒಟ್ಟು 50 ಜೊತೆಗಳು.

ಹಾಗಾದ ಮೇಲೆ $1+2+3+........ 98+99+100=101\times50=5050$ ಉಪಾಧ್ಯಾಯರು ಬಾಲಕನ **ಪ್ರತಿಭೆಗೆ** ಬೆರಗಾದರು!

ಾರು ಜಾಣರು ?

ಜೀವಿ ವಿಕಾಸದ ಪ್ರವರ್ತಕ ಚಾರ್ಲ್ಸ್ ರ್ವಿನ್ ಅಜ್ಜನಾಗಿದ್ದ ಕಾಲ. ಬಹುಶಃ ನನ ದೃಷ್ಟಿ ಸಾಮರ್ಥ್ಯ ಕೊಂಚ ುಸುಕಾಗಿದ್ದಿರಬೇಕು. ಇಂಥ ಮಂದ ಷ್ಟಿಯ, ಜೀವ ವಿಜ್ಞಾನಿ, ಅಜ್ಜನನ್ನ ೇಸ್ತ್ರ ಬೀಳಿಸಲು ತುಂಟ ಹುಡುಗರ ಂದು ಗುಂಪು ನಿಶ್ಚಯಿಸಿತು. ಅವರು ೋಟಕ್ಕೆ ಹೋಗಿ ಮಿಡತೆ, ದುಂಬಿ, ಟ್ಟೆ, ತೊಪ್ಪೆಹುಳು ಇತ್ಯಾದಿ ವಿವಿಧ ೀಟಗಳನ್ನು ಸೆರೆ ಹಿಡಿದು ಅವುಗಳನ್ನು ಯಿಸಿದರು. ಸರಿ ಯಾವುದೋ ಒಂದು ೀಟದ ಕೈಗಳು, ಮತ್ತೊಂದರ ಕಾಲುಗಳು ುಗುದೊಂದರ ರೆಕ್ಕೆಗಳು, ಮತ್ತೆ ನ್ನಾವುದೋ ಒಂದರ ದೇಹ, ರೆಕ್ಕೆ ತ್ಯಾದಿಗಳನ್ನೆಲ್ಲಾ ಬಹಳ ಜಾಣ್ಮೆ ಮತ್ತು ಾಣಾಕ್ಷತೆಯಿಂದ ಜೋಡಿಸಿ, ಸೃಷ್ಟಿ ುಲ್ಲೇ ಇಲ್ಲದಂಥ ಒಂದು ವಿಚಿತ್ರ ಕೀಟ ನ್ನು ನಿರ್ಮಿಸಿದರು. ಅದನ್ನು ಬಹಳ ಾಗರೂಕತೆಯಿಂದ ಒಂದು ಎಲೆಯ ೋಲಿಟ್ಟು ಡಾರ್ವಿನನ ಬಳಿ ತೆಗೆದು ಕೊಂಡು ಹೋದರು. "ಅಜ್ಜಾ ಅಜ್ಜಾ ನೋಡಿ ಎಷ್ಟು ವಿಚಿತ್ರವಾದ ಕೀಟ ನಮ್ಮ ತೋಟದಲ್ಲಿ ಸಿಕ್ಕಿದೆ! ದಯವಿಟ್ಟು ಇದನ್ನು ಪರೀಕ್ಷೆ ಮಾಡಿ, ಇದರ ಕುಲ ಮತ್ತು ಜಾತಿಯನ್ನು ತಿಳಿಸಿಕೊಡಿ" ಎಂದರು. ಡಾರ್ವಿನ್ ಅದನ್ನು ಅಂಗೈಯಲ್ಲಿ ತೆಗೆದು ಕೊಂಡು ಹತ್ತಿರಕ್ಕೆ ಹಿಡಿದು ಒಂದರೆಘಳಿಗೆ ಸೂಕ್ಷ್ಮವಾಗಿ ಪರಿಶೀಲಿಸಿದ. ಅನಂತರ ಅದನ್ನು ಹುಡುಗರ ಕೈಗೆ ಕೊಡುತ್ತಾ, 'ಏನು? ಈ ಕೀಟವನ್ನು ನೀವು ಹಿಡಿದಾಗ ಅದು "ಹಮ್‌ಮಮ್...." ಎಂದು ಶಬ್ದ ಮಾಡುತ್ತಿತ್ತೆ?" ಎಂದು ಕೇಳಿದನು. ಹುಡುಗರು ಆತುರದಿಂದ, "ಹೌದೌದು!" ಎಂದರು. ಆಗ ಡಾರ್ವಿನ್, "ಹಾಗಾದ ಮೇಲೆ ಇದು ಹಮ್‌ಬಗ್ (ಮೋಸದ ಮೊಟ್ಟೆ!)!" ಎಂದು ಬಿಟ್ಟ, ತುಂಟು ಹುಡುಗರು ಬೇಸ್ತೋ ಬೇಸ್ತು! ಈಗ ಗಹಗಹಿಸುವ ಸರದಿ ಘಾಟಿ ಮುದಿ ಅಜ್ಜನದು!

(ಸಾಧಾರ)

ಧರ್ಮದಿಂದ ಸಂಪತ್ತು, ಸುಖ ಲಭಿಸುತ್ತದೆ. ಎಲ್ಲ ಇಷ್ಟಾರ್ಥಗಳೂ ಲಭಿಸುವುದು ಧರ್ಮದಿಂದಲೇ. ಆದ್ದರಿಂದ ಧರ್ಮವೇ ಪ್ರಪಂಚದಲ್ಲಿ ಶ್ರೇಷ್ಠವಾದುದು.

—ರಾಮಾಯಣ

ಪ್ರಾಣಿಗಳನ್ನು ಹಿಂಸಿಸುವವನು ಪೂಜ್ಯನಲ್ಲ. ಎಲ್ಲಾ ಪ್ರಾಣಿಗಳನ್ನೂ ಪ್ರೀತಿಸಿ, ಅಹಿಂಸೆಯನ್ನು ಆಚರಿಸುವವನೇ ಪೂಜ್ಯನು.

—ಬುದ್ಧ

ನಾವು ಮತ್ತು ನಮ್ಮ ವೃದ್ಧರು

ಎನ್. ಆರ್. ಪಾಟೀಲ್
ಸಾರ್ಟಿಂಗ್ ಕಛೇರಿ
ಆರ್.ಎಂ.ಎಸ್. ಹೊಸಪೇಟೆ—೫೮೩೨೦೧

ಹಿರಿಯರಿಗೆ ಹಿರಿಯನ್ನು ಕಿರಿಯರಿಗೆ ಕಿರಿಯನ್ನು
ನೆರೆಗಡ್ಡದ ಮುದುಕರ। ಕಂಡರ
ತಲೆಬಾಗಿ ನಡೆಯೋ ನನಕಂದ ॥

ಜನಪದ ತಾಯಿಯೊಬ್ಬಳು ತನ್ನ ಬೆಳೆಯುವ ಬಾಲನಿಗೆ ಹೇಳಿದ ಬುದ್ಧಿ ಮಾತಿದು. ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಗುರು–ಹಿರಿಯರಿಗೆ ಗೌರವ ಕೊಡುವ, ಪಾಠವನ್ನು ಕಲಿಸುತ್ತ ಬಂದ ಪರಂಪರೆ ನಮ್ಮದು. "ಮಾತೃದೇವೋಭವ ಪಿತೃದೇವೋ...." ಎನ್ನುತ್ತ ಹೆತ್ತವರನ್ನು ದೇವರನ್ನಾಗಿ ಕಾಣುತ್ತ ಬಂದಿರುವ ನಮ್ಮ ಸಂಸ್ಕೃತಿ. ವೃದ್ಧರಿಗೆ 'ಪೂರ್ವಜರು' ಎಂಬ ಪಟ್ಟಕಟ್ಟಿ ಪೂಜೆಗೈಯುತ್ತ ಬಂದಿದೆ. ಹೆತ್ತವರ ಸೇವೆಯಲ್ಲಿಯೇ ಬದುಕಿನ ಸಾರ್ಥಕತೆ ಕಂಡುಕೊಂಡ ಶ್ರವಣಕುಮಾರ, ಪಿತೃವಾಕ್ಯವನ್ನು ಪರಿಪಾಲಿಸಿದ ರಾಮ, ಮಾತೃ ಹೇಳಿಕೆಗೆ ಪ್ರತಿಯಾಡದೇ ದ್ರೌಪದಿಯನ್ನು ತನ್ನ ನಾಲ್ಕು ಜನ ಅಣ್ಣ-ತಮ್ಮಂದಿರಿಗೂ ಹೆಂಡತಿಯನ್ನಾಗಿಸಿದ ಅರ್ಜುನ.... ಇವರೆಲ್ಲರೂ ನಮ್ಮ ಸಂಸ್ಕೃತಿಯಲ್ಲಿ ವೃದ್ಧರ ಸ್ಥಾನಮಾನವನ್ನು ಶ್ರೇಷ್ಠಮಟ್ಟಕ್ಕೇರಿಸಿದ ಸತ್ಪುತ್ರರು. ಹೆತ್ತವರ ಸೇವೆಯನ್ನು ಮಾಡುವುದರಿಂದ ಸ್ವರ್ಗವೇ ನಮ್ಮದಾಗುತ್ತದೆ ಎಂದ ಸರ್ವಜ್ಞ ಹೀಗೆ ಹೇಳುತ್ತಾನೆ—

ತಂದೆತಾಯಿಗಳನು ಘನ। ದಿಂದ ವಂದಿಸುವಂಗ
ಬಂದ ಕುತ್ತುಗಳು ಬಯಲಾಗಿ, ಸ್ವರ್ಗವದು।
ಮುಂದೆ ಬಂದಕ್ಕು ಸರ್ವಜ್ಞ ॥

ಹೌದು! ನಮ್ಮ ಸಂಸ್ಕೃತಿಯಲ್ಲಿ, ವೃದ
ರಿಗೆ, ಗುರುಹಿರಿಯರಿಗೆ ಗೌರವದ ಸ್ಥಾ
ವಿದೆ. ಆದರೆ ವಿದೇಶೀ ಮೌಲ್ಯಗಳಿಂ
ಮೋಹಿತರಾದ ನಾವಿಂದು ಈ ಪರಂಪರೆಯ
ಮೌಲ್ಯವನ್ನೇ ಮರೆಯುತ್ತಿದ್ದೇವೆ
"ದುಡ್ಡಿದ್ದವರಿಗೆ ಮಾತ್ರ ಬೆಲೆ" ಎಂ
ಹೊಸ ಆಮದಿತ ಇಂದಿನ ಸಿದ್ಧಾಂತ. ಹಿಂ
ವೃದ್ಧರು ಸಮಾಜಕ್ಕೆ ಹೊರೆಯಾಗಿರಲಿಲ್ಲ
ಅವರು ಕುಟುಂಬಕ್ಕೆ ಹಿರಿಯರಾಗಿ
ಮಾರ್ಗದರ್ಶಕರಾಗಿ, ಅನುಭವಿಯಾ
ಅನಿವಾರ್ಯವೆನಿಸಿದ್ದರು. ಅದು ಸಂಯುಕ್
ಕುಟುಂಬಗಳ ಕಾಲ. ಈ ಕೌಟುಂಬಿ
ಪ್ರಶ್ನೆಗಳಲ್ಲಿ ಹಿರಿಯರ ನಿರ್ಣಯಗಳೇ ಕೊ
ಯಾಗಿದ್ದವು. ಆದರೆ ಇದು ವಿಭ
ಕುಟುಂಬಗಳ ಕಾಲ. ಗಂಡ-ಹೆಂಡ
ಒಂದೆರಡು ಮಕ್ಕಳನ್ನೊಳಗೊಂ
ಕುಟುಂಬಗಳಲ್ಲಿ ವೃದ್ಧ ತಂದೆ-ತಾಯಿಗಳ
ಸ್ಥಾನವಿಲ್ಲದಾಗಿದೆ. ಒಂದೇ ಊರಿನಲ್ಲಿದ್ದರ
ವೃದ್ಧ ತಂದೆ-ತಾಯಿಯರನ್ನು ಅವ
ಪಾಡಿಗೆ ಬಿಟ್ಟು ತರುಣ ದಂಪತಿಗ
ಪ್ರತ್ಯೇಕವಾಗುವ ಪ್ರವೃತ್ತಿ ಹೆಚ್ಚಾಗಿ ಬ
ದಿದೆ. ಮಕ್ಕಳ ಸಹಾಯ-ಸಹಕಾರ ದೂ

ಯುವ ವೃದ್ಧರು ಹತಾಶರಾಗಿ ಬಳಲುತ್ತಿದ್ದಾರೆ. ಇದು ಇಂದು ಭಾರತಕ್ಕೇ ಸೀಮಿತವಾದ ಸಮಸ್ಯೆಯಲ್ಲ. ಜಾಗತಿಕ ಸಮಸ್ಯೆಯಾಗಿ ಬೆಳೆದಿದೆ. ಮುಂದುವರೆದ ದೇಶಗಳಲ್ಲಂತೂ ವೃದ್ಧರ ಅವಸ್ಥೆ ತುಂಬ ಕರುಣಾಜನಕವಾಗಿದೆ. ಈ ಸಾಮಾಜಿಕ ಸಮಸ್ಯೆಯತ್ತ ಜಗತ್ತಿನ ರಾಷ್ಟ್ರಗಳ ಗಮನ ಸೆಳೆಯಲು ಹಾಗೂ ವೃದ್ಧರಿಗೊಂದು ನೆಮ್ಮದಿಯ ಬಾಳು ನೀಡಲು ಪ್ರಯತ್ನಿಸಲೆಂದೇ ವಿಶ್ವಸಂಸ್ಥೆಯು ೧೯೯೯ ನೇ ವರ್ಷವನ್ನು "ಅಂತಾರಾಷ್ಟ್ರೀಯ ವೃದ್ಧರ ವರ್ಷ"ವೆಂದು ಘೋಷಿಸಿದೆ. ವೃದ್ಧರಿಗೆ ಸ್ವಾವಲಂಬನೆ, ಸ್ವಾತಂತ್ರ್ಯ ಮತ್ತು ಆತ್ಮಗೌರವ ದೊರಕಿಸಿಕೊಡುವ ನಿಟ್ಟಿನಲ್ಲಿ ವಿಶ್ವಸಂಸ್ಥೆ ಈ ಅವಧಿಯಲ್ಲಿ ತನ್ನೊಂದಿಗೆ ಜಗತ್ತಿನ ರಾಷ್ಟ್ರಗಳನ್ನು ಕಾರ್ಯಪ್ರವೃತ್ತಗೊಳಿಸಲು ಉದ್ದೇಶಿಸಿದೆ.

ಜನಸಂಖ್ಯೆ ಏರಿದಂತೆ, ವೈದ್ಯಕೀಯ ಸೌಲಭ್ಯಗಳು ದೊರಕಿದಂತೆ ವೃದ್ಧರ ಸಂಖ್ಯೆಯೂ ಹೆಚ್ಚಳವಾಗುತ್ತದೆ. ಅಂಕಿ-ಸಂಖ್ಯೆಗಳ ಪ್ರಕಾರ ೧೯೬೧ ರಲ್ಲಿ ಭಾರತದಲ್ಲಿ ೨೫.೬ ದಶಲಕ್ಷ ಜನ ವೃದ್ಧರಿದ್ದರು. ಈ ಸಂಖ್ಯೆ ೨೦೬೧ ರಲ್ಲಿ ೩೪೦ ದಶಲಕ್ಷ ಮೀರಲಿದೆ ಎಂದು ಅಂದಾಜಿಸಲಾಗಿದೆ. ವಿಶ್ವದ ಒಟ್ಟು ವೃದ್ಧರಲ್ಲಿ ಶೇಕಡಾ ೫೮ ರಷ್ಟು ವೃದ್ಧರು ಏಷ್ಯಾ ಖಂಡದಲ್ಲೇ ಇದ್ದಾರೆಂದು ಅಂದಾಜಿಸಲಾಗಿದೆ. ಭಾರತದಲ್ಲೀಗ ೭೦ ಮಿಲಿಯನ್ ವೃದ್ಧರಿದ್ದು ಇವರಲ್ಲಿ ೩೪ ಮಿಲಿಯನ್ ಮುದುಕಿಯರು! ಈ ಮುದುಕಿಯರಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ವಿಧವೆಯರು!!

ವೃದ್ಧರು ತಮ್ಮ ಬಾಲ್ಯ-ಯೌವನ ಕಾಲದಲ್ಲಿ ಪಾದರಸದಂತೆ ಹರಿದಾಡಿದವರು; ರಾಜ-ರಾಣಿಯರಂತೆ ಮೆರೆದವರು. ಕಾಲದ ಗತಿಗೆ ಸಿಕ್ಕು ಮುಪ್ಪಡರಿ ಈಗ ಅವರು ಅಪ್ಪ-ಅಮ್ಮಂದಿರಾಗಿ, ಅತ್ತೆ-ಮಾವಂದಿರಾಗಿ, ಅಜ್ಜ-ಅಜ್ಜಿಯರಾಗಿ ಅಸಹಾಯಕ ಬಾಳಿಗೆ ತಮ್ಮನ್ನು ನೂಕಿಕೊಂಡಿರುತ್ತಾರೆ. ವ್ಯಕ್ತಿಯೊಬ್ಬ ವೃದ್ಧಾವಸ್ಥೆಗೆ ಕಾಲಿಟ್ಟಾಗ ಸಾಮಾನ್ಯವಾಗಿ ಅವನನ್ನು ಕಾಡುವ ಭಾವನೆಗಳು-ತನಗಿನ್ನು ವಯಸ್ಸಾಯಿತು: ತಾನಿನ್ನು ಆರ್ಥಿಕವಾಗಿಯೂ ಮೊದಲಿನಷ್ಟು ಸಬಲನಲ್ಲ; ಮನೆ ಮಂದಿ ತನ್ನನ್ನು ಮುದುಕನೆಂದು, ಕೈಲಾಗದವನೆಂದು ಅಲಕ್ಷ್ಯ ಮಾಡುತ್ತಾರೆ. ತಾನು ಯಾವುದಕ್ಕೂ ಉಪಯೋಗವಿಲ್ಲದವನು ಎಂಬ ಕೀಳರಿಮೆ ಬೆಳೆಸಿಕೊಳ್ಳುತ್ತಾರೆ. ಈ ಭಾವನೆಯ ಬೆನ್ನ ಮೇಲೆ ಸವಾರಿ ಮಾಡುವ ವೃದ್ಧರು ಮನೆಯಲ್ಲಿ ಸಣ್ಣ-ಪುಟ್ಟ ಕಾರಣಗಳಿಗೂ ಜಗಳ ಕಾಯುತ್ತಾರೆ; ಮನಶ್ಶಾಂತಿ ಕಳೆದುಕೊಳ್ಳುತ್ತಾರೆ. ಇದು ಅತಿಯಾದಂತೆ ಕುಟುಂಬದ ಸದಸ್ಯರ ದೃಷ್ಟಿಯಲ್ಲಿ ಕೀಳಾಗುತ್ತಾರೆ. ಹೆಚ್ಚಿನ ಯಜಮಾನಿಕೆ ತೋರಿಸಲು ಹೋಗಿ ತಾತ್ಸಾರಕ್ಕೆ ಗುರಿಯಾಗುತ್ತಾರೆ.

ವೃದ್ಧರು, ಅಜೀರ್ಣತೆ, ಆಮ್ಲೀಯತೆ, ರಕ್ತದೊತ್ತಡ, ಕಣ್ಣಿನಪೊರೆ, ಹೃದಯ ದೌರ್ಬಲ್ಯ, ಮೂತ್ರಪಿಂಡಗಳ ವಿಫಲತೆ, ಸೊಂಟ, ಮೊಳಕಾಲುಗಳ ನೋವು— ಇತ್ಯಾದಿ ತೊಂದರೆಗಳಿಂದ ಬಳಲುತ್ತಾರೆ. ಮುಪ್ಪಾವಸ್ಥೆ ಕೈಕಾಲುಗಳಲ್ಲಿಯ ಶಕ್ತಿಯನ್ನು ಕಸಿದುಕೊಂಡಿರುತ್ತದೆ, ಈ ಸಮಯದಲ್ಲಿ ಅವರಿಗೆ ಸರಿಹೊಂದುವ ಪೌಷ್ಟಿಕ ಆಹಾರದ ಹಾಗೂ ವೈದ್ಯಕೀಯ

ನೆರವಿನ ಅವಶ್ಯಕತೆ ಇದೆ. ಆದರೆ ತಂತಮ್ಮ ಅಸ್ತಿತ್ವಕ್ಕಾಗಿಯೇ ಹೆಣಗುತ್ತಿರುವ ಬಡಯುವ ಸಮುದಾಯ ಹೆತ್ತವರಿಗೆ ಹೊಟ್ಟೆ ತುಂಬ ಊಟ ಹಾಕುವುದೇ ತ್ರಾಸದಾಯಕವಾಗಿರುವಾಗ ಪೌಷ್ಟಿಕ ಆಹಾರ ಮತ್ತು ವೈದ್ಯಕೀಯ ನೆರವು ದೂರದ ಮಾತೇ ಹೌದು.

'ಒಂಟಿತನ' ವೃದ್ಧರನ್ನು ಕಾಡುವ ಒಂದು ಸಮಸ್ಯೆ. ಇದು ಯಂತ್ರ ಯುಗ. ಇಂದಿನ ಕಾಲದಲ್ಲಿ ಕೆಲಸಕ್ಕೆ ಬಾರದ ಈ ವೃದ್ಧರನ್ನು ಯಾರು ಲಕ್ಷಿಸುತ್ತಾರೆ. ಹಿಂದಿನ ಕಾಲಗಲ್ಲಿ ವೃದ್ಧರಿಗೆ ಮೊಮ್ಮಕ್ಕಳ ಜೊತೆಯಾದರೂ ಸಿಗುತ್ತಿತ್ತು. ಆದರೆ ಎರಡು ವರ್ಷದ ಮಕ್ಕಳನ್ನೂ ನರ್ಸರಿ ಶಾಲೆಗಳಿಗೆ ಅಟ್ಟುತ್ತಿರುವ ಇಂದಿನ ದಿನಗಳಲ್ಲಿ ವೃದ್ಧರು ಮೊಮ್ಮಕ್ಕಳೊಂದಿಗೆ ಕಾಲ ಕಳೆಯುವ ಭಾಗ್ಯವನ್ನೂ ಕಳಕೊಂಡಿದ್ದಾರೆ.

ವೃದ್ಧರ ಉದ್ಧಾರಕ್ಕಾಗಿ ಈಗಾಗಲೇ ಜಗತ್ತಿನಾದ್ಯಂತ ಸಾಕಷ್ಟು ಪ್ರಯತ್ನಗಳು ನಡೆದಿವೆ. ವಿಶ್ವಸಂಸ್ಥೆ ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾಗಿದ್ದು, ವೃದ್ಧರ ಸಮಸ್ಯೆಗಳನ್ನು ಎಲ್ಲರಿಗೂ ಅನುಭವಪೂರ್ವಕರಿಗೆ ತಿಳಿಸುವ ಉದ್ದೇಶದಿಂದ "ಸೊಸಾಯಿಟಿ ಫಾರ್ ಆಲ್ ಏಜಸ್" ಎಂಬ ಸಂಸ್ಥೆಯೊಂದನ್ನು ಅಸ್ತಿತ್ವಕ್ಕೆ ತಂದಿದೆ. ಇಲ್ಲಿ ಆಬಾಲವೃದ್ಧರು ಜೊತೆ ಜೊತೆಯಾಗಿ ಬದುಕುತ್ತಿದ್ದು ಸಮಸ್ಯೆಗಳನ್ನು ಪರಸ್ಪರರು ಅರಿತುಕೊಳ್ಳಲು ಸಹಕಾರಿಯಾಗಿದೆ. ವಿಶ್ವದ ಯುವ ಜನಾಂಗಕ್ಕೆ ವೃದ್ಧರ ಸಮಸ್ಯೆಗಳನ್ನು ಪ್ರಾಯೋಗಿಕವಾಗಿ ತಿಳಿಸುವುದೇ ಈ ಸಂಸ್ಥೆಯ ಮುಖ್ಯ ಧ್ಯೇಯವಾಗಿದೆ.

ಜಗತ್ತಿನ ರಾಷ್ಟ್ರಗಳು ವೃದ್ಧರಿಗೆ ನೆಮ್ಮದಿಯ ಬಾಳು ನೀಡಲು ಅನೇಕ ಯೋಜನೆಗಳನ್ನು ಹಾಕಿಕೊಂಡಿವೆ. ಈ ದಿಶೆಯಲ್ಲಿ ಭಾರತವೂ ಹಿಂದೆ ಬಿದ್ದಿಲ್ಲ. ಸರಕಾರವು "ವೃದ್ಧರಿಗೆ ಮತ್ತು ವಿಧವೆಯರಿಗೆ ಆರ್ಥಿಕ ಸಹಾಯ ಮಾಡುವ ಮಸೂದೆ "[ಫೈನಾನ್ಶಿಯಲ್ ರಿಲೀಫ್ ಟು ಓಲ್ಡ್ ಪರ್ಸನ್ಸ್ ಅಂಡ್ ವಿಡೋಸ್ ಬಿಲ್]" ಯನ್ನು ಜಾರಿಗೆ ತಂದಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ತಮ್ಮದೆಲ್ಲವನ್ನೂ ಕಳಕೊಂಡು ಇನ್ನೂ ಜೀವಂತವಾಗಿರುವ ವೃದ್ಧರಿಗೆ ಸರಕಾರ ಸಹಾಯ ಧನ ನೀಡುತ್ತಲಿದೆ. ಪ್ರತಿ ತಿಂಗಳು ವೃದ್ಧರಿಗೆ ವೃದ್ಧಾಪ್ಯ ವೇತನದ ಹೆಸರಿನಲ್ಲಿ ಆರ್ಥಿಕ ಸಹಾಯ ಮಾಡುತ್ತಲಿದೆ.

ವೃದ್ಧರ ಸಮಸ್ಯೆಗಳಿಗೆ ಸರಕಾರದ ನೆರವಿನಲ್ಲಿ ಕಲ್ಯಾಣ ಸಚಿವಾಲಯವು ತೀವ್ರವಾಗಿ ಸ್ಪಂದಿಸುತ್ತಲಿದೆ. ಇದು ಕೆಲವು ಸರ್ಕಾರೇತರ ಸಂಸ್ಥೆಗಳೊಂದಿಗೆ ಸೇರಿಕೊಂಡು ವೃದ್ಧರಿಗಾಗಿ 'ಪರಿಹಾರ ನಿಧಿ' ಸಂಗ್ರಹಿಸಿದೆ. ಈ ರೀತಿ ಸಂಗ್ರಹಿಸಿದ ನಿಧಿಯಿಂದ ೧೪೦೦ ಯೋಜನೆಗಳನ್ನು ಗ್ರಾಮಮಟ್ಟದಲ್ಲಿ ಹಮ್ಮಿಕೊಂಡು ಅಸಹಾಯಕ–ವೃದ್ಧರಿಗೆ ಸಹಾಯ ಹಸ್ತ ನೀಡುತ್ತಿದೆ. ವೃದ್ಧರ ಸಮಸ್ಯೆಗಳನ್ನು ದೂರಾಗಿಸುವಲ್ಲಿ ಕೆಲವು ಸರ್ಕಾರೇತರ ಸಂಸ್ಥೆಗಳೂ ಕಾರ್ಯಪ್ರವೃತ್ತವಾಗಿರುವುದು ನಿಜಕ್ಕೂ ಸಂತಸದ ಸಂಗತಿ.

ಜೀವನವಿಡೀ ದುಡಿದು ನಿವೃತ್ತರಾದವರ, ಮುಪ್ಪಾದವರ ಬಾಳು ಹೆಚ್ಚಿನ ಸಂದರ್ಭಗಳಲ್ಲಿ ಹೀನಾಯಮಾನವಾಗಿರುತ್ತದೆ. "ಅನಾಯಾಸೇನ ಮರಣಂ, ವಿನಾದೈನ್ಯೇನ

ಜೀವನಂ" ಎಂಬುದು ವೃದ್ಧಾವಸ್ಥೆಯಲ್ಲಿ ಸುಳ್ಳಾಗುತ್ತದೆ. ಶಕ್ತಿ ಇದ್ದಾಗ ಸಮಾಜಕ್ಕಾಗಿ, ದೇಶಕ್ಕಾಗಿ ದುಡಿದವರ ಗತಿ ನಿರ್ಗತಿಯಾಗುತ್ತಿರುವುದು ನಡೆದೇ ಇದೆ. ಜೀವನದ ಅನುಭವಗಳನ್ನು ಹೀರಿ ಪಕ್ವವಾದ, ಸಮಾಜಕ್ಕೆ ಉಪಯುಕ್ತವಾಗಿ ಇನ್ನೂ ಬಾಳಬೇಕು ಎಂದು ಆಶೆ ಪಡುವ ವಯಸ್ಸಾದವರಿಗೆ ಒಂದು ರಾಷ್ಟ್ರೀಯ ನೀತಿಯನ್ನು ರೂಪಿಸುವ ಆವಶ್ಯಕತೆ ಎಂದಿಗಿಂತಲೂ ಇಂದು ಹೆಚ್ಚಿದೆ.

ಜೀವನ ವೃಕ್ಷದಲ್ಲಿ ಬೇರುಗಳು ನಿತ್ಯ ನಿರಂತರ ಪರಂಪರೆಯ ಮೂಲಗಳು, ಕಾಂಡ ವರ್ತಮಾನ ಬದುಕು, ಶಾಖೋಪಶಾಖೆಗಳು ವಿವಿಧ ಸಾಂಸ್ಕೃತಿಕ ವಿಕಾಸಗಳು, ಚಿಗುರು ಮತ್ತು ಹೂಗಳು ಎಳೆ ಕುಡಿಗಳು, ಪಕ್ವಫಲಗಳಾದರೋ ವೃದ್ಧರು.

ಜೀವನದ ಪಕ್ವಫಲ ವೃದ್ಧಾಪ್ಯವದರಲಿದೆ
ಭಾವಸಂಸ್ಕಾರ, ನವಮಾರ್ಗ ಪ್ರವರ್ತಕತೆ
ಸಾವಧಾನತೆ, ಯುಗಾಂತರಗಳನುಭವ ದೀಪ್ತಿ
ಸಾವಿನಲಿ ಕಾಣೊ ಪರಿಪೂರ್ಣತೆಯ ಆತ್ರಿಸೂನು



ಯಾವ ಪ್ರಾಣಿಯನ್ನು ಹಿಂಸಿಸದಿರುವುದು; ಬೇರೆಯವರ ವಸ್ತುಗಳನ್ನು ಕದಿಯದಿರುವುದು ಮತ್ತು ಸುಳ್ಳು ಹೇಳದಿರುವುದು-ಇವೇ ಸತ್ಪುರುಷರು ಆಚರಿಸಬೇಕಾದ ಧರ್ಮಗಳು.

—ಮಹಾವೀರ

ಹೆಚ್ಚು ನೋಡುವುದು, ಹೆಚ್ಚು ಅನುಭವಿಸುವುದು ಮತ್ತು ಹೆಚ್ಚು ಓದುವುದು ಇವು ಜ್ಞಾನಾರ್ಜನೆಯ ಮೂರು ಮೆಟ್ಟಿಲುಗಳು.

—ಕ್ಯಾಥರೆಲ್

ಪುಸ್ತಕ ಪರಿಚಯ

ಆಲ್ಬರ್ಟ್ ಐನ್‌ಸ್ಟೈನ್-ಮಾನವೀಯ ಮುಖ : ಅನುವಾದ : ಜಿ. ಟಿ. ನಾರಾಯಣರಾವ್, ಪುಟಗಳು ೧೮೪, ಬೆಲೆ ೨೭ ರೂ. ಪ್ರಕಾಶಕರು : ಅತ್ರಿ ಬುಕ್ ಸೆಂಟರ್, ೪-ಶರಾವತಿ ಕಟ್ಟಡ, ಬಲ್ಮಠ, ಮಂಗಳೂರು.

ಮೂಲ ಪುಸ್ತಕ ಆಂಗ್ಲ ಭಾಷೆಯಲ್ಲಿದೆ. ಮೂಲ ಸಂಪಾದಕರು ಹಾಫ್‌ಮನ್ ಹಾಗು ಹೆಲೆನ್ ಡೂಕಾಸ್. ಹಾಫ್‌ಮನ್‌ರು ಐನ್‌ಸ್ಟೈನ್‌ರ ಸಹಯೋಗಿಗಳಾಗಿದ್ದರು. ಡೂಕಾಸ್ ಅವರು ಐನ್‌ಸ್ಟೈನ್‌ರ ಕಾರ್ಯದರ್ಶಿಯಾಗಿದ್ದರು. ಐನ್‌ಸ್ಟೈನ್‌ರ ಕಡತ, ಬರಹ ಹಾಗೂ ಓಲೆಗಳನ್ನು ತಿರುವಿ ಹಾಕಿದಾಗ ಐನ್‌ಸ್ಟೈನ್ ಜಗತ್ತಿನ ಜನರಿಗೆ ಒಬ್ಬ ವಿಜ್ಞಾನಿ ಮಾತ್ರವಲ್ಲ, ಅವರು ಶ್ರೇಷ್ಠ ವ್ಯಕ್ತಿ ಕೂಡ ಎಂಬ ಸಂಗತಿ ಗೊತ್ತಾಗಲೆಂದು ಈ ಪುಸ್ತಕವನ್ನು ಅವರು ಸಂಪಾದಿಸಿದರು(೧೯೭೯). ಇದೊಂದು ಅತಿ ಮಹತ್ವದ ಗ್ರಂಥ. ಇಂಥ ಗ್ರಂಥದ ಪರಿಚಯ ಕನ್ನಡಿಗರಿಗೂ ಸಿಗುವಂತೆ ಮಾಡುವದು, ನಾರಾಯಣರಾವ್ ಅವರ ಪ್ರಯತ್ನ.

ಪುಸ್ತಕದಲ್ಲಿ ಒಟ್ಟು ೧೮೪ ಪುಟಗಳಿದ್ದು ಪುಸ್ತಕದ ಬೆಲೆ ಕೇವಲ ರೂ. ೨೭. ಮಂಗಳೂರಿನ ಅತ್ರಿ ಬುಕ್ ಸೆಂಟರ್, ೪ ಶರಾವತಿ ಕಟ್ಟಡ ಬಲ್ಮಠ. ಅವರು ಪುಸ್ತಕವನ್ನು ೧೯೯೮ ರಲ್ಲಿ ಪ್ರಕಟಗೊಳಿಸಿದ್ದಾರೆ. (ತೃತೀಯ ಮುದ್ರಣ)

ಪುಸ್ತಕದಲ್ಲಿ ಐದು ಭಾಗಗಳಿವೆ. ಮುಖ್ಯ ವಾದ ಭಾಗ 'ಮಾನವೀಯ ಮುಖ'. ಉಳಿದವುಗಳೆಂದರೆ (i) ಐನ್‌ಸ್ಟೈನ್‌ರ ಸಂಕ್ಷಿಪ್ತ ಜೀವನ ಚರಿತ್ರೆ, (ii) ಅನುವಾದ ಕರ ಟಿಪ್ಪಣಿಗಳು (iii) ಮಾನವೀಯ ಮುಖದ ಮುಖ್ಯ ತಿರುಳು (iv) ವಿಷಯ ಪುಟಸೂಚಿ.

'ಮಾನವೀಯ ಮುಖ' ವಿಭಾಗದಲ್ಲಿ ಐನ್‌ಸ್ಟೈನ್‌ರ ಪ್ರಾರಂಭ ಜೀವನದಿಂದ ಅವರ ಕೊನೆಯ ದಿನದವರೆಗೆ ನಡೆದ ಹಲವಾರು ಘಟನೆಗಳ ವಿವರಗಳಿವೆ. ಅವುಗಳನ್ನೆಲ್ಲ ಸವಿಯುತ್ತ ಹೋದಂತೆ ಮನದಟ್ಟಾಗುವ ಸಂಗತಿ ಎಂದರೆ 'ಎಳೆ ಆಲದ ಬಾಳು ಸರಳವಲ್ಲ-ಸಲೀಸೂ ಅಲ್ಲ'. ಕ್ರಮೇಣ ಇದೇ ಮಾತು "ಪ್ರತಿಭೆಯ ಪಥ ಕೆಂಕಾಪಿನಪತ್ತಲ ಹಾಸಿರುವ ಹಾದಿ ಅಲ್ಲ" ಎಂಬ ತಿಳುವಳಿಕೆಗೆ ಬರುತ್ತದೆ. ಶ್ರೇಷ್ಠ ವ್ಯಕ್ತಿಗಳ ಜೀವನ ಎಷ್ಟು ಕಠಿನ ಎಂಬುದು ಹೊಳೆಯುವದು.

ಈ ಭಾಗದಲ್ಲಿ ಓದುಗನು ಅಲ್ಲಲ್ಲಿ ಗಡಿಬಿ ಯಲ್ಲಿ ಸಿಗುವನು. ಒಂದೊಂದು ಕಡೆ

ನಾರಾಯಣರಾವ್ ಅವರ ಭಾಷೆ ಕ್ಲಿಷ್ಟ ವೆನಿಸುತ್ತದೆ. ಉದಾಹರಣೆಗೆ "....ಇಬ್ಬರು ಮುಗಳಂದಿರಿದ್ದರು".

"ಕ್ಷಣ ಕ್ಷಣ ಅವನ ಮುಸುಡಿನ ರಂಗೇರು ತ್ತಿತ್ತು ಸಿಟ್ಟನಿಂದ." ಅರ್ಥ ಸರಿಯಾಗಿಯೇ ಆಗುತ್ತದೆ. ಆದರೆ ಅದರ ಓಟ ಸರಳ ವೆನಿಸುವದಿಲ್ಲ. ಇದು ಅವರವರ ಪ್ರಾದೇಶಿಕತೆಯ ನೆರಳೆನಿಸಬಹುದು. ಇಲ್ಲವೆ ಮೂಲಕೃತಿಯನ್ನು ಸರಿಯಾಗಿ ಭಾಷಾಂತರಿಸುವಾಗ ಬರುವ ತೊಡಕೂ ಆಗಿರಬಹುದು.

ನಾರಾಯಣರಾವ್ ಅವರ ನಿಜವಾದ ಸುಲಲಿತ-ಭಾಷೆಯನ್ನು ಅದರ ಸವಿಯನ್ನು ನೋಡುವದು ಸಂಕ್ಷಿಪ್ತ ಜೀವನ ಚರಿತ್ರೆಯಲ್ಲಿ. ಪುಸ್ತಕದ ಈ ಭಾಗ ಕಾವ್ಯದಂತೆ ಅನಿಸುತ್ತದೆ. ನಾರಾಯಣರಾವ್ ಅವರ ಭಾಷೆಯ ಮೇಲಿನ ಪ್ರಭುತ್ವವನ್ನು ಇಲ್ಲಿ ಮೆಚ್ಚಬೇಕಾಗುತ್ತದೆ. ಹೇಗೊ-ಯಾಕೋ-ನಾರಾಯಣರಾವ್ ಅವರಿಗೆ ಕಾವ್ಯ ಕನ್ನಿಕೆ ಬಹಳ ಆತ್ಮೀಯಳು. ಇದೊಂದು ಅವರಿಗೆ ಸಿಕ್ಕ ಕೊಡುಗೆ ಎಂದೇ ಹೇಳಬೇಕಾಗುತ್ತದೆ. ವಿಜ್ಞಾನದ ವಿಷಯವನ್ನು ಕನ್ನಡಿಸುವದೇ ಒಂದು ತಿಣುಕಾಟವೆನ್ನುವ ಹಿರಿಯರೆಲ್ಲಿ ? ನಾರಾಯಣರಾವ್ ಅದೇ ವಿಷಯವನ್ನು ಕಾವ್ಯದ ರೂಪದಲ್ಲಿ ಛಟ್ಟಿ ಇಳಿಸುತ್ತಾರೆ. ನಿಜವಾಗಿಯೂ ಅವರು ವಿಜ್ಞಾನದ ಕೆಲ ವಿಷಯುಗಳನ್ನು ಕಾವ್ಯ ರೂಪದಲ್ಲಿ ಹೊರತರಬೇಕು ಎಂಬುದು ನನ್ನ ವಿನಂತಿ. ಈ ಭಾಗವು ಬಹಳ ರಸವತ್ತಾಗಿದೆ.

ನಂತರ ಬರುವ ಅನುಬಂಧಗಳು ಒಂದು ರೀತಿಯಿಂದ ಹೊರ ಲೇಖಕರಿಗೆ ತರಬೇತಿ ಗ್ರಂಥವೆನಿಸುತ್ತವೆ. ಭಾಷಾಂತರ ಮಾಡುವ ಲೇಖಕ ಹೇಗೆ ತಯಾರಿ ಮಾಡಿಕೊಳ್ಳಬೇಕು, ಹೇಗೆ ಭಾಷಾಂತರವನ್ನು ಸಮರ್ಥವಾಗಿ ಮಾಡಬೇಕೆನ್ನುವ ದಾರಿ ಇಲ್ಲಿ ಕಾಣುತ್ತದೆ. ಎಲ್ಲ ಭಾಷಾಂತರ ಕೃತಿಗಳೂ ಈ ರೀತಿಯಲ್ಲಿ ಪ್ರಕಟವಾದರೆ ಎಷ್ಟು ಒಳ್ಳೆಯದು ಅನಿಸುವದು.

ವಿಷಯ–ಪುಟಸೂಚಿ ಪುಸ್ತಕಗಳಿಗೆ ಬಹು ಮುಖ್ಯ. ಆದರೆ ಎಷ್ಟು ವಿಜ್ಞಾನ ಪುಸ್ತಕಗಳು ಈ ಸಾಹಸ ಮಾಡಿವೆ ಎಂಬುದನ್ನು ವಿಚಾರಿಸಬೇಕಾಗುತ್ತದೆ. ನಾರಾಯಣರಾವ್ ಅವರು ಇದನ್ನು ಮಾಡಿ ತೋರಿಸಿ ಅಭಿನಂದನೆಗೆ ಅರ್ಹರೆನಿಸಿದ್ದಾರೆ.

ಈ ಪುಸ್ತಕವನ್ನು ವಿದ್ಯಾರ್ಥಿಗಳು ಯುವಕರು, ಅಧ್ಯಾಪಕರು ಅವಶ್ಯವಾಗಿ ಓದಬೇಕು. ಓದಿ ತಿಳಿದುಕೊಳ್ಳಬೇಕೆನ್ನುವವರಿಗೆ ಕೇವಲ ಐನ್‌ಸ್ಟೈನ್‌ರ ಜೀವನದ ಘಟನೆಗಳು ಅಲ್ಲದೆ ಹಲವಾರು ಕ್ಲಿಷ್ಟ ವಿಜ್ಞಾನ ಸಂಗತಿಗಳೂ ತಿಳಿಯುತ್ತವೆ. ವಿಜ್ಞಾನಿಗಳ ಜೀವನ ಚರಿತ್ರೆ ಬರೆಯುವ ಸಾಹಸ ಮಾಡುವವರಿಗೆ ಇದೊಂದು ಉತ್ತಮ ಮಾರ್ಗದರ್ಶಿ.

ಐನ್‌ಸ್ಟೈನ್ ಒಬ್ಬ ಶ್ರೇಷ್ಠ ವಿಜ್ಞಾನಿ, ಶ್ರೇಷ್ಠ ಅಧ್ಯಾಪಕ, ಶ್ರೇಷ್ಠ ಕವಿ, ಶ್ರೇಷ್ಠ ಮಾರ್ಗದರ್ಶಿ, ಶ್ರೇಷ್ಠ ಮಾನವ ಎಂಬುದು ಸ್ಪಷ್ಟವಾಗುತ್ತದೆ.

ಡಾ|| ಸ. ಜ. ನಾಗಲೋಟಿಮಠ

೨೫ 'ಶಾಂತಾ' ಬಸವ ಕಾಲನಿ

ಬೆಳಗಾವಿ-೫೯೦ ೦೧೦

ಕಲ್ಲಂಗಡಿ ಹಣ್ಣಿನ ಕಂಕಸಂ (ಜನಪದ ಕಥೆಗಳ ಸಂಕಲನ) **ಜೀನಹಳ್ಳಿ** ಸಿದ್ಧಲಿಂಗಪ್ಪ (ಸಂ.) ಪ್ರೇಮ ಪ್ರಕಾಶನ, ಜೀನಹಳ್ಳಿ, ಶಿವಮೊಗ್ಗ, ೧೯೯೮ ಬೆಲೆ ೪೦ ರೂಗಳು ಪುಟಗಳು ೨೦೦.

ಇದು ಜೀನಹಳ್ಳಿ ಸಿದ್ಧಲಿಂಗಪ್ಪನವರ ಈಚಿನ ಜನಪದ ಕಥಾ ಸಂಕಲನ. ಸರ್ಕಾರಿ ನೌಕರರಾಗಿದ್ದು ಪ್ರವೃತ್ತಿಯಲ್ಲಿ ಜಾನಪದವನ್ನು ಆಯ್ದುಕೊಂಡಿರುವ ಇವರು ಕನ್ನಡ ಜಾನಪದ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ. ಜನಪದ ಗಣಿತ ಇವರ ಮೆಚ್ಚಿನ ಕ್ಷೇತ್ರ. ಮಕ್ಕಳ ಹಾಡು, ಜನಪದ ಕಥೆಗಳ ಕ್ಷೇತ್ರಗಳಲ್ಲೂ ಸಿದ್ಧಲಿಂಗಪ್ಪ ಗಮನಾರ್ಹವಾಗಿ ದುಡಿದಿದ್ದಾರೆ. ಸಿದ್ಧಲಿಂಗಪ್ಪನವರ ಇದುವರೆಗಿನ ಕಥಾಸಂಕಲನಗಳಿಗಿಂತ (ನಾಲ್ಕು) ಈ ಸಂಕಲನ ಭಿನ್ನವಾದುದು.

ಜಾನಪದ ಒಂದು ಜಾಗತಿಕ ಅಧ್ಯಯನ ವಿಷಯ. ಮನುಜನ ಸಹಜ ಬದುಕಿನ ಸಮಸ್ತವನ್ನೂ ಅದು ಒಳಗೊಳ್ಳುತ್ತದೆ. ಜಾನಪದ ಅಧ್ಯಯನಕ್ಕೆ ಐದು ಶತಮಾನಗಳಿಗಿಂತ ಹೆಚ್ಚಿನ ಇತಿಹಾಸ ದೊರಕುವುದಿಲ್ಲ. ಜಾನಪದವನ್ನು ಇಂದಿನ ದಿನಗಳಲ್ಲಿ ವೈಜ್ಞಾನಿಕವಾಗಿ ಅಧ್ಯಯನ ಮಾಡಲಾಗುತ್ತಿದೆಯಾದರೂ, ಈ ಅಧ್ಯಯನ ಶಿಸ್ತು ಬೆಳೆದದ್ದೇ ಹವ್ಯಾಸಿ ಅಧ್ಯಯನಕಾರರಿಂದ. ಇಡೀ ಜಾಗತಿಕ ಮಟ್ಟದಲ್ಲಿ ಎಲ್ಲಿ ನೋಡಿದರೂ ಜಾನಪದದ ಅಧ್ಯಯನ ಹವ್ಯಾಸಿಗಳಿಂದ ಆರಂಭವಾಗಿರುವ ಅಂಶ ಸೋಜಿಗವನ್ನುಂಟುಮಾಡುತ್ತದೆ. ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನಗಳಲ್ಲಿ ನಡೆದ ಅಧ್ಯಯನಗಳು, ಅದರಲ್ಲೂ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದ ರಾಚನಿಕ ವಿಶ್ಲೇಷಣೆ ಮತ್ತು ಅರವತ್ತರ ದಶಕದಿಂದ ಈಚೆಗಿನ ವೈಜ್ಞಾನಿಕ ದೃಷ್ಟಿಕೋನಗಳು ಜಗತ್ತಿನ ಇನ್ನೂರ ನಲವತ್ತು ರಾಷ್ಟ್ರಗಳಲ್ಲಿ ಜಾನಪದ ಅಧ್ಯಯನ ತೀವ್ರವಾಗಿ ನಡೆಯುವಂತೆ ಮಾಡಿವೆ. ಇವೆಲ್ಲವುಗಳಿಂದ ಹಳ್ಳಿ ಹೈದನ ಮಾತು, ನಂಬಿಕೆಗಳು ಅತ್ಯಾಧುನಿಕ ಕಂಪ್ಯೂಟರ್‌ನಲ್ಲಿ ಕುಳಿತು ಅಧ್ಯಯನಕ್ಕೊಳಗಾಗುತ್ತಿವೆ. ಈ ಬೆಳವಣಿಗೆ ಹಿಂದೆ ಪ್ರವೃತ್ತಿಯಾಗಿದ್ದ ಜಾನಪದವನ್ನು ಒಂದು ವೃತ್ತಿಯಾಗುವಂತೆ ಮಾರ್ಪಡಿಸಿದೆ. ಪರಿಸ್ಥಿತಿ ಹೀಗಿದ್ದರೂ ಜಾನಪದವನ್ನು ವೃತ್ತಿಯಾಗಿ ಅಂಟಿಸಿಕೊಂಡವರ ಸಂಖ್ಯೆಯೇನೂ ಕಡಿಮೆಯಾಗಿಲ್ಲ. ವಾಸ್ತವವಾಗಿ ಪ್ರವೃತ್ತಿ ಜಾನಪದ ತಜ್ಞರ ಹಾಗೂ ವೃತ್ತಿ ಜಾನಪದ ತಜ್ಞರ ನಡುವೆ ಇಂದು ಪೈಪೋಟಿ ಇದೆ. ಇದು ಆರೋಗ್ಯ ಕರವಾದ ಬೆಳವಣಿಗೆ.

ಈ ಹಿನ್ನೆಲೆಯಲ್ಲಿ ಜೀನಹಳ್ಳಿಯವರ ಸಂಕಲನವನ್ನು ಪರಿಶೀಲಿಸಬಹುದು. ಈ ಸಂಕಲನದಲ್ಲಿ ಒಟ್ಟು ನಲವತ್ತು ಕಥೆಗಳಿವೆ. ಶಿವಮೊಗ್ಗದ ಹೊನ್ನಾಳಿ, ಹರಿಹರದ ಗುಡ್ಡದ ಬೇವಿನಹಳ್ಳಿ, ಭದ್ರಾವತಿಯ ಕಣಕಟ್ಟೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಇವು ಸಂಗ್ರಹಗೊಂಡಿವೆ. ಆರು ಜನ ವಕ್ತೃಗಳಿಂದ ಇವನ್ನು ಸಂಗ್ರಹಿಸಲಾಗಿದೆ. ದೀರ್ಘವಾದ ಪ್ರಸ್ತಾವನೆಯನ್ನು ಬರೆದು ಜನಪದ ಕಥೆಗಳ ಬಗ್ಗೆ ಒಂದು ನೋಟವನ್ನು ಕೊಡಲು ಪ್ರಯತ್ನಿಸಲಾಗಿದೆ. ಪರಿವಿಡಿಯಲ್ಲಿ ಸಂಗ್ರಹಿತ ಕಥೆಗಳ ವಿಂಗಡಣೆಯಿಲ್ಲ

ವಾದರೂ, ಪ್ರಸ್ತಾವನೆಯಲ್ಲಿ ಹಾಸ್ಯಕಥೆಗಳು, ಅತಿಮಾನುಷ ಕಥೆಗಳು, ಬುದ್ಧಿವಂತಿಕೆ ಕಥೆಗಳು, ನೀತಿಕಥೆಗಳು, ಪ್ರಾಣಿಕಥೆಗಳು, ಪೌರಾಣಿಕ, ವಾಸ್ತವಿಕ, ಮಾಂತ್ರಿಕ ಕಥೆಗಳೆಂದು ಸಂಕಲನಕಾರರು ವಿಭಜನೆ ಮಾಡಿಕೊಂಡಿದ್ದಾರೆ. ಜನಪದ ಕಥೆಗಳ ವಿಂಗಡನೆಯ ಬಗ್ಗೆ ಎಲ್.ಆರ್. ಹೆಗಡೆ, ಜೀ. ಶಂ. ಪ. ಮೊದಲಾದವರು ಸಾಕಷ್ಟು ಚರ್ಚಿಸಿದ್ದಾರೆ, ಜೀ. ಶಂ. ಪ. ಅವರು ಒಂದು ಮಾದರಿಯನ್ನೂ ನೀಡಿದ್ದಾರೆ.(ಕನ್ನಡ ಜನಪದಕಥೆಗಳು ೧೯೬೩). ಪ್ರಸ್ತುತ ಸಂಕಲನ ಈ ಮಾದರಿಯನ್ನಾದರೂ ಅನುಸರಿಸಬಹುದಾಗಿತ್ತು. ವಾಸ್ತವಿಕ ಕತೆಯ ಅಡಿಯಲ್ಲಿ ಹೇಳಿರುವ 'ಅತಿ ದೊಡ್ಡ ರಾಜ, ಶತದಡ್ಡ ಮಂತ್ರಿ' ಕಥೆಯು 'ದಡ್ಡರ ಕತೆ'ಯಡಿ ಹೇಳಬಹುದಾದುದು. ಇದೇ ಕತೆಯ ಆಧಾರದಲ್ಲಿ ಬೇಂದ್ರೆಯವರ 'ಸಾಯೋ ಆಟ' ನಾಟಕವೂ ಇದೆ. ವಾಸ್ತವಿಕ ಕತೆಗಳ ಲಕ್ಷಣಕ್ಕೆ ಇದು ಹೊಂದುವುದಿಲ್ಲ.

ಸಂಕಲನಕ್ಕೆ ಪೂರಕವಾಗಿ ಕೊಟ್ಟಿರುವ ಕ್ಷೇತ್ರ ಕಾರ್ಯವಿವರ, ಪದವಿವರ ಸೂಚಿ, ಅರ್ಥಕೋಶ, ಶಬ್ದಸೂಚಿಗಳು ಅರ್ಥಪೂರ್ಣವೂ, ಸಂದರ್ಭೋಚಿತವೂ ಆಗಿವೆ. ಆಶಯ ಸೂಚಿಯನ್ನು ಪರಿಷ್ಕರಿಸಬೇಕಿತ್ತು. ಕೆಲವು ಹೇಳಿಕೆಗಳನ್ನೂ ಆಶಯಗಳಲ್ಲಿ ಗುರುತಿಸಲಾಗಿದೆ. ಇದು ದೋಷಪೂರ್ಣವಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಈ ಸಂಕಲನವನ್ನು ಕುರಿತು ಬರೆದಿರುವ ಮಾತುಗಳ ಬಗ್ಗೆ ಹೇಳಬೇಕು. ಇದು ಸಂಕಲನದ ಗುಣಾತ್ಮಕ ಅಂಶಗಳನ್ನು ವಸ್ತುನಿಷ್ಠವಾಗಿ ನೋಡಿದೆ. ಕೊನೆಯಲ್ಲಿ ಹೇಳಿದ 'ಅಪೂರ್ಣತ್ವವೇ ಜನಪದ ಕಥೆ, ಕಥನಗೀತೆಗಳ ಲಕ್ಷಣ. ಅಪೂರ್ಣತ್ವ ಪಡೆದ ಕಥೆಗಳು ಕಥನಗೀತೆಗಳು ಬೇರೆ ಬೇರೆ ಆಶಯಗಳನ್ನು ಮುಖ್ಯ ಕಥೆಗೆ ಹೊಂದಿಸಿಕೊಂಡು ಬೆಳೆಯುತ್ತದೆ' ಎಂದು ಹೇಳಿರುವ ಕೃಷ್ಣಮೂರ್ತಿ ಹನೂರು ಅವರ ಹೊಸ ವ್ಯಾಖ್ಯೆಯು ಅಪರಿಕಲ್ಪನಾತ್ಮಕ ಹೇಳಿಕೆಯಾಗಿದೆ.

ಜಾನಪದ ಇಂದು ಒಂದು ಪ್ರತ್ಯೇಕ ಶಿಸ್ತುಬದ್ಧ ಅಧ್ಯಯನವಾಗಿ ಬೆಳೆದಿದೆ. ಈ ಶಿಸ್ತಿಗೆ ಅದರದೇ ಆದ ಪರಿಕಲ್ಪನೆ ಇದೆ. ವೃತ್ತಿಪರರಾಗಲಿ, ಪ್ರವೃತ್ತಿ ಪರರಾಗಲಿ ಈ ಪರಿಕಲ್ಪನೆಯಿಂದ ಹೊರತಾದ 'ವ್ಯಾಖ್ಯೆ ನೀಡುವಾಗ ಜಾನಪದವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿವೃಂದ ಗೊಂದಲಕ್ಕೊಳಗಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಮರೆಯಬಾರದು.

ಪ್ರಸ್ತುತ ಸಂಕಲನ ಒಂದು ಸ್ತುತ್ಯ ಪ್ರಯತ್ನ ಎಂಬುದರಲ್ಲಿ ಅನುಮಾನವಿಲ್ಲ. ವಯೋಭೇದವಿಲ್ಲದಂತೆ ಓದಿಸಿಕೊಳ್ಳುವ ಶಕ್ತಿ ಇದಕ್ಕಿದೆ. ಕನ್ನಡ ಜಾನಪದದ ಅಧ್ಯಯನದಲ್ಲಿ ಈಚೆಗೆ ವಿಶ್ಲೇಷಣಾತ್ಮಕ ದೃಷ್ಟಿಕೋನವೇ ಕಂಡುಬರುತ್ತಿದೆ. ಜಾನಪದ ಸಾಮಗ್ರಿಯನ್ನು ಹೀಗೆ ಸಂಗ್ರಹಿಸಿ ಅನಾವರಣಗೊಳಿಸಬೇಕಾದ ಜರೂರು ಇದ್ದೇ ಇದೆ ಎಂಬುದನ್ನು ಈ ಸಂಕಲನ ಮತ್ತೆ ಮತ್ತೆ ಜ್ಞಾಪಿಸುತ್ತದೆ.

ಶ್ರೀಪಾದಭಟ್
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೬

Statement of ownership and other particulars about the monthly periodical **"PUSTAKA PRAPANCHA"** as required to be published under rule 8 of the Registration of Newspapers (Central) Rules 1956.

FORM IV

Place of Publication	—	Karnataka State Adult Education Council. 5/1 Vinoba Road, Manasagangothri, Mysore-6
Periodicity	—	Monthly
Printer's Name	—	Papanna
Nationality & Address	—	Indian Karnataka State Adult Education Council Printing Press 5/1 Vinoba Road, Manasagangothri, Mysore-6
Publisher's Name & Address	—	R. L. Mangalore General Secretary Karnataka State Adult Education Council 5/1 Vinoba Road, Manasagangothri, Mysore-6
Nationality	—	Indian
Editor's Name	—	Chandrashekhararadhya
Nationality	—	Indian
Address	—	Karnataka State Adult Education Council 5/1 Vinoba Road, Manasagangothri, Mysore-6

I, the General Secretary hereby declare that the particulars given above are true to the best of my knowledge and belief.

R. L. Mangalore
General Secretary
KARNATAKA STATE ADULT EDUCATION COUNCIL
MYSORE

1 March 1999

ಡಿ. ವೀರೇಂದ್ರ ಹೆಗ್ಗಡೆಯವರು
ಶ್ರೀ ಧರ್ಮಸ್ಥಳ-574216
ಕರ್ನಾಟಕ

ದಿನಾಂಕ : 8-3-1999

ಶ್ರೀ ಕೋಣಂದೂರು ಲಿಂಗಪ್ಪರಿಗೆ

ನಿಮ್ಮ ಪತ್ರ ತಲುಪಿ ವಿಚಾರ ಅಭಿಪ್ರಾಯವಾಯಿತು. ನೀವು ಅಭಿಮಾನ ಪೂರ್ವಕ ಕಳುಹಿಸಿದ "ಪುಸ್ತಕ ಪ್ರಪಂಚ"ದ ಎರಡು ಪ್ರತಿಗಳು ತಲುಪಿವೆ. ವಿವಿಧ ವೈಚಾರಿಕ ಹಾಗೂ ಉಪಯುಕ್ತ ಲೇಖನಗಳೊಂದಿಗೆ ಸಂಚಿಕೆ ಉತ್ತಮ ವಾಗಿ ಮೂಡಿ ಬಂದಿದೆ. ಅಭಿನಂದನೆಗಳು.

ನಿಮ್ಮ ನೇತೃತ್ವದಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಎಲ್ಲ ಚಟುವಟಿಕೆಗಳು ಯಶಸ್ವಿಯಾಗುವಂತೆ ಶ್ರೀ ಮಂಜುನಾಥಸ್ವಾಮಿ ಹರಸಲೆಂದು ಪ್ರಾರ್ಥಿಸು ತ್ತೇನೆ.

ಇತಿ

(ಡಿ. ವೀರೇಂದ್ರ ಹೆಗ್ಗಡೆಯವರು)

Reg. No. KRNN-29
WPP 6

LICENCE No. 21
LICENCED TO POST WITH PAYMENT

ಮಾನ್ಯ ಚಂದಾದಾರರಲ್ಲಿ ಮನವಿ

ಪುಸ್ತಕ ಪ್ರಪಂಚ ಸದ್ಯದಲ್ಲೇ ಅರ್ಧಶತಮಾನ ದಾಟುತ್ತಿದ್ದು, ಓದುಗ ಬಂಧುಗ
ಅಭಿಮಾನ, ಲೇಖಕ ಬಳಗದ ಸಹಕಾರ, ಸಂಪಾದಕ ಮಂಡಳಿಯ ಮಾರ್ಗದರ್ಶ
ಈ ಸಾಧನೆಗೆ ಕಾರಣವಾಗಿದೆ.

ವೃದ್ಧಿಸುತ್ತಿರುವ ಓದುಗರ ಮನತಣಿಸಲು 'ಪುಸ್ತಕ ಪ್ರಪಂಚ"ವನ್ನು ಆಕರ್ಷ
ವಾಗಿ ಆಫ್ ಸೆಟ್‌ನಲ್ಲಿ ಮುದ್ರಿಸಲು ಉದ್ದೇಶಿಸಿದೆ. ಈ ಹಿನ್ನಲೆಯಲ್ಲಿ ಮುದ್ರ
ವೆಚ್ಚದ ಏರಿಕೆ, ಲೇಖಕರ ಗೌರವ ಸಂಭಾವನೆಯ ಹೆಚ್ಚಳ ಮುಂತಾದವನ
ಸರಿದೂಗಿಸಲು ಪುಸ್ತಕ ಪ್ರಪಂಚ ಚಂದಾ ಪರಿಷ್ಕಾರ ಅನಿವಾರ್ಯವಾಗಿದೆ. ಆದ್ದರಿಂ
ದಿನಾಂಕ ೧–೧–೧೯೯೯ ರಿಂದ ಈ ಕೆಳಕಂಡಂತೆ ಪರಿಷ್ಕರಿಸಿದೆ.

೧) **ವಾರ್ಷಿಕ ಚಂದಾ**	ರೂ. ೧೦೦–೦೦
೨) **ಆಜೀವ ಸದಸ್ಯತ್ವ ಚಂದಾ : ವ್ಯಕ್ತಿಗೆ**	ರೂ. ೬೦೦–೦೦
೩) **ಆಜೀವ ಸದಸ್ಯತ್ವ ಚಂದಾ : ಸಂಸ್ಥೆಗೆ**	ರೂ. ೯೦೦–೦೦

ಮೇಲ್ಕಂಡ ಪರಿಷ್ಕೃತ ದರದಲ್ಲಿ ಚಂದಾದಾರರಾಗಿ ಮಾನ್ಯ ಓದುಗರು ಹಿಂದಿನಂ
ಪತ್ರಿಕೆಯನ್ನು ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಡಿ.ಡಿ/ಎಂ.ಒ ಕಳುಹಿಸುವ ವಿಳಾಸ :

ದೂರವಾಣಿ : ೫೧೫೧೨೮
೫೧೫೮೨೮

ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿ
೫/೧ ವಿನೋಬಾ ರಸ್ತೆ
ಮಾನಸಗಂಗೋತ್ರಿ ಆವರಣ
ಮೈಸೂರು–೫೭೦ ೦೦೬

Edited by Chandrashekhararadhya Printed by Papann
Printed & Published by Karnataka State Adult Education Counci
5/1 Vinoba Road, Manasa Gangothri, Mysore-570 006.